
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 50 ಡಿಸೆಂಬರ್ 11, 2005 ಬೆಲೆ ರೂ. 3.00



ಹಾಂಗ್‌ಕಾಂಗ್ : WTO ಸಭೆ
ಒತ್ತಡಕ್ಕೆ ಭಾರತ ಮಣಿಯದಿರಲಿ



ಪಂಚಾಯತ್ ಚುನಾವಣೆ ವಿಧಾನಸಭಾ ಚುನಾವಣೆಗೆ ತಾಲೀಮು



ಬಿಜೆಪಿಯಲ್ಲೆಲ್ಲೆಲ್ಲೂ ಬಂಡಾಯದ ಬಾವುಟ

- ಮಾವೋವಾದಿಗಳ ಅರಾಜಕ ಹಿಂಸಾಚಾರ
- 'ಐರ್ಲೆಂಡ್ ವರ್ಕರ್ಸ್ ಪಾರ್ಟಿ' ಮೇಲೆ ಅಮೆರಿಕನ್ ಧಾಳಿ
- ಮಧ್ಯಮ ವರ್ಗದ ಜಂಜಡಗಳೇ ಅಮೃತಧಾರೆ



ಇತಿಹಾಸದ ಪುಟಗಳಿಂದ

ಭಾರತ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಧೀಮಂತ ಪಾತ್ರವಹಿಸಿದ ಕಮ್ಯುನಿಸ್ಟ್ ನೇತಾರರು ಹಲವರು. ಭಾರತ ದೇಶದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ವಸ್ತುನಿಷ್ಠ ಚರಿತ್ರೆಯನ್ನು ಬಯಸುವವರು ಈ ಆಂದೋಲನದಲ್ಲಿ ಕಮ್ಯೂನಿಸ್ಟ್ ಪಕ್ಷ, ಅದರ ಮುಖಂಡರು ವಹಿಸಿದ ಅಮೋಘ ಪಾತ್ರವನ್ನು - ಅವರು ನೀಡಿದ ಅಗಾಧ ಕೊಡುಗೆಯನ್ನು ಗುರುತಿಸದೇ ಇರುವುದು ಸಾಧ್ಯವೇ ಇಲ್ಲ. ವಾಸ್ತವಿಕವಾಗಿ ದೇಶದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಮೊತ್ತಮೊದಲು ಎತ್ತಿದ್ದೇ ಕಮ್ಯೂನಿಸ್ಟರು. ಕಾಂಗ್ರೆಸ್ ಆ ನಿರ್ಣಯವನ್ನು ಅಂಗೀಕರಿಸುವಂತೆ ಒತ್ತಡ ಹೇರಿದ್ದೂ ಕಮ್ಯೂನಿಸ್ಟರೇ ಎನ್ನುವುದು ಎಂಟು ದಶಕಗಳನ್ನು ಮೀರಿದ ಸುದೀರ್ಘ ಕ್ರಾಂತಿಕಾರಿ ಹೋರಾಟದ ಚರಿತ್ರೆ ಹೊಂದಿರುವ ಕಮ್ಯೂನಿಸ್ಟ್ ಚಳುವಳಿಗೆ ಹೆಮ್ಮೆಯ ವಿಷಯ.

ಇಂತಹ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರನ್ನು ಪರಿಚಯಿಸುವ ಲೇಖನ ಮಾಲೆಯ ಆರಂಭದಲ್ಲಿ ಸಿಪಿಐ(ಎಂ) ಪಕ್ಷದ ಹಿರಿಯ ನೇತಾರರಾದ ಕಾಂ. ಹರ್ಕಿಷನ್ ಸಿಂಗ್ ಸುರ್ಜಿತರ ಬಾಲ್ಯದ ಕ್ರಾಂತಿಕಾರಿ ಚಟುವಟಿಕೆಗಳ ಕುರಿತು ಲೇಖನ.


ಹರ್ಕಿಷನ್ ಸಿಂಗ್ ಸುರ್ಜಿತ್
ಕ್ರಾಂತಿಕಾರಿ ಚಟುವಟಿಕೆಗಳ ಬಾಲ್ಯ

ಹರ್‌ಕಿಶನ್ ಸಿಂಗ್ ಸುರ್ಜಿತ್‌ರವರು ಜನಿಸಿದ್ದು 1916 ಮಾರ್ಚ್ 23ರಂದು ಬಾಲ್ಯದಿಂದಲೇ ಮೋರ್ಚಾ, ಜಾಥಾಗಳ ಮಧ್ಯೆ ಸಂತನಂತೆ ಬಾನೆತ್ತರಕ್ಕೆ ಬೆಳೆದು ನಿಂತರು. ಸುರ್ಜಿತ್ ಅವರ ಅಜ್ಜ ಶ್ರೀಮಂತ ರೈತರಾಗಿದ್ದು ಹಲವು ವರ್ಷ ಆಸ್ಟ್ರೇಲಿಯಾದಲ್ಲಿ ಜೀವನೋಪಾಯಕ್ಕಾಗಿ ದುಡಿಮೆ ಮಾಡಿ ಭಾರತಕ್ಕೆ ಹಿಂದಿರುಗಿದ್ದರು. ಅಜ್ಜನಿಗೆ ಒಬ್ಬನೇ ಮಗನಾದ ಸುರ್ಜಿತ್‌ರ ತಂದೆ ಸೇನೆಯಲ್ಲಿ ಕೆಲಸ ಮಾಡುತ್ತಿದ್ದು ಪ್ರಥಮ ಮಹಾಯುದ್ಧ ಮುಗಿದ ನಂತರ ರಾಷ್ಟ್ರೀಯ ಚಳುವಳಿಗೆ ಧುಮುಕಿದರು. ಸುರ್ಜಿತ್ ತಂದೆ ಅಕಾಲಿ ಪಕ್ಷವನ್ನು ಸೇರಿದ್ದನ್ನು ವಿರೋಧಿಸಿದ ಅವರ ಅಜ್ಜ. ಸುರ್ಜಿತ್ ತಂದೆಯನ್ನು ಮನೆಯಿಂದ ಹೊರಹಾಕಿದರು. ಸ್ನೇಹಿತರು ಮತ್ತು ಸಂಬಂಧಿಕರ ಒತ್ತಡದಿಂದಷ್ಟೇ ಎರಡು ಎಕರೆ ಭೂಮಿಯನ್ನು ತಂದೆಗೆ ನೀಡಲು ಒಪ್ಪಿದರು. ಅವರ ಆರ್ಥಿಕ ಸ್ಥಿತಿ ತೀರಾ ದುಸ್ತರಗೊಂಡು ತಾಯಿ ಕಡೆಯ ಸಂಬಂಧಿಕರ ನೆರವಿಂದ ಕುಂಟುತ್ತಾ ಸಾಗಿತ್ತು. ಅಕಾಲಿ ಪಕ್ಷದಲ್ಲಿ ಜಲಂಧರ್ ಜಿಲ್ಲೆಯ ನಾಯಕನಾಗಿ ಅವರ ತಂದೆ ಹೊರಹೊಮ್ಮಿದ್ದರು. ಅಂದಿನ ದಿನಗಳಲ್ಲಿ ಬ್ರಿಟೀಷರ ತೀವ್ರ ದೌರ್ಜನ್ಯವನ್ನೆದುರಿಸಿ 500 ಅಕಾಲಿ ಸೇವಾಕರ್ತರ ತಂಡವು ಮುನ್ನುಗ್ಗಿ ಬಂಧನಕ್ಕೊಳಗಾಗುತ್ತಿತ್ತು. ಸುರ್ಜಿತ್‌ರ ತಾಯಿ ಅನಕ್ಷರರಾಗಿದ್ದು ಸಿಖ್‌ಯೇತರ ಕುಟುಂಬದವರಾಗಿದ್ದರೂ ಅವರು ಅಕಾಲಿ ಪಕ್ಷದ ಸ್ವಯಂ ಸೇವಕರಾಗಿ ಸೇರಲು ಅದೇನೂ ಅಡ್ಡಿಬರಲಿಲ್ಲ.

ಸುರ್ಜಿತರ ತಂದೆ, 8-10 ವರ್ಷವಿದ್ದಾಗಲೇ ಹಳ್ಳಿಯಿಂದ ಹಳ್ಳಿಗೆ ತೆರಳುತ್ತಿದ್ದ ಜಾಥಾಗಳಲ್ಲಿ ಆಹಾರದ ಏರ್ಪಾಡು ಮಾಡಲು ಸುರ್ಜಿತ್‌ರನ್ನು ಅವರ ತಾಯಿ ಜೊತೆಯಲ್ಲಿ ಕೊಂಡೊಯ್ಯುತ್ತಿದ್ದರು.

ಚಳುವಳಿ ಮತ್ತು ಹೋರಾಟಗಳಲ್ಲಿ ಮುಂಚೂಣಿಯಾಗಿ ಭಾಗವಹಿಸುತ್ತಿದ್ದ ಇವರ ತಂದೆ ತಾಯಿಯರಿಂದ ಹುಟ್ಟು ಹೋರಾಟದ ಕಿಡಿ ಇವರಲ್ಲೂ ಅಡಕವಾಗಿತ್ತೆಂದೇ ತೋರುತ್ತದೆ. 1924ರಲ್ಲಿ ಒಮ್ಮೆ ಪೊಲೀಸರ ತಂಡವೊಂದು ಸುರ್ಜಿತ್‌ರ ತಂದೆಯನ್ನು ಬಂಧಿಸಿ ಕ್ರಿಮಿನಲ್ ಕಾಯಿದೆಯಡಿ ಕೋರ್ಟಿನಲ್ಲಿ ದಾವಾ ಹೂಡಿ ಎರಡು ವರ್ಷಗಳ ಕಠಿಣ ಸಜೆ ವಿಧಿಸಿತು. ಅಂತಹ ಕಠಿಣ ಸಂದರ್ಭದಲ್ಲಿ ಅವರ ತಾಯಿ ಪ್ರದರ್ಶಿಸಿದ ಧೈರ್ಯ ಮತ್ತು ಗ್ರಾಮೀಣ ಜನತೆಯ ಪ್ರೋತ್ಸಾಹ ಅವರ ತಂದೆಯಲ್ಲಿ ಹೊಸ ಚೈತನ್ಯ ಮತ್ತು ಏಕಾಗ್ರತೆಯನ್ನು ಸೃಷ್ಟಿಸಿತು.

ಸುರ್ಜಿತ್ ಹುಟ್ಟು ಹೋರಾಟಗಾರರಾಗಿ ರೂಪುಗೊಳ್ಳಲು ಅವರ ಸುತ್ತಲಿನ ಪರಿಸರ ಹೋರಾಟ ಮತ್ತು ಚಳುವಳಿಗಳ ಗೂಡಾಗಿದ್ದದ್ದು ಮುಖ್ಯ ಕಾರಣ. ಅವರ ಹಳ್ಳಿಯಿಂದ ಮೂರು ಮೈಲಿ ದೂರದಲ್ಲಿರುವ ರೂರ್ಕಾ ಕಲಾನ್ ಎಂಬ ಗ್ರಾಮವು ತಾನು ಸ್ವತಂತ್ರವೆಂದು ಘೋಷಿಸಿಕೊಂಡಿತ್ತು. ಬಂಚಿತ್‌ಸಿಂಗ್ ಎಂಬ ಆ ಗ್ರಾಮ ಚುನಾಯಿಸಿ ಆರಿಸಿದ ಪಂಚಾಯತ್‌ನ ಮುಖ್ಯಸ್ಥನು ಆ ಗ್ರಾಮಕ್ಕೆ ಯಾವುದೇ ಪೊಲೀಸ್ ತಂಡ ಅಥವಾ ಸಶಸ್ತ್ರ ಸೇನೆಯು ಪ್ರವೇಶಿಸುವುದನ್ನು ತಡೆದಿದ್ದನು. ಈ ಘಟನೆಯು ಆ ಭಾಗದ ಪ್ರದೇಶದಲ್ಲಿ ಚಳುವಳಿಯ ಕಾವನ್ನು ಏರಿಸಿದ್ದು, ಬಂಚಿತ್ ಸಿಂಗ್‌ರನ್ನು ಬ್ರಿಟೀಷರು ಬಂಧಿಸಿದ ಕೂಡಲೇ ಅವರನ್ನು ರೂರ್ಕಾ ರಾಜ ಎಂದು ಕರೆಯಲಾಯಿತು. ಬಂಚಿತ್ ಸಿಂಗ್‌ರ ಬಂಧನವನ್ನು ವಿರೋಧಿಸಿ ಮಾಸ್ಟರ್ ಮೋಟಾಸಿಂಗ್ ಎಂಬುವವರು ದೊಡ್ಡ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದರು. ಸಣ್ಣ ವಯಸ್ಸಿನಲ್ಲಿ ತಾಯಿಯೊಡನೆ ಈ ಸಭೆಯಲ್ಲಿ ಭಾಗವಹಿಸಿದ ಸುರ್ಜಿತ್‌ರಿಗೆ ಅದೊಂದು ಬಹುದೊಡ್ಡ ಸ್ಫೂರ್ತಿಯ ಸೆಲೆಯಾಯಿತು. ಯಾವುದೇ ಶಸ್ತ್ರಾಸ್ತ್ರ ಅಥವಾ ಆಯುಧಗಳಿಲ್ಲದೆ ಚಳುವಳಿಯಲ್ಲಿ ಸ್ವಯಂ ಪ್ರೇರಣೆಯಿಂದ ಭಾಗವಹಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಶಕ್ತಿಯನ್ನು ಅನಕ್ಷರರಾದ ಆದರೆ



ಸಾಮೂಹಿಕ ಜನತಾ ಶಕ್ತಿಯು ಮುಖಾಮುಖಿಯಾಗಿ ಎದುರಿಸಿ ತನ್ನ ಜನತಾ ಶಕ್ತಿಯನ್ನು ಜಳಪಿಸಿದ್ದು ಸುರ್ಜಿತ್‌ರಲ್ಲಿ ರೋಮಾಂಚನವನ್ನುಂಟು ಮಾಡಿತ್ತು.

ಸುರ್ಜಿತ್‌ರ ತಂದೆಯು ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಿದ್ದರಿಂದ ಅವರು ಪೊಲೀಸರಿಂದ ಆಗಾಗ್ಗೆ ಬಂಧನಕ್ಕೊಳಗಾಗಿ ಒಂದಷ್ಟು ತಿಂಗಳು ಸೆರೆವಾಸ ಅನುಭವಿಸಿದ ನಂತರ ಬಿಡುಗಡೆಯಾಗುತ್ತಿದ್ದರು. ಅವರ ಕುಟುಂಬಕ್ಕೆ ಒಂದು ಚಿಕ್ಕಳತೆಯ ಭೂಮಿ ಬಿಟ್ಟರೆ ಮತ್ತೇನೂ ಇಲ್ಲದ್ದರಿಂದ ಅವರು ಅತೀವ ಆರ್ಥಿಕ ಸಂಕಷ್ಟಗಳನ್ನು ನಿರಂತರವಾಗಿ ಎದುರಿಸಬೇಕಾಗಿತ್ತು. ಸೆರೆವಾಸದಿಂದ ಬಿಡುಗಡೆಗೊಂಡು ಹೊರಬಂದ ನಂತರ ಇದ್ದಷ್ಟು ಭೂಮಿಯನ್ನೂ ಸಹ ಒತ್ತೆಯಿಡುವಂಥಹ ಶೋಚನೀಯ ಸ್ಥಿತಿಯನ್ನು ಅವರು ತಲುಪಿದರು. ಇಂಥಹ ದಿಕ್ಕೆಟ್ಟ ಸ್ಥಿತಿಯಲ್ಲಿ ಅವರ ತಂದೆ 1929ರಲ್ಲಿ ಅಮೇರಿಕಾಗೆ ಕಾನೂನುಬಾಹಿರ ಪಾಸ್‌ಪೋರ್ಟ್ ಪಡೆದುಕೊಂಡು ಹೋದರಾದರೂ ನಂತರದ 5 ವರ್ಷಗಳಲ್ಲಿ ಅವರಿಂದ ಯಾವುದೇ ಹಣ ಬಾರದಂಥಹ ಕಾಲವಾಗಿತ್ತದು. ಕಷ್ಟಕರವಾದ ಬದುಕನ್ನೆದುರಿಸಿ ಸಂಕಷ್ಟದ ಪಾತಾಳದಿಂದ ಅವರ ತಾಯಿ ಎದ್ದುನಿಂತು ಜೀವನ ಸಾಗಿಸಬೇಕಿತ್ತು. ತಾಯಿಯ ಪೋಷಕರು ಸಹಾಯಹಸ್ತವನ್ನು ಚಾಚಿ ನೆರವಾದರು.

1930ರಲ್ಲಿ ಒಂದೊಮ್ಮೆ ಸುರ್ಜಿತ್ ಶಾಲಾ ಬಾಲಕನಾಗಿದ್ದಾಗ ಕಾನೂನು ಬಾಹಿರ ಪಕ್ಷವೊಂದಕ್ಕೆ ಸಾರ್ವಜನಿಕ ಸಭೆ ನಡೆಸಲು ಸಿದ್ದತೆ ಮಾಡುವಲ್ಲಿ ನೆರವಾಗಿದ್ದರು. ಮರುದಿನ ಅವರು ಶಾಲೆಗೆ ಹೋದಾಗ ಪೊಲೀಸರು ಕಾದು ಕುಳಿತಿದ್ದರು. ಸುರ್ಜಿತ್‌ರವರು ಬಾಲಕನಾಗಿರುವುದರಿಂದ ಅವನನ್ನು ಬಂಧಿಸಬಾರದೆಂದು ಅವರ ತಂದೆಯ ಸ್ನೇಹಿತ ಮಾಸ್ತರರು ಗೋಗರೆದರು. ಕೊನೆಗೆ ಸುರ್ಜಿತ್ ತಪ್ಪೊಪ್ಪಿಗೆ ಕೇಳಿದಲ್ಲಿ ಅವರನ್ನು ಬಂಧಿಸದೆ ಬಿಟ್ಟು ಬಿಡುವುದಾಗಿ ರಾಜಿಗೆ ಪೊಲೀಸರು ಮುಂದಾದರು. ತಪ್ಪೊಪ್ಪಿಕೊಳ್ಳದಿದ್ದಲ್ಲಿ ಶಾಲೆಯಲ್ಲಿ ವ್ಯಾಸಂಗ ಮುಂದುವರಿಯುವುದು ಸಾಧ್ಯವಿಲ್ಲವೆಂಬ ಒತ್ತಡವನ್ನು ತಂದರು. ಸುರ್ಜಿತ್‌ರ ಕಣ್ಣಮುಂದೆ ಅವರ ತಂದೆ ಬೀಳ್ಕೊಡುವಾಗ ಅವರೊಬ್ಬ ಉನ್ನತ ವಿದ್ಯೆಗಳಿಸಿದ ವಿದ್ವಾಂಸನಾಗಬೇಕೆಂದು ಕಂಡಿದ್ದ ಕನಸುಗಳು ಕಣ್ಣೀರು ತರಹತ್ತಿದವು. ಮತ್ತೊಂದೆಡೆ ರಾಷ್ಟ್ರೀಯ ಸ್ವಾಭಿಮಾನ ಹೆಮ್ಮರವಾಗಿ ಬೆಳೆದು ಅವರಲ್ಲಿ ಬೇರುಬಿಟ್ಟಿತ್ತು. ಆ ಪುಟ್ಟ ಬಾಲಕನಲ್ಲಿ ಸ್ವಂತ ಭವಿಷ್ಯದ ಉತ್ಕಟತೆ ಮತ್ತು ರಾಷ್ಟ್ರಕ್ಕಾಗಿನ ತ್ಯಾಗಗಳೆರಡೂ ಬೆಂಕಿಕೊಳ್ಳಿಗಳಂತೆ ಒಂದಕ್ಕೊಂದು ಕಿಡಿಯಾಡತೊಡಗಿದವು. ಆ ಬಾಲಕನ ನಿರ್ಧಾರ ಶಾಲೆಯಿಂದ ವಜಾ ಮಾಡುವಲ್ಲಿ ಕೊನೆಗೊಂಡಿತು. ಅಚಲವಿಶ್ವಾಸ ಮತ್ತು ದಿಟ್ಟತನದ ಆ ನಿರ್ಧಾರದ ಹಿಂದೆ ಘಾಸಿಗೊಂಡ ಹೃದಯ ಸಂಕಟದಲ್ಲಿ ತುಯ್ದಾಡುತ್ತಿತ್ತು.

ಆ ಹೊತ್ತಿಗೆ ಧೈರ್ಯ ಮತ್ತು ಸ್ಫೋಟಕ ಶಕ್ತಿ ಅವರ ವ್ಯಕ್ತಿತ್ವದಲ್ಲಿ ಹೊರಹೊಮ್ಮತೊಡಗಿತ್ತು. ಶಾಲೆಯಿಂದ ಹೊರಹಾಕಿದ ಸುದ್ದಿ ತಿಳಿದ ಅವರ ತಾಯಿ ಸುರ್ಜಿತ್‌ರನ್ನು ಮತ್ತೊಂದು ಶಾಲೆಗೆ ಸೇರಿಸಲು ಪ್ರಯತ್ನಿಸಿದರು. ಸಮೀಪದಲ್ಲೆಲ್ಲೂ ಪರ್ಯಾಯ ಶಾಲೆಯಿಲ್ಲದ್ದರಿಂದ ಅವರ ತಂದೆಯ ಸ್ನೇಹಿತರಾದ ಹರಿಸಿಂಗ್ ಜಲಂಧರ್‌ರವರ ಸಹಾಯದಿಂದಾಗಿ ಜಲಂಧರ್‌ನ ಖಾಲ್ಸಾ ಶಾಲೆಗೆ ಅವರನ್ನು ಸೇರಿಸಲಾಯಿತು. ಶಾಲೆಗೆ ತೆರಬೇಕಾದ ಶುಲ್ಕವೇನೂ ಕೈಗೆಟುಕುವಂತಿರಲಿಲ್ಲ. ತಿಂಗಳಿಗೆ 10 ರೂಪಾಯಿ ಶುಲ್ಕ ಭರಿಸಲು ಅಳೆದು ಸುರಿದು ಲೆಕ್ಕ ಮಾಡಿ ಎಮ್ಮೆಯ ಹಾಲಿನ ಮಾರಾಟದಿಂದ ಮತ್ತು ಚರಕದ ನೂಲಿನ ಹಣದಿಂದ ಒಗ್ಗೂಡಿಸಲಾಗುತ್ತಿತ್ತು. ಅವರ ತಾಯಿಯ ಶ್ರಮ, ಅರ್ಪಣೆ ಮತ್ತು ತ್ಯಾಗ ಮನೋಭಾವ ಸುರ್ಜಿತ್‌ರಿಗೆ ಭವಿಷ್ಯದಲ್ಲಿ ಭದ್ರ ಅಡಿಪಾಯವನ್ನೊದಗಿಸಿದವು.

ಸುರ್ಜಿತ್‌ರಿಗೆ ಅಗಾಧ ಸ್ಫೂರ್ತಿ, ಸ್ವಯಂಪ್ರೇರಣೆ ಮತ್ತು ಕೆಚ್ಚಿದೆಯ ಶಕ್ತಿಯನ್ನು ತುಂಬಿದ ಬಹುಮುಖ್ಯ ಪಾತ್ರಧಾರಿಯೆಂದರೆ ಮಹಾನ್ ಕ್ರಾಂತಿಕಾರಿ ಭಗತ್‌ಸಿಂಗ್, ಭಗತ್‌ಸಿಂಗ್‌ರನ್ನು 1931ರಲ್ಲಿ ನೇಣುಗಂಬಕ್ಕೇರಿಸಿದರೂ ಅಷ್ಟರಲ್ಲಾಗಲೇ ಅವರ ಬಲಿದಾನ ಭಾರತೀಯ ಯುವಕ ಯುವತಿಯರಲ್ಲಿ ಅದೆಂಥದೋ ಮಾಂತ್ರಿಕ ಶಕ್ತಿಯನ್ನು ತುಂಬಿ ಹೋರಾಟ, ಬಲಿದಾನಗಳಿಗೆ ಸೂಜಿಗಲ್ಲಿನಂತೆ ಆಕರ್ಷಿಸುವ ಗುಣವನ್ನು ಪಡೆದುಕೊಂಡಿತ್ತು. ಭಗತ್‌ರು ಸ್ಥಾಪಿಸಿದ್ದ ನೌಜವಾನ್ ಭಾರತ್ ಸಭಾಗೆ ಸುರ್ಜಿತ್‌ರು ಸದಸ್ಯರಾದರು. ಆ ಕಾಲಘಟ್ಟದಲ್ಲಿ ವಿಶೇಷವಾಗಿ 1930 ದಶಕದಲ್ಲಿ ಆರ್ಥಿಕತೆಯ ತೀವ್ರ ಬಿಕ್ಕಟ್ಟಿನಲ್ಲಿದ್ದು ರೈತಾಪಿ ವರ್ಗದ ಅಸಹನೆ ಮತ್ತು ದಂಗೆಗೆ ಕಾರಣವಾಗಿತ್ತು. ಅಂಥಹ ಸಂದರ್ಭದಲ್ಲಿ ಜರುಗುತ್ತಿದ್ದ ಹಲವಾರು ಚಳುವಳಿ ಮತ್ತು ಸಾಮೂಹಿಕ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಸುರ್ಜಿತ್‌ರನ್ನು ಖಾಯಂ ಆಗಿ ಚಳುವಳಿಯ ಪ್ರಮುಖ ವಾಹಿನಿಯೊಳಗೆ ಮುನ್ನುಗ್ಗುವಂತೆ ಮಾಡಿದ ಚಾರಿತ್ರಿಕ ತಿರುವಿಗೆ ಕಾರಣವಾದ ಘಟನೆಯೊಂದು ಜರುಗಿತು. ಅವರು ಹತ್ತನೇ ತರಗತಿಯ ಲಿಖಿತ ಪರೀಕ್ಷೆ ಮುಗಿಸಿ ಪ್ರಾಯೋಗಿಕ ಪರೀಕ್ಷೆಗಾಗಿ ಕಾಯುತ್ತಿದ್ದಾಗ ಭಗತ್‌ಸಿಂಗ್‌ರ ಬಲಿದಾನದ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಲು ಯೋಜನೆ ರೂಪಿಸಲಾಗುತ್ತಿತ್ತು. ಜಲಂಧರ್‌ನಿಂದ 25 ಮೈಲು ದೂರದಲ್ಲಿರುವ ಹೊಶಿಯಾಪುರಕ್ಕೆ ಅಂದು ರಾಜ್ಯಪಾಲರು ಭೇಟಿ ನೀಡುವ ಸಂದರ್ಭವಿತ್ತು. ಆ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯದ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸುವುದಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿಯು ಘೋಷಿಸಿತ್ತು. ಅಂತಹ ಘಟನೆಯನ್ನು ತಡೆಯಲು ಸೇನೆಯನ್ನು ಕಾವಲಿರಿಸಿದ ಕಲೆಕ್ಟರನು ಯಾರಾದರೂ ಪ್ರಯತ್ನಿಸಿದಲ್ಲಿ ಗುಂಡಿಟ್ಟು ಸಾಯಿಸುವುದಾಗಿ ಘೋಷಿಸಿದ್ದನು. ಸೇನೆಯನ್ನು ಕಾವಲಿಟ್ಟಿದ್ದರಿಂದಾಗಿ ಬ್ರಿಟೀಷರನ್ನು ಮುಖಾಮುಖಿಯಾಗಿ ಎದುರಿಸುವುದು ವಿವೇಚನೆಯಲ್ಲವೆಂದು ತೀರ್ಮಾನಿಸಿದ ಜಿಲ್ಲಾ ಕಾಂಗ್ರೆಸ್ ಸಮಿತಿ ತ್ರಿವರ್ಣ ಧ್ವಜಾರೋಹಣ ಯೋಜನೆಯನ್ನು ರದ್ದುಪಡಿಸಿದುದು ಜಲಂಧರ್‌ನಿಂದ ಹೊಶಿಯಾಪುರಕ್ಕೆ ಬಂದ ಸುರ್ಜಿತ್‌ರಿಗೆ ಆಘಾತ ಮೂಡಿಸಿತು. ಜಿಲ್ಲಾ ಸಮಿತಿಯ ಕಛೇರಿ ಕಾರ್ಯದರ್ಶಿಗೆ ಎಂಥದೋ ಮೊಂಡು ಧೈರ್ಯದಿಂದ ಸವಾಲೆಸೆದ ಅವರು ಬಾವುಟ ಹಾರಿಸಿಯೇ ತೀರುತ್ತೇನೆಂದು ಹೇಳಿ ಜಿಲ್ಲಾ ನ್ಯಾಯಾಲಯದ ಕಟ್ಟಡದೆಡೆಗೆ ಹೊಂಚು ಹಾಕುತ್ತಾ ಧಾವಿಸತೊಡಗಿದರು. ಆ ಕಟ್ಟಡವು ಜಿಲ್ಲೆಯಲ್ಲಿ ಸಾಮ್ರಾಜ್ಯಶಾಹಿ ಆಳ್ವಿಕೆಯ ಹೆಗ್ಗುರುತಾಗಿ ರಾರಾಜಿಸುತ್ತಿತ್ತು.

ಸಾಯಂಕಾಲವಾಗುತ್ತಿದ್ದರಿಂದ ಸೇನಾ ಸಿಬ್ಬಂದಿ ಉದಾಸೀನರಾಗತೊಡಗಿದಂತೆ ಸುರ್ಜಿತ್ ಮೆಟ್ಟಿಲುಗಳನ್ನು ಏರಿ ಧ್ವಜ ಹಾರಿಸಿಯೇಬಿಟ್ಟರು. ಎರಡು ಗುಂಡುಗಳನ್ನು ಅವರತ್ತ ಹಾರಿಸಿದರೂ ಅವು ತಗಲದಿದ್ದದ್ದು ಅದೃಷ್ಟವೇ ಸರಿ. ಕಟ್ಟಡದಿಂದ ಹೊರಬಂದ ಜಿಲ್ಲಾಧಿಕಾರಿಯು ಮಹಾರಾಷ್ಟ್ರದವನಾಗಿದ್ದು ಸುರ್ಜಿತ್ ಇನ್ನೂ ಬಾಲಕನಾಗಿದ್ದರಿಂದ ಗುಂಡಿನ ಸುರಿಮಳೆಯನ್ನು ನಿಲ್ಲಿಸುವಂತೆ ಆದೇಶ ನೀಡಲಾಯಿತು. ಸೇನಾ ಸಿಬ್ಬಂದಿ ಸುತ್ತುವರಿದು ಅವರ ಬಳಿ ಆಯುಧಗಳಿಲ್ಲದ್ದನ್ನು ಖಾತರಿಪಡಿಸಿಕೊಂಡು ಬಂಧನಕ್ಕೊಳಪಡಿಸಿದರು.

ಅವರನ್ನು ಕೊಳೆತುನಾರುತ್ತಿದ್ದ ಜೈಲಿನಲ್ಲಿ ಒಂದಷ್ಟು ದಿನ ಇರಿಸಿ ನಂತರ ನ್ಯಾಯಾಧೀಶರ ಮುಂದೆ ನಿಲ್ಲಿಸಲಾಯಿತು. ನ್ಯಾಯಾಧೀಶರು ಒಂದು ವರ್ಷ ಕಠಿಣ ಸಜೆ ವಿಧಿಸಿದಾಗ ಸುರ್ಜಿತ್ "ಕೇವಲ ಒಂದೇ ವರ್ಷವೇ?" ಎಂದರು ನಗುತ್ತಾ. ಹೌಹಾರಿ ಸಿಟ್ಟಿಗೇರಿದ ನ್ಯಾಯಾಧೀಶ ಅದನ್ನು ನಾಲ್ಕು ವರ್ಷಕ್ಕೇರಿಸಿದಾಗ ಸುರ್ಜಿತ್ ಮತ್ತೆ "ಕೇವಲ ನಾಲ್ಕೇ ವರ್ಷವೇ?" ಎಂದರು ಛೇಡಿಸುತ್ತಾ. ಬೇಸ್ತು ಬಿದ್ದು ಬಡಬಡಿಸಿದ ನ್ಯಾಯಾಧೀಶ ಆ ನಿಯಮಾವಳಿಯಡಿಯಲ್ಲಿ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ಶಿಕ್ಷೆಯನ್ನು ವಿಸ್ತರಿಸಲು ಸಾಧ್ಯವಿಲ್ಲ ಎಂದರಂತೆ.

ಇಡೀ ನಗರವೇ ಈ ಘಟನೆಯನ್ನು ಸವಿದು ಸೆಟೆದೆದ್ದು ನಿಂತಿತು. ಹಲವು ಜನ ಸುರ್ಜಿತ್‌ರನ್ನು ಜೈಲಿನಲ್ಲಿ ಸಂದರ್ಶಿಸಿ ಹೊಗಳಿ ಅವರೊಂದು ಸಾಹಸವನ್ನೇ ಮೆರೆದಿದ್ದಾರೆಂದು ಹಾರೈಸಿದರು. ಅವರಿನ್ನೂ ಬಾಲಕನಿದ್ದದ್ದರಿಂದ ಕೆಲವೇ ದಿನಗಳಲ್ಲಿ ಅವರನ್ನು ದೆಹಲಿಯ ಪರಿವರ್ತನಾ ಬಂಧಿಖಾನೆಗೆ ವರ್ಗಾಯಿಸಲಾಯಿತು. ಆದರೂ, ಅವರೊಬ್ಬ ಸಮಸ್ಯೆಗಳ ಸೃಷ್ಟಿಕರ್ತನೆಂಬ ಹಣೆಪಟ್ಟಿ ಕಟ್ಟಿ ಲಾಹೋರ್‌ನ ಬೋರ್ಸ್ಟಾಲ್ ಜೈಲಿಗೆ 15 ದಿವಸಗಳಲ್ಲೇ ವರ್ಗಾಯಿಸಲಾಯಿತು. ಆ ಜೈಲಿನಲ್ಲಿ ತೀವ್ರತರದ ಹಿಂಸೆ, ಕಷ್ಟ ಕಾರ್ಪಣ್ಯಗಳಿಗೆ ಸಿಲುಕಿದ ಸುರ್ಜಿತ್‌ರ ಕಾಲುಗಳಿಗೆ ಸರಪಳಿ ಬಿಗಿದು ಬಂಧಿಸಲಾಗಿತ್ತು.

ಜೈಲಿನಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದ ಹಲವು ರಾಜಕೀಯ ಬಂಧಿಗಳ ಸಂಪರ್ಕವಾಯಿತು. ಅವರ ತಂದೆ ಪತ್ರದಲ್ಲಿ ಸುರ್ಜಿತ್ ಹಿಡಿದಿರುವ ಹಾದಿಯಿಂದ ಹಿಂದೆ ಸರಿಯಬಾರದೆಂಬ ಆಶಯ ವ್ಯಕ್ತಪಡಿಸಿದ್ದರು. ಜೈಲಿನಲ್ಲಿ ಕಾಣಲು ಬಂದಿದ್ದ ತಾಯಿಯು ಯಾವುದೇ ದುಃಖ ಅಥವಾ ಕೋಪ ತೋರದೆ ಪ್ರೋತ್ಸಾಹದ ಮಾತುಗಳನ್ನಾಡಿದರು. ಇವೆಲ್ಲ ಅವರಿಗೆ ಬಂಡೆಗಲ್ಲಿನ ಶಕ್ತಿಕೊಟ್ಟು ಭವಿಷ್ಯದ ಹಾದಿಯಲ್ಲಿ ದಾಪುಗಾಲಿಡಲು ನೀರುಣಿಸಿದಂತೆ ಘೋಷಿಸಿದವು. ಅನುಭವಿಸಿದ ಆರ್ಥಿಕ ಸಂಕಷ್ಟ, ಸಾಮ್ರಾಜ್ಯಶಾಹಿ ಶಕ್ತಿಯ ಕಪಿಮುಷ್ಟಿ, ಸಾಮೂಹಿಕ ಜನತಾ ಶಕ್ತಿಯ ಸಂಕಲ್ಪ ಇವೆಲ್ಲವೂ ಸುರ್ಜಿತ್‌ರು ಸ್ವಾಭಾವಿಕವಾಗಿಯೇ ದುಡಿಯುವ ವರ್ಗದೊಂದಿಗೆ ವಿಲೀನವಾಗುವಲ್ಲಿ ಮಹತ್ತರ ಪಾತ್ರ ವಹಿಸಿದವು. ○


ಬಾಬಾಬುಡನ್ ಗಿರಿಯತ್ತ ಹೊರಟಿವೆ ಧ್ವಂಸಕ ಪಡೆಗಳು

ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯ ಪರಿಸರದಲ್ಲಿ ಕೊರೆವ ಮಂಜು, ತೇಲುವ ಮೋಡಗಳದ್ದೇ ಕಾರುಬಾರು. ಅಲ್ಲಿ ಓಡಾಡುವ ಯಾರಿಗಾದರೂ ರಕ್ತ ಹೆಪ್ಪುಗಟ್ಟೀತೇ ಎಂಬಷ್ಟು ತಂಪು ವಾತಾವರಣ. ಅಪೂರ್ವ ಅನುಭವ, ಹಾಗೆಯೇ ಅನುಪಮ ನಿಸರ್ಗ ಸೌಂದರ್ಯದ ವಿಶಿಷ್ಟ ಹೊಳಪು. ಆದರೀಗ ಅಲ್ಲಿಗೆ ಹಿಂದುತ್ವವಾದೀ ಫ್ಯಾಸಿಸ್ಟ್ ಪಡೆಗಳು ಕೊಳ್ಳಿ ಹಿಡಿದು ನಡೆದಿವೆ. ಸೌಹಾರ್ದತೆ, ಸಾಮರಸ್ಯದ, ಎಲ್ಲಾ ಧರ್ಮಿಯರನ್ನೂ, ಜಾತಿ ಜನಾಂಗಗಳನ್ನು ಸಮಾನವಾಗಿ ಆಹ್ವಾನಿಸುವ ವಿಭಿನ್ನ ಸೂಫಿ, ಸಂತ ಪರಂಪರೆಗೆ ಕಿಚ್ಚುಹಚ್ಚಲು ವ್ಯವಸ್ಥಿತ ಪಿತೂರಿ ರೂಪಿಸಿ ಹೊರಟಿವೆ.

ಅಕ್ಟೋಬರ್ ಬಂತೆಂದರೆ ವಿಷದ ವಾತಾವರಣ ಹುಟ್ಟು ಹಾಕುವ ಕುಕೃತ್ಯಕ್ಕೆ ಎಲ್ಲಿಲ್ಲದ ಚಾಲನೆ ತಂದುಕೊಳ್ಳುತ್ತದೆ ಸಂಘಪರಿವಾರ. ಡಿಸೆಂಬರ್‌ನಲ್ಲಿ ದತ್ತಜಯಂತಿ ಆಚರಿಸುವ ನೆಪದಲ್ಲಿ ಕೋಮು ವಿದ್ವೇಷದ ಹೊಗೆ ಹಬ್ಬಿಸಿ, ಜನರ ಐಕ್ಯತೆ ಒಡೆಯಲು ಎಲ್ಲವನ್ನು ಧಾರೆಯೆರೆಯುತ್ತವೆ. ಇದು ಇತ್ತೀಚಿನ ವರುಷಗಳಲ್ಲಿ ಸಂಘಪರಿವಾರದ ಹೊಸ ವರಸೆ. ಅಲ್ಲಿನ ಸಾಮರಸ್ಯದ ಪರಂಪರೆಯನ್ನು ನಾಶಗೈಯ್ಯುವುದು, ವೈದಿಕಶಾಹಿ ಆಚರಣೆಗಳನ್ನು ಹೇರುವುದು, ಇನ್ನೊಂದೆಡೆ ಜನತೆಯ ಮನಸ್ಸನ್ನು ಕೋಮುಭಾವನೆಗಳಿಂದ ವಿಷಮಯಗೊಳಿಸಿ ರಾಜಕೀಯ ದುರ್ಲಾಭಗಳಿಸುವುದು. ಈ ಮೂಲಕ ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವದ ಸಾಮಾಜಿಕ ನ್ಯಾಯ ಮುಂತಾದ ಮೌಲ್ಯಗಳನ್ನು ಧ್ವಂಸಗೊಳಿಸುವುದು.

ಆದ್ದರಿಂದಲೇ ದೇಶದಲ್ಲಿ ನೂರಾರು 'ಅಯೋಧ್ಯೆ'ಗಳನ್ನು ಸೃಷ್ಟಿಸುವ ದುಷ್ಟ ಅಜೆಂಡಾದ ಭಾಗವಾಗಿಯೇ ಬಾಬಾಬುಡನ್‌ಗಿರಿಗೆ ಈ ಪಡೆ ಧಾಳಿ ನಡೆಸುತ್ತಿರುವುದು ಮತ್ತು ವಿಶ್ವಹಿಂದೂ ಪರಿಷತ್, ಬಜರಂಗದಳದಂತಹ ಕ್ರಿಮಿನಲ್ ಸಂಘಟನೆಗಳು ತೊಗಾಡಿಯಾ, ಮುತಾಲಿಕರಂತಹ ನಾಯಕರು ಹಾಗೂ ಬಿಜೆಪಿ ಬಹಿರಂಗವಾಗಿಯೇ 'ಗಿರಿ'ಯನ್ನು ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿಸುವುದಾಗಿ ಸಾರಿದ್ದಾರೆ. ಅದಕ್ಕಾಗಿಯೇ ಹೊಸ ಹೊಸ ತಂತ್ರ ಕುತಂತ್ರಗಳನ್ನು ಹೆಣೆಯುತ್ತಲೇ ಇದ್ದಾರೆ. ಹಸಿ ಹಸಿ ಸುಳ್ಳುಗಳನ್ನು ಸೃಷ್ಟಿಸುತ್ತಾ ಮುಗ್ಧ ಜನರನ್ನು ವಂಚಿಸಿ, ತಮ್ಮ ಕಾರ್ಯಾಚರಣೆಗೆ ಅಪಹರಿಸುತ್ತಿದ್ದಾರೆ. ಇದರ ಹಾದಿಯುಲ್ಲಿನ ಸೃಷ್ಟಿಯೇ ಸಂಘಪರಿವಾರದ ದತ್ತಜಯಂತಿ ಆಚರಣೆ.

ಈಚಿನ ವರುಷಗಳಲ್ಲಿ ಇಂತಹ ಹುನ್ನಾರಗಳಿಗೆ ಪ್ರಗತಿಪರರಿಂದ ಬಂದ ತೀವ್ರ ಪ್ರತಿರೋಧದಿಂದಾಗಿ ಕಳೆದ ವರುಷ ಮೈತ್ರಿಕೂಟದ ಸರ್ಕಾರ ಅನಿವಾರ್ಯವಾಗಿ ಹೊಸದಾಗಿ ಹುಟ್ಟುಹಾಕಲಾಗಿದ್ದ ಹಲವು ವಿಕೃತಿಗಳನ್ನು ತಡೆಯುವ, ತಿದ್ದುವುದಕ್ಕೆ ಮುಂದಾಯಿತು. ಹಿಂದಿನಂತೆ ಸರ್ಕಾರವೇ ಹವನ, ಹೋಮ, ಯಜ್ಞದಂತಹ ಕಾರ್ಯಗಳಿಗೆ ತಡೆ ಹಾಕಿತು. ಸಂಘಪರಿವಾರದ ಶೋಭಾಯಾತ್ರೆ ಸಂತ ಸಮಾವೇಶಗಳನ್ನು ನಿಷೇದಿಸಿತು. ಕಾನೂನು ಉಲ್ಲಂಘಿಸುವ ಪುಂಡಾಟಿಕೆಗಳನ್ನು ಆಡಳಿತಾತ್ಮಕವಾಗಿ ಬಿಗಿ ಕ್ರಮವಹಿಸಿ



ತಡೆಯಲಾಯಿತು. ಸಂಘಪರಿವಾರದ ಆಟ ಹಿಂದಿನಂತೆ ಅಷ್ಟಾಗಿ ನಡೆಯಲಿಲ್ಲ.

1975ರ ಹಿಂದಿನ ಆಚರಣೆಗಳಿಗೆ ಮಾತ್ರ ಅವಕಾಶ ಕಲ್ಪಿಸಬೇಕೆಂಬ ಸುಪ್ರಿಂ ಕೋರ್ಟ್‌ನ ತೀರ್ಪನ್ನು ಜಾರಿಗೊಳಿಸಲು ಈ ಕ್ರಮಗಳು

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಅತ್ಯಗತ್ಯವಾಗಿದ್ದವು. ಹಿಂದಿನ ಸರ್ಕಾರಗಳಿಗಿಂತ ಧರ್ಮಸಿಂಗ್ ಸರ್ಕಾರ ಭಿನ್ನ ನಿಲುವು ತಾಳಿದ್ದು ಗಮನಾರ್ಹವಾದುದು. ಆದರೆ ಹಿಂದಿಲ್ಲದಿದ್ದ ದತ್ತಜಯಂತಿ ಆಚರಣೆಯನ್ನು ಸರ್ಕಾರವೇ ನಡೆಸುತ್ತಿದ್ದ ಬಗೆಗೆ ತೀವ್ರ ಆಕ್ಷೇಪಗಳು ಇದ್ದವು.

ಈ ವರ್ಷ ದತ್ತಜಯಂತಿ ಆಚರಣೆಗೆ 'ಶಿವಸೇನೆ' (ಸಂಘಪರಿವಾರದ ಹೊಸ ತಂತ್ರ)ಯೇ ನೇತೃತ್ವ ವಹಿಸುವುದು ಎಂದು ಘೋಷಿಸಲಾಯಿತಲ್ಲದೇ ಅದರಂತೆ 'ದತ್ತಮಾಲೆ'ಯೆಂಬ ಹಿಂದಿಲ್ಲದ ಆಚರಣೆಗೆ ಇಳಿದಿತ್ತು. ಈ ಬಾರಿಯೂ ಸರ್ಕಾರದ ಆಡಳಿತ ಬಿಗಿಕ್ರಮ ವಹಿಸಿತ್ತು. ಆದರೆ ಈಗ ಡಿಸೆಂಬರ್ ತಿಂಗಳಿನಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಸಂಘಪರಿವಾರ ಯೋಚಿಸಿದೆ. ದತ್ತ ಜಯಂತಿಗೆ ಸಿದ್ಧತೆ(?) ಮಾಡಿಕೊಂಡಿದೆ.

ಈಗಾಗಲೇ 'ದತ್ತ ಸತ್ಯಸಂದೇಶ'ವೆಂಬ ಜಾಥಾವನ್ನು ಬಿಜೆಪಿ ಶಾಸಕ ಸಿ.ಟಿ.ರವಿ ಚಿಕ್ಕಮಗಳೂರಿನಾದ್ಯಂತ ಆರಂಭಿಸಿದ್ದು ಅದು ಹಸೀ ಸುಳ್ಳುಗಳನ್ನು ಹೇಳುವ ಜಾಥಾ ಆಗಿದೆ. ಮೇಲಾಗಿ ಪಂಚಾಯ್ತಿ ಚುನಾವಣೆಗಳನ್ನು ಗಮನದಲ್ಲಿಟ್ಟು ನಡೆಸಲಾಗುತ್ತಿದೆ. ಇದು ಡಿಸೆಂಬರ್ 4ರಂದು ಸಂತ ಸಮಾವೇಶ ನಡೆಸಿ ಮುಗಿಯುವುದು. ಈ ಸಂತ ಸಮಾವೇಶದಲ್ಲಿ ದತ್ತಜಯಂತಿ ಕಾರ್ಯಕ್ರಮಗಳನ್ನು ಘೋಷಿಸಲಾಗುವುದು ಎಂದಿದ್ದಾರೆ.

ಈ ಸಲದ ದತ್ತಜಯಂತಿಯನ್ನು ಆಚರಿಸಲು ಮುಜರಾಯಿ ಇಲಾಖೆಯು ಹುಣ್ಣಿಮೆಯ ದಿನವಾದ ಡಿಸೆಂಬರ್ 15ರಂದು ನಿಗದಿಗೊಳಿಸಿದೆ. ಇದನ್ನು ಒಳಗೊಂಡು ಮೊದಲೆರಡು ದಿನ 13,14ರಂದು ಸಹ ಕೆಲವು ಕಾರ್ಯಕ್ರಮಗಳನ್ನು ಸಂಘಪರಿವಾರ ಯೋಜಿಸಿದೆ.

ಈ ಸಂದರ್ಭದಲ್ಲಿ ಸರ್ಕಾರ ವಹಿಸಬೇಕಾದ ಕ್ರಮಗಳು ಗಂಭೀರ ಸ್ವರೂಪದ್ದಾಗಿರಬೇಕಿದೆ.

ಸಂಘಪರಿವಾರವು ದತ್ತಜಯಂತಿ ಆರಂಭಿಸುವುದನ್ನು ನಿಷೇಧಿಸಬೇಕು. ಮಾತ್ರವಲ್ಲ ಶೋಭಾಯಾತ್ರೆ, ಸಂತ ಸಮಾವೇಶಗಳನ್ನು ನಿರ್ಬಂಧಿಸಬೇಕು. ಮುಖ್ಯವಾಗಿ ಈ ಖಾವೀ ಪಡೆಯು ಗುಹೆಗೆ ಹೋಗಿಬರುವುದೆಂದರೆ ಯಾವುದೇ ಕ್ಷಣದಲ್ಲಿಯೂ ಅಪಾಯ ತಪ್ಪಿದ್ದಲ್ಲ. ಬಾಬ್ರಿ ಮಸೀದಿ ಧ್ವಂಸದ ಪ್ರಕರಣದಿಂದ ಪಾಠ ಕಲಿಯಬೇಕು. 1975ರ ಹಿಂದಿನ ಆಚರಣೆಗಳಿಗೆ ಸೀಮಿತವಾಗಿರಬೇಕು. ಅದರಂತೆ ಮುಜರಾಯಿ ಇಲಾಖೆಯು ದತ್ತ ಜಯಂತಿ ಆಚರಿಸುವುದು ಸರಿಯಲ್ಲ. ಇದು ಹಿಂದಿನ ಆಚರಣೆಗಳಲ್ಲಾಗಲಿ, ದಾಖಲೆಗಳಲ್ಲಾಗಲೀ ಇಲ್ಲದ ಆಚರಣೆ. ಹೀಗಾಗಿ ಅದನ್ನು ಕೈಬಿಡಬೇಕು. ಆ ಸಂದರ್ಭದಲ್ಲಿ ವಿಕೃತಿಗಳು ಜರುಗದಂತೆ ಎಚ್ಚರ ವಹಿಸಬೇಕು.

ಕಳೆದ ವರುಷ ಸಿಪಿಐ(ಎಂ)-ಸಿಪಿಐ ಪಕ್ಷಗಳ ನಿಯೋಗಗಳು ಮುಖ್ಯಮಂತ್ರಿ ಧರಂಸಿಂಗ್ ಮತ್ತು ಉನ್ನತ ಅಧಿಕಾರಿಗಳಿದ್ದ ಸಭೆಯಲ್ಲಿ ಹಲವಾರು ಸಲಹೆ-ಸೂಚನೆಗಳನ್ನು ನೀಡಲಾಗಿತ್ತು. ಸರ್ಕಾರ ನಂತರದಲ್ಲಿ ಕ್ರಮವಹಿಸುವಲ್ಲಿ ಪರಿಣಾಮಕಾರಿಯಾಗಿತ್ತು. ಕ್ರಮಗಳಲ್ಲಿ ಪ್ರತಿಫಲನಗೊಂಡವು. ಆ ಆಡಳಿತಾತ್ಮಕ ಕ್ರಮಗಳೊಂದಿಗೆ ರಾಜಕೀಯ ಕ್ರಮಗಳು ಅಗತ್ಯವೆಂಬುದನ್ನು ಒತ್ತಿ ಹೇಳಲಾಗಿತ್ತು. ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ಸಭೆಯನ್ನು ನಡೆಸಿದರು. ಅದೂ ಸಂಘರ್ಷದ ಕಣವಾಗಿತ್ತು. ಇದು ಒಂದು ಹೆಜ್ಜೆ ಮಾತ್ರ. ಮುಖ್ಯವಾಗಿ ಬಾಬಾಬುಡನ್‌ಗಿರಿ ದರ್ಗಾಪೀಠದ ಕುರಿತಂತೆ ವಾಸ್ತವ ಸಂಗತಿಗಳನ್ನು ಜನರ ನಡುವೆ ವ್ಯಾಪಕವಾಗಿ ತೆರೆದಿಟ್ಟು, ಎಚ್ಚರಗೊಳಿಸಿ ಸಂಘಪರಿವಾರದ ಹಸೀ ಸುಳ್ಳುಗಳನ್ನು ಬಯಲಿಗೆಳೆಯುವುದೇ ಅತ್ಯಗತ್ಯವಾಗಿತ್ತು. 1975ರ ಹಿಂದಿನ ಆಚರಣೆಗಳೇನು ಎಂಬುದನ್ನು ವ್ಯಾಪಕವಾಗಿ ಪ್ರಚಾರಿಸಬೇಕಿತ್ತು. ಆದರೆ ಈ ದಿಶೆಯಲ್ಲಿ ಅಷ್ಟು ಕ್ರಮವಹಿಸಲಿಲ್ಲ. ಈಗಲೂ ಪರಿವಾರದ ಸುಳ್ಳುಗಳೇ ಸತ್ಯಗಳಾಗಿ ಕಂಡಿವೆ. ಇತರೆ ಸೆಕ್ಯುಲರ್ ಪಕ್ಷಗಳು ಅಷ್ಟಾಗಿ ಸ್ಪಂದಿಸದಿದ್ದರೂ ಎಡಪಕ್ಷಗಳು, ಕೆಲವು ಪ್ರಗತಿಪರರು ಸೀಮಿತವಾಗಿಯಾದರೂ ಜನರನ್ನು ತಲುಪಲು, ಅಣಿನೆರೆಸಲು ಪ್ರಯತ್ನಿಸಿದ್ದಾರೆ.

ಧರಂಸಿಂಗ್ ಸರ್ಕಾರ ಕ್ರಿಯಾಶೀಲವಾಗಿ ಇಂತಹ ಕ್ರಮಕ್ಕೆ ಮುಂದಾಗಬೇಕು. ಕಾಂಗ್ರೆಸ್ ಒಂದು ಪಕ್ಷವಾಗಿಯೂ. ಜೆಡಿ(ಎಸ್) ಸಹ ತೊಡಗಬೇಕು. ರಾಜಕೀಯ ಲಾಭನಷ್ಟಗಳ ವ್ಯಾಪಾರಿ ಲೆಕ್ಕಾಚಾರ ಕೂಡದು.

ಈ ವರ್ಷವೂ ದೃಢವಾದ ಕ್ರಮಗಳನ್ನು ಕೈಗೊಂಡು ಸಂವಿಧಾನ, ನ್ಯಾಯಾಲಯ ತೀರ್ಪು, ಪರಂಪರೆ ರಕ್ಷಣೆಗೆ ಮುಂದಾಗಬೇಕು. ಸರ್ಕಾರವೇ ಎಲ್ಲವನ್ನೂ ಮಾಡಲಾರದು ಎಂಬುದನ್ನು ಗಮನದಲ್ಲಿರಿಸಿ ಜನತೆಯ ಎಚ್ಚರ-ಪ್ರತಿರೋಧವೇ ಪ್ರಧಾನ. ಆ ದಿಶೆಯಲ್ಲಿ ಕ್ರಿಯಾಶೀಲತೆ ಇಮ್ಮಡಿಗೊಳ್ಳಬೇಕಿದೆ.

ಮುತಾಲಿಕನ ಹೊಸ ಅವತಾರ

ಮುತಾಲಿಕನು ಹೊಸ ಅವತಾರ ಎತ್ತಲು ಮುಂದಾಗಿದ್ದಾನೆ. ಇದರ ಹಿಂದೆ ಆರ್‌ಎಸ್‌ಎಸ್ ಇದೆಯೆಂಬುದು ಬೇರೆ ಹೇಳಬೇಕಿಲ್ಲ.

ಕರ್ನಾಟಕದಲ್ಲಿ ಶಿವಸೇನೆ ಪಕ್ಷವನ್ನು ಮುತಾಲಿಕ್ ಪ್ರಕಟಿಸಿದ. ಇದಕ್ಕೆ ಕೆಲವು ಕನ್ನಡ ಸಂಘಟನೆಗಳು ವಿರೋಧಿಸಿದವು. ಅಷ್ಟರಲ್ಲೇ ಬೆಳಗಾಂ ಗಡಿ ವಿವಾದ ಭುಗಿಲೆದ್ದಾಗ ಮಹಾರಾಷ್ಟ್ರದಲ್ಲಿ ಠಾಕ್ರೆ ತಾಳಿದ ನಿಲುವಿನಿಂದಾಗಿ ಮತ್ತೆ ಮುತಾಲಿಕನಿಗೆ ಪಜೀತಿಗೆ ಇಟ್ಟುಕೊಂಡಿತು. ಇನ್ನು ಶಿವಸೇನೆ ನಡೆಯೋಲ್ಲ ಎಂದಾಗ ಇದಕ್ಕೆ ವಿರೋಧವೂ ಹೆಚ್ಚಾಯಿತು. ಹೀಗಾಗಿ ಹೊಸ ಅವತಾರ ಎತ್ತಲು ಮುತಾಲಿಕ ಮುಂದಾಧ. ಶಿವಸೇನೆ ವಿಸರ್ಜಿಸಿ, ಹೊಸ ಪಕ್ಷವನ್ನು ಪ್ರಕಟಿಸಲು ನಿರ್ಧರಿಸಿದ್ದಾನೆ. ಹಿಂದುಸೇನೆ, ಇತ್ಯಾದಿ ಹೆಸರಿಸಬಹುದು ಎಂದಿದ್ದಾನೆ.

ಇದು ಹಿಂದುತ್ವ ಸಿದ್ಧಾಂತಕ್ಕೆ ಬದ್ಧವಾಗಿದೆ. ಕನ್ನಡ ಭಾಷಾಂಧತೆಯನ್ನು ಹೊಂದಲಿದೆ. ಹಿಂದೆ ಕೋಮುವಾದವನ್ನು ಹಿಡಿದು ವಿಭಜನಾಕಾರಿಯಾಗಿ ಕೆಲಸ ಮಾಡುವ ಗುರಿ ಇತ್ತು. ಈಗ ಶಿವಸೇನೆಯ ವಿಚ್ಛಿದ್ರಕಾರಿ ಚಳುವಳಿಯನ್ನೇ ಆಧಾರವಾಗಿ ಹೊಸ ಹೆಸರಿನಲ್ಲಿ ಬರಲಿದೆ. ಇದು ಅಪಾಯಕಾರಿ ಎಂಬುದನ್ನು ಗಮನಿಸಬೇಕು.

ಚುನಾವಣಾ ಪಕ್ಷವಾಗಿ ಸಿದ್ಧರಾಮಯ್ಯ ಬಣ

ಎಲ್ಲಾ ಬಾಗಿಲುಗಳು ಮುಚ್ಚಿದ ಬಳಿಕ ಸಿದ್ಧರಾಮಯ್ಯನವರ ಬಣ ಅಹಿಂದ ಹೊರತಾಗಿ ಒಂದು ರಾಜಕೀಯ ಪಕ್ಷವನ್ನು ಪ್ರಕಟಿಸುವುದು ಅನಿವಾರ್ಯವಾಗಿದೆ. ನಿಜವಾದ ಜೆಡಿ(ಎಸ್) ಎಂದು ವಾದಿಸಿದರೂ ಭತ್ತದ ತೆನೆ ಹೊತ್ತ ಮಹಿಳೆ ಚಿಹ್ನೆ ತಮಗೆ ಸಿಗಬೇಕೆಂದರೂ ಎಲ್ಲವೂ ತಿರಸ್ಕೃತವಾದವು. ಈಗ ಅವರ ಪಕ್ಷ 'ಅಖಿಲ ಭಾರತ ಪ್ರಗತಿಪರ ಜನತಾದಳ' ಎಂದು ನಾಮಕರಣ ಮಾಡಲಾಗಿದೆ.

ನೂತನ ಪಕ್ಷಕ್ಕೀಗ ಸತ್ವಪರೀಕ್ಷೆ ಮುಂಬರುವ ಪಂಚಾಯ್ತಿ ಚುನಾವಣೆಗಳಲ್ಲಿ ತಮ್ಮ ಅಸ್ತಿತ್ವ ಸಾಬೀತುಪಡಿಸಿಕೊಳ್ಳಲೇಬೇಕು. ಇಲ್ಲವಾದರೆ ಭವಿಷ್ಯ ಅಂಧಾಕಾರಮಯ! ಆದ್ದರಿಂದಲೇ ಮೈತ್ರಿ ಇಲ್ಲದೇ ಗೆಲುವು ಸಾಧ್ಯವೇ ಎಂಬ ಪ್ರಶ್ನೆ ಅವರಿಗೂ ಕಾಡುತ್ತಿದೆ.

ಕೋಮುವಾದಿ ಬಿಜೆಪಿಯನ್ನು ಹಾಗೂ ದೇವೇಗೌಡರ ಜೆಡಿ(ಎಸ್)ನ್ನು ಸೋಲಿಸುವುದೇ ತಮ್ಮ ಪ್ರಥಮ ಗುರಿ ಎಂದು ಪ್ರಥಮ ಬಾರಿಗೆ ಸ್ಪಷ್ಟವಾಗಿ ಘೋಷಿಸಿದ್ದಾರೆ. ಇದರಲ್ಲಿ ಬಿಜೆಪಿ ವಿರುದ್ಧದ ನಿಲುವು ಸ್ವಾಗತಾರ್ಹ. ಆದರೆ ಇನ್ನುಳಿದವು ವೈಯಕ್ತಿಕ ದ್ವೇಷವಷ್ಟೆ. ಯಾಕೆಂದರೆ ಕರ್ನಾಟಕದ ರಾಜಕೀಯ ಸಂದರ್ಭವನ್ನು ಪರಿಗಣಿಸಿದರೆ ಜಾತ್ಯಾತೀತ ಶಕ್ತಿಗಳು ದುರ್ಬಲವಾಗುವುದು ಅಪಾಯವಾಗಿದೆ.

'ಅಹಿಂದ'ದ ಮೂಲಕ ದುರ್ಬಲ ವರ್ಗ ಹಾಗೂ ಜಾತಿಗಳ ಪಕ್ಷಪಾತಿಗಳೆಂದು ಸಾರಿದ್ದರಾದರೂ ಅವರ ನೂತನ ಪಕ್ಷವು ಆ ವರ್ಗಗಳ ಮೂಲಭೂತ ಪ್ರಶ್ನೆಗಳನ್ನು ಗುರುತಿಸಿಲ್ಲ. ಅದಕ್ಕಾಗಿ ಹೋರಾಡುವ



ಇಚ್ಛೆಯನ್ನು ಪ್ರಕಟಿಸಿಲ್ಲ. ಸಿದ್ಧರಾಮಯ್ಯನವರೇ ಘೋಷಿಸಿದಂತೆ ತಮ್ಮ ಸರ್ಕಾರ ಅಯ್ಕೆಯಾದರೆ ರೈತರಿಗೆ ಶೇ.3ರ ಬಡ್ಡಿದರದಲ್ಲಿ ಸಾಲ ಒದಗಿಸುವ ಬಗ್ಗೆ ಹೇಳಿದ್ದಾರೆ. ಇದು ಬಿಟ್ಟರೆ 'ಅಹಿಂದ' ವರ್ಗಗಳ ಕನಿಷ್ಠ ರೇಷನ್ ಕಾರ್ಡ್, ವಸತಿ, ಭೂಮಿಯಂತಹ ಪ್ರಶ್ನೆಗಳ ಬಗ್ಗೆ ಮಾತನಾಡಿಯೇ ಇಲ್ಲ. ಅಂದರೆ 'ಅಹಿಂದ' ಜನರ ಹಿತ ಕಾಯುವುದು ಬರೀ ಸ್ವಾಭಿಮಾನದ ಭಾಷಣದಿಂದ ಮಾತ್ರ ಅಸಾಧ್ಯ.

ಈ ಪಂಚಾಯತ್ ಚುನಾವಣೆಗಳಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಮುಂದಾಗಿದ್ದಾರೆ. ಅದು ಅವರ ರಾಜಕೀಯ ಗುರಿಸಾಧನೆಗೆ ಎಂಬುದು. ಆ ಅಂಶ ಈ ಚುನಾವಣೆಗಳಲ್ಲಿ ಅಖಿಲ ಭಾರತ ಪ್ರಗತಿಪರ ಜನತಾದಳದ ಅಸ್ತಿತ್ವ ಸಾಬೀತಾಗಿಸುವುದರಲ್ಲಿ ಸಹಾಯಕವಾಗಬಹುದೇನೋ. ಚುನಾವಣೆಗಳ ಬಳಿಕವೇ ಏನನ್ನಾದರೂ ಹೇಳಬಹುದು.

ಜನರ ನಿತ್ಯ ಸಮಸ್ಯೆಗಳನ್ನು ಎತ್ತಿ ಹೋರಾಡದೇ ತನ್ನ ಅಸ್ತಿತ್ವ ಹೇಗೆ ಉಳಿಸಿಕೊಳ್ಳುವುದೋ ಎಂಬುದೇ ಕುತೂಹಲದ ಅಂಶ.

ರಾಷ್ಟ್ರವ್ಯಾಪಿ ಸಮಾನ ಕನಿಷ್ಟ ಕೂಲಿ, ಉದ್ಯೋಗ ಭದ್ರತೆಗಾಗಿ ಬೀಡಿ ಕಾರ್ಮಿಕರ ವ್ಯಾಪಕ ಮುಷ್ಕರ

ಬೀಡಿ ಕಾರ್ಮಿಕರ 10 ಅಂಶಗಳ ಬೇಡಿಕೆಗಳನ್ನು ಒತ್ತಾಯಿಸಿ 2005ರ ನವೆಂಬರ್ 29ರಂದು ಒಂದು ದಿನದ ರಾಷ್ಟ್ರವ್ಯಾಪಿ ಮುಷ್ಕರ ನಡೆಸಲು ಸಿಐಟಿಯು ನೇತೃತ್ವದ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟ ನೀಡಿದ ಕರೆಗೆ ಬೀಡಿ ಉತ್ಪಾದನೆ ಮಾಡುವ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕರ್ನಾಟಕದಲ್ಲಿ ಅಭೂತಪೂರ್ವ ಯಶಸ್ಸು

ಬೀಡಿ ಕಾರ್ಮಿಕರಿಗೆ ರಾಷ್ಟ್ರಮಟ್ಟದ ಸಮಾನ ಕನಿಷ್ಠ ಕೂಲಿ ನಿಗದಿಯಾಗಬೇಕು, ಬೀಡಿಯ ಖರೀದಿ ಮಾರಾಟದಂತಹ ವಂಚನೆಯ ಪದ್ಧತಿಗಳನ್ನೂ ಒಳಗೊಂಡು ಎಲ್ಲಾ ಮಧ್ಯವರ್ತಿ ವ್ಯವಸ್ಥೆಗಳನ್ನು ರದ್ದು ಮಾಡಬೇಕು, ತಿಂಗಳಲ್ಲಿ 26 ದಿನಗಳ ಕೆಲಸಕ್ಕೆ ಬೇಕಾಗುವಷ್ಟು ಎಲೆ ಮತ್ತು ತಂಬಾಕು ವಿತರಿಸಬೇಕು, ಎಲ್ಲಾ ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ ಮತ್ತು ಲಾಗ್‌ಬುಕ್ ನೀಡಬೇಕು, ಉತ್ಪಾದನೆಯಾದ ಪ್ರತಿ ಬೀಡಿಯ ಬಾಬ್ತು ಕೇಂದ್ರ ಅಬಕಾರಿ ತೆರಿಗೆ ಮತ್ತು ಕಲ್ಯಾಣ ನಿಧಿ ಶುಲ್ಕ ವಸೂಲಾಗಬೇಕು, ವಾರ್ಷಿಕ 20 ಲಕ್ಷದವರೆಗಿನ ಬೀಡಿ ಉತ್ಪಾದಕರಿಗೆ ನೀಡಲಾದ ಅಬಕಾರಿ ಸುಂಕ ವಿನಾಯಿತಿಯನ್ನು ಹಿಂತೆಗೆಯಬೇಕು, ಬೀಡಿ ಕಾನೂನು ಮತ್ತು ಕನಿಷ್ಠ ಕೂಲಿ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕು ಹಾಗೂ ಕನಿಷ್ಠ ಕೂಲಿಯನ್ನು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕು, ಮಿನಿ ಸಿಗರೇಟುಗಳಿಗೆ ನೀಡಲಾದ ಅಬಕಾರಿ ಸುಂಕ ರಿಯಾಯತಿಯನ್ನು ಹಿಂತೆಗೆಯಬೇಕು, 2003ರ ಧೂಮಪಾನ ನಿಷೇಧ ಕಾಯಿದೆಯ ಕಲಂ6(ಬಿ), 7,8 ಮತ್ತು 9ಕ್ಕೆ ತಿದ್ದುಪಡಿ ತಂದು ಬೀಡಿಯನ್ನು ಅದರ ವ್ಯಾಪ್ತಿಯಿಂದ ಹೊರತುಪಡಿಸಬೇಕು, ಬಹುರಾಷ್ಟ್ರೀಯ ಸಿಗರೇಟು ಕಂಪನಿಗಳಿಗೆ ಭಾರತದಲ್ಲಿ ಶೇ.100 ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡುವ ಸರ್ಕಾರದ ತೀರ್ಮಾನವನ್ನು ಹಿಂತೆಗೆಯಬೇಕು, ಭಾರತದ ಬೀಡಿಗಳಿಗೆ ಅಮೇರಿಕಾದಲ್ಲಿ ಹೇರಿದ ರಫ್ತು ನಿರ್ಬಂಧವನ್ನು ಹಿಂತೆಗೆಯುವಂತೆ ಸರ್ಕಾರವು ಅಮೇರಿಕದ ಮೇಲೆ ಒತ್ತಡ ಹಾಕಬೇಕು ಎಂಬ ಹತ್ತು ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರದ ಕರೆ ನೀಡಲಾಗಿತ್ತು.

ಮಂಗಳೂರು

ಯಶಸ್ವೀ ಮುಷ್ಕರ ನಡೆಸಿದ ಬೀಡಿ ಕಾರ್ಮಿಕರು ಮಂಗಳೂರಿನ ಅತ್ತಾವರದಲ್ಲಿರುವ ಕೇಂದ್ರ ಅಬಕಾರಿ ತೆರಿಗೆ ಇಲಾಖೆಯ ಕಛೇರಿಯ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟದ ಕಾರ್ಯಾಧ್ಯಕ್ಷರೂ, ಸಿಐಟಿಯು ರಾಜ್ಯಾಧ್ಯಕ್ಷರೂ ಆದ ಕಾಂ.ಬಿ.ಮಾಧವ ಅವರು ಮಾತನಾಡುತ್ತಾ ಬೀಡಿ ಕಾರ್ಮಿಕರಿಗೆ ವಾರಪೂರ್ತಿ ಕೆಲಸವಿಲ್ಲದ ಪರಿಸ್ಥಿತಿಗೆ ಕೇಂದ್ರ ಅಬಕಾರಿ ತೆರಿಗೆ ಇಲಾಖೆಯ ಬೇಜವಾಬ್ದಾರಿತನವು ಒಂದು ಪ್ರಮುಖ ಕಾರಣವಾಗಿದೆ ಎಂದು ಆಪಾದಿಸಿದರು. ವಾರ್ಷಿಕ 20 ಲಕ್ಷಕ್ಕಿಂತ ಕಡಿಮೆ ಉತ್ಪಾದನೆಯ ಹೆಸರಿನಲ್ಲಿ ಕೋಟಿಗಟ್ಟಲೆ ಬೀಡಿ ಉತ್ಪಾದಿಸುವ ಬ್ರಾಂಡ್ ರಹಿತ ಬೀಡಿ ತಯಾರಕರು ಅಬಕಾರಿ ತೆರಿಗೆ, ಕಲ್ಯಾಣ ನಿಧಿ ಸೆಸ್ ಇತ್ಯಾದಿ ಯಾವುದೇ ತೆರಿಗೆಗಳನ್ನು ನೀಡದೆ, ಕಾರ್ಮಿಕರಿಗೆ ಕಾನೂನುಬದ್ಧ ಸವಲತ್ತುಗಳನ್ನು ನೀಡದೆ ವಂಚಿಸುತ್ತಿದ್ದಾರೆ. ಈ ತೆರಿಗೆ ವಂಚಕರನ್ನು ಪತ್ತೆ ಹಚ್ಚಿ ಅವರಿಂದ ತೆರಿಗೆ ವಸೂಲು ಮಾಡುವ ತಮ್ಮ ಕರ್ತವ್ಯದಲ್ಲಿ ಕೇಂದ್ರ ಅಬಕಾರಿ ಇಲಾಖೆಯ ಅಧಿಕಾರಿಗಳು ವಿಫಲರಾಗಿದ್ದಾರೆ. ತೆರಿಗೆ ತಪ್ಪಿಸುವ ಮತ್ತು ಕಡಿಮೆ ಕೂಲಿಗೆ ಬೀಡಿ ಸುತ್ತಿಸುವ ಬೀಡಿ ತಯಾರಕರು ಮಾರುಕಟ್ಟೆಯಲ್ಲಿ ಅಸಮಾನ ಸ್ಪರ್ಧೆ ನಡೆಸುವುದರಿಂದಾಗಿ ಬ್ರಾಂಡ್ ಹೊಂದಿದ ದೊಡ್ಡ ಬೀಡಿ ಕಂಪನಿಗಳು ತಮ್ಮ ಉತ್ಪಾದನಾ ಚಟುವಟಿಕೆಯ ದೊಡ್ಡ ಭಾಗವನ್ನು ಕಡಿಮೆ ಕೂಲಿ ಇರುವ ರಾಜ್ಯಗಳಿಗೆ ವರ್ಗಾಯಿಸಿ ಈ ಜಿಲ್ಲೆಯ ಬೀಡಿ ಕಾರ್ಮಿಕರಿಗೆ ವಾರದಲ್ಲಿ 2 ಅಥವಾ 3 ದಿನಗಳ ಕೆಲಸ ಮಾತ್ರ ನೀಡಿ ಅವರನ್ನು ಅರೆ ಉಪವಾಸಕ್ಕೆ ತಳ್ಳಿದ್ದಾರೆ ಎಂದು ಹೇಳಿದರು.

ಜಿಲ್ಲೆಯ ಫೆಡರೇಶನ್ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಕನಿಷ್ಠ ಕೂಲಿ ನಿಗದಿಪಡಿಸಬೇಕು, ಧೂಮಪಾನ ನಿಷೇಧ ಕಾಯಿದೆ 2003ಕ್ಕೆ ತಿದ್ದುಪಡಿ ತಂದು ಬೀಡಿ ಕೈಗಾರಿಕೆಯನ್ನು ಕಲಂ 6(ಬಿ), 7,8 ಮತ್ತು 9 ರಿಂದ ಬೀಡಿಗೆ ವಿನಾಯಿತಿ ನೀಡಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಫೆಡರೇಶನ್ ಉಪಾಧ್ಯಕ್ಷರಾದ ಯು.ಬಿ.ಲೋಕಯ್ಯನವರು ಮಾತನಾಡುತ್ತಾ ಬೀಡಿ ಕಾರ್ಮಿಕರಿಗೆ ಕಲ್ಯಾಣ ನಿಧಿಯಿಂದ ಸಿಗುವ ಸ್ಕಾಲರ್‌ಶಿಪ್, ಚಿಕಿತ್ಸಾ ವೆಚ್ಚ, ಮನೆ ಕಟ್ಟಲು ಸಬ್ಸಿಡಿ ಸರಿಯಾಗಿ ಸಿಗದಿರಲು ಕೇಂದ್ರ ಅಬಕಾರಿ ಸುಂಕ ಅಧಿಕಾರಿಗಳ ಬೇಜವಾಬ್ದಾರಿಯೇ ಕಾರಣ ಎಂದರು.

ಅತ್ಯಧಿಕ ಸಂಖ್ಯೆಯಲ್ಲಿ ಮಹಿಳೆಯರೇ ಸೇರಿದ್ದ ಬೀಡಿ ಕಾರ್ಮಿಕರ ಬೃಹತ್ ಮೆರವಣಿಗೆ ತಾಲೂಕು ಕಛೇರಿಯ ಬಳಿಯಿಂದ ಹೊರಟು ಅತ್ತಾವರದಲ್ಲಿರುವ ಕೇಂದ್ರ ಅಬಕಾರಿ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿದರು. ಹತ್ತು ಅಂಶಗಳ ಬೇಡಿಕೆಗಳ ಪಟ್ಟಿಯನ್ನು ಸಹಾಯಕ ಆಯುಕ್ತರ ಮೂಲಕ ಪ್ರಧಾನ ಮಂತ್ರಿಯವರಿಗೆ ಸಲ್ಲಿಸಲಾಯಿತು.



ಜಿಲ್ಲಾ ಫೆಡರೇಶನ್ ಕಾರ್ಯದರ್ಶಿ ಸುಕುಮಾರ್ ಆರಂಭದಲ್ಲಿ ಸ್ವಾಗತಿಸಿ ಬೀಡಿ ಕಾರ್ಮಿಕರ ರಾಷ್ಟ್ರವ್ಯಾಪಿ ಮುಷ್ಕರದ ಮಹತ್ವವನ್ನು ವಿವರಿಸಿದರು.

ಮೂಡಬಿದ್ರೆ

ಮಂಗಳೂರು ತಾಲೂಕಿನ ಮೂಡಬಿದ್ರೆಯಲ್ಲಿ ಮುಷ್ಕರ ನಿರತ ಬೀಡಿ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ನಾಡ ಕಛೇರಿಯ ಮುಂದೆ ಪ್ರದರ್ಶನ ನಡೆಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮತ್ತು ರಾಜ್ಯ ಉಪಾಧ್ಯಕ್ಷೆ ರಮಣಿ ಅವರು ಮಾತನಾಡಿದರು. ಉಪ ತಹಶೀಲ್ದಾರರ ಮೂಲಕ ಮನವಿ ಅರ್ಪಿಸಲಾಯಿತು.

ಬಂಟ್ವಾಳ

ಬಂಟ್ವಾಳದಲ್ಲಿ ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿ ಬಿ.ಸಿ.ರೋಡ್ ನಲ್ಲಿರುವ ಕೇಂದ್ರ ಅಬಕಾರಿ ಸುಂಕ ಇಲಾಖೆಯ ಸುಪರಿಂಟೆಂಡೆಂಟ್ ಕಛೇರಿಯ ಮುಂದೆ ಪ್ರಬಲ ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರನ್ನು ಉದ್ದೇಶಿಸಿ ಬೀಡಿ ಕಾರ್ಮಿಕರ ನಾಯಕರಾದ ಬಿ.ವಾಸುಗಟ್ಟಿ, ಬಿ.ಸಂಜೀವ ಬಂಗೇರ ಮತ್ತು ರಾಮಣ್ಣ ವಿಟ್ಲ ಮಾತನಾಡಿದರು. ಉದಯಕುಮಾರ್ ಧನ್ಯವಾದ ಅರ್ಪಿಸಿದರು. ಬಿ.ವಾಸ ಗಟ್ಟಿಯವರ ನೇತೃತ್ವದ ನಿಯೋಗವು ಅಬಕಾರಿ ಸುಪರಿಂಟೆಂಡೆಂಟ್‌ರನ್ನು ಭೇಟಿಯಾಗಿ ಮನವಿ ಅರ್ಪಿಸಿತು.

ಬೆಳ್ತಂಗಡಿ

ಬೆಳ್ತಂಗಡಿಯಲ್ಲಿ ಮುಷ್ಕರ ನಿರತ ಬೀಡಿ ಕಾರ್ಮಿಕರು ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ತಾಲೂಕು ಕಛೇರಿಯ ಮುಂದೆ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರನ್ನು ಉದ್ದೇಶಿಸಿ ಬಿ.ಎಂ.ಭಟ್ ಮತ್ತು ಶಿವಕುಮಾರ್ ಮಾತನಾಡಿದರು. ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಅರ್ಪಿಸಲಾಯಿತು.

ಉಡುಪಿ ಜಿಲ್ಲೆ ಕುಂದಾಪುರ

ಕುಂದಾಪುರದಲ್ಲಿ ಬೀಡಿ ವರ್ಕರ್ಸ್ ಯೂನಿಯನ್ ಕುಂದಾಪುರ ವತಿಯಿಂದ ಬೃಹತ್ ಮೆರವಣಿಗೆ ಮತ್ತು ಮನವಿ ಅರ್ಪಿಸುವ ಕಾರ್ಯಕ್ರಮ ನಡೆಯಿತು.

ತಹಶೀಲ್ದಾರರ ಕಛೇರಿಯ ಎದುರು ಮತ ಪ್ರದರ್ಶನ ನಡೆಸಿ, ಮುಖ್ಯ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಕುಂದಾಪುರ ತಹಶೀಲ್ದಾರರ ಮುಖಾಂತರ ಮಾನ್ಯ ಕೇಂದ್ರ ಕಾರ್ಮಿಕ ಮಂತ್ರಿಯವರಿಗೆ, ರಾಜ್ಯ ಮುಖ್ಯಮಂತ್ರಿಯವರಿಗೆ ರಾಜ್ಯ ಕಾರ್ಮಿಕ ಮಂತ್ರಿಯವರಿಗೆ, ಜಿಲ್ಲಾಧಿಕಾರಿಯವರಿಗೆ ಕಳುಹಿಸಲಾಯಿತು.

ಮತ ಪ್ರದರ್ಶನಕಾರರನ್ನುದ್ದೇಶಿಸಿ ಬೀಡಿ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಮಹಾಬಲವಡೇರ ಹೋಬಳಿಯವರು ಮಾತನಾಡಿ ಸರ್ಕಾರ ನಿಗಧಿ ಮಾಡಿದ ಕನಿಷ್ಠಕೂಲಿ ಮತ್ತು ತುಟ್ಟಿಭತ್ಯೆಯನ್ನು ಜಾರಿಗೊಳಿಸಲು ಎಲ್ಲಾ ಬೀಡಿ ಕಾರ್ಮಿಕರಿಗೆ ಲಾಗ್ ಪುಸ್ತಕ, ಗುರುತಿನ ಚೀಟಿ, ಭವಿಷ್ಯನಿಧಿ ಒಳಪಡಿಸಲು ಸರ್ಕಾರ ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸಿದರು. ಸಿಐಟಿಯುನ ಉಡುಪಿ ಜಿಲ್ಲಾ ಅಧ್ಯಕ್ಷರಾದ ಕೆ.ಶಂಕರ್‌ರವರು ಮಾತನಾಡಿ ದೇಶದಾದ್ಯಂತ ಬೀಡಿ ಕಾರ್ಮಿಕರಿಗೆ ಸಮಾನ ಕನಿಷ್ಠ ಕೂಲಿಯನ್ನು ನಿಗದಿಗೊಳಿಸಬೇಕು, ಬೀಡಿ ಕಾರ್ಮಿಕರಿಗೆ ವಾರದಲ್ಲಿ 6 ದಿವಸ ಕೆಲಸ ಕಡ್ಡಾಯವಾಗಿ ಕೊಡಬೇಕು ಎಂದು ಒತ್ತಾಯಿಸಿದರು. ಮತ ಪ್ರದರ್ಶನದ ನೇತೃತ್ವದಲ್ಲಿ ಜಿ.ಬಿ.ಮಹಮ್ಮದ್, ರಮಾನಾಥ ಭಂಡಾರಿ, ಪ್ರೇಮ ತ್ರಾಸಿ, ಬೇಬಿ ನೆಲ್ಲಿಕಟ್ಟೆ, ರಾಧನೆಲ್ಲಿಕಟ್ಟೆ ಮತ್ತು ಸಾವಿತ್ರಿ ವಹಿಸಿದ್ದರು.



ತುಮಕೂರು

ತುಮಕೂರಿನಲ್ಲಿ ಸುಮಾರು 350 ಜನ ಬೀಡಿ ಕಾರ್ಮಿಕರು ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿದರು. ಈ ಕಾರ್ಯಕ್ರಮದ ನೇತೃತ್ವವನ್ನು ಸಂಘದ ರಾಜ್ಯ ಬೀಡಿ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್, ಜಿಲ್ಲಾ ಮುಖಂಡರಾದ ಮಹಮ್ಮದ್ ದಸ್ತಗೀರ್, ವಿ.ಕೋದಂಡರಾಮು ವಹಿಸಿದ್ದರು.

ಹರಿಹರ

ಹರಿಹರದಲ್ಲಿ ಸುಮಾರು 150 ಬೀಡಿ ಕಾರ್ಮಿಕರು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿದರು. ಕಾಂ.ಕೆ.ಎಲ್.ಭಟ್ ಮತ್ತು ಕಾಂ.ಉನ್ನೀತಾನ್ ನೇತೃತ್ವ ವಹಿಸಿದ್ದರು.

ಬೆಂಗಳೂರು

ಬೆಂಗಳೂರಿನಲ್ಲಿ ಮುಷ್ಕರ ನಿರತ ಬೀಡಿ ಕಾರ್ಮಿಕರು ಬೆಂಗಳೂರಿನ ಕಾರ್ಮಿಕ ಭವನದ ಮುಂದೆ ಧರಣಿ ನಡೆಸಿದರು. ನಂತರ ತಮ್ಮ ಬೇಡಿಕೆಗಳ ಮನವಿಯನ್ನು ಆಯುಕ್ತರು ಸ್ವೀಕರಿಸಲು ನಿರಾಕರಿಸಿದಾಗ ಬೀಡಿ ಕಾರ್ಮಿಕರು ಕಾರ್ಮಿಕ ಭವನದ ಒಳಗೆ ನುಗ್ಗಿ ಉಪ ಆಯುಕ್ತರಾದ ಶ್ರೀ.ನರಸಿಂಹಮೂರ್ತಿಯವರ ಕೊಠಡಿಯ ಮುಂದೆ ಧರಣಿ ನಡೆಸಿದರು. ನಂತರ ಉಪ ಆಯುಕ್ತರು ಧರಣಿ ಸ್ಥಳಕ್ಕೆ ಬಂದು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ ರಾಜ್ಯ ಸರ್ಕಾರಕ್ಕೆ ಬರುವ ಕೆಲವು ಬೇಡಿಕೆಗಳನ್ನು ಈಡೇರಿಸುತ್ತೇವೆಂದು ಭರವಸೆ ನೀಡಿ ಮನವಿಯನ್ನು ಸ್ವೀಕರಿಸಿದರು. ಧರಣಿಯ ನೇತೃತ್ವವನ್ನು ಜಿಲ್ಲಾ ಅಧ್ಯಕ್ಷರಾದ ಎಸ್.ವರಲಕ್ಷ್ಮಿ, ಉಪಾಧ್ಯಕ್ಷರಾದ ಬಸಮ್ಮ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಜಲೀಲ್‌ಖಾನ್, ನೂರ್‌ಖಾನ್ ಮತ್ತು ಸರ್ಫುನ್ನೀಸಾ ವಹಿಸಿದ್ದರು. ಈ ಧರಣಿಯಲ್ಲಿ ನೂರಾರು ಬೀಡಿ ಕಾರ್ಮಿಕರು ಭಾಗವಹಿಸಿದ್ದರು.

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 5ನೇ ವಾರ್ಷಿಕ ಮಹಾಸಭೆ

ನವೆಂಬರ್ 27 ರಂದು ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 5ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ವಿ.ನರಸಿಂಹನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿ ವಿರುದ್ಧ, ಇ.ಎಸ್.ಐ ಸೌಲಭ್ಯ ಕಂಡ್ಲೂರು ಪ್ರದೇಶದಲ್ಲಿ ಕಾರ್ಮಿಕರಿಗೆ ಸಿಗುವಂತಾಗಲು ಇ.ಎಸ್.ಐ. ಪೂರ್ಣ ಕಾಲದ ಡಿಸ್ಪೆನ್ಸರಿಯೊಂದನ್ನು ಕೂಡಲೇ ಕಂಡ್ಲೂರಿನಲ್ಲಿಯೇ ತೆರೆಯಬೇಕೆಂದು ಹಾಗೂ ಹಂಚು ಕಾರ್ಮಿಕರಿಗೆ ಕನಿಷ್ಠ ಕೂಲಿ ಪರಿಷ್ಕರಿಸುವಾಗ 'ಟಾಸ್ಕ್' ಒಂದಕ್ಕೆ (8 ಗಂಟೆ ಕೆಲಸ) ನಿಗದಿಗೊಳಿಸಿ, ಜ್ಯಾರಿಗೊಳಿಸಲು ಮತ್ತು ಉಡುಪಿಯ ಕಿನ್ನಿಮುಲ್ಕಿಯಲ್ಲಿರುವ ಇ.ಎಸ್.ಐ. ಡಿಸ್ಪೆನ್ಸರಿ ನಗರ ಮಧ್ಯಭಾಗದಲ್ಲಿ ಅಂದರೆ ಅಜ್ಜರ್‌ಕಾಡಿನ ಸಮೀಪ ತೆರೆಯಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಸಿ.ಐ.ಟಿ.ಯು.ವಿನ ಉಡುಪಿ ಜಿಲ್ಲಾ ಕಾರ್ಯದರ್ಶಿಯವರಾದ ಪಿ.ವಿಶ್ವನಾಥ ರೈಯವರು ಮಾತನಾಡಿ ವಾರ್ಷಿಕ ಮಹಾಸಭೆ ಯಶಸ್ವಿಯಾಗಲಿ ಎಂದು ಹಾರೈಸಿದರು. ಅಧ್ಯಕ್ಷತೆ ವಹಿಸಿದ ವಿ.ನರಸಿಂಹರವರು ಮಾತನಾಡಿ ಸಂಘದ ಕೇಂದ್ರ ಚಟುವಟಿಕೆಗೆ ಅನುಕೂಲವಾಗುವಂತೆ ಸ್ವಂತ ಕಚೇರಿಯ ಕಟ್ಟಡ ನಿರ್ಮಾಣವಾಗುತ್ತಿದ್ದು, ಅದಷ್ಟು ಬೇಗ ಪೂರ್ಣ ಗೊಳಿಸಲು ಸಾರ್ವಜನಿಕರ ಸಹಕಾರದೊಂದಿಗೆ ಮತ್ತೂ ಕಾರ್ಮಿಕರು ಇನ್ನೂ ಹೆಚ್ಚಿನ ಸಹಕಾರದೊಂದಿಗೆ ಸಾಧ್ಯವಾಗಬೇಕೆಂದರು. ಹಂಚು ಕಾರ್ಖಾನೆಗಳ ಕಾರ್ಮಿಕರ ಸಹಕಾರಿ ಸಂಘದ ಚಟುವಟಿಕೆಗಳ ಕುರಿತು ಮಾತನಾಡಿ, ಅದರ ಸ್ವಂತ ಕಛೇರಿಗೆ ಅವಕಾಶ ಇಲ್ಲಿ ನೀಡಲಾಗಿದೆ. ಹಾಗೆಯೇ ಆಟೋರಿಕ್ಷಾ ಚಾಲಕರ ಸಂಘಕ್ಕೆ ಕೂಡ ಸ್ವಂತ ಕಛೇರಿಗೆ ಇಲ್ಲಿ ಅವಕಾಶ ನೀಡಲಾಗಿದೆ ಎಂದು ಹೇಳಿದರು.

2005 ಮತ್ತು 2006ರ ಸಾಲಿನಲ್ಲಿ ಸಂಘದ ಅಧ್ಯಕ್ಷರಾಗಿ ವಿ.ನರಸಿಂಹ, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಶಂಕರ್, ಕೋಶಾಧಿಕಾರಿಯಾಗಿ ಎಚ್.ನರಸಿಂಹ, ಉಪಾಧ್ಯಕ್ಷರಾಗಿ ಜೆ.ಬಿ.ಮಹ್ಮದ್, ಪಿ.ವಿಶ್ವನಾಥ ರೈ, ಮಹಾಬಲ ವಡೇರಹೋಬಳಿ ಮತ್ತು ಸಿ.ನಾರಾಯಣ, ಜೊತೆ ಕಾರ್ಯದರ್ಶಿಗಳಾಗಿ ಮುತ್ತಯ್ಯ ಕನ್ಯಾನ, ಗೋಪಾಲ ಕುಲಾಲ ಮತ್ತು ಸಂಜೀವ ನಾಯ್ಕರವರನ್ನು ಆಯ್ಕೆ ಮಾಡಲಾಯಿತು. ಒಂದು ವರ್ಷದ ಚಟುವಟಿಕೆಗಳ ವರದಿಯನ್ನು ಪ್ರಧಾನ ಕಾರ್ಯದರ್ಶಿಯುವರಾದ ಕೆ.ಶಂಕರ್‌ರವರು ಮಂಡಿಸಿದರು. ಲೆಕ್ಕಪತ್ರದ ವರದಿಯನ್ನು ಸಂಘದ ಕೋಶಾಧಿಕಾರಿಯುವರಾದ ಎಚ್.ನರಸಿಂಹನವರು ಮಂಡಿಸಿದರು. ವರದಿಗಳ ಮೇಲೆ ಚರ್ಚೆ ನಡೆದು ಅಂಗೀಕರಿಸಲಾಯಿತು.

'ಮಾವೋವಾದಿ'ಗಳೆಂದು ತಮ್ಮ ಬಗ್ಗೆ ಘೋಷಿಸಿಕೊಂಡಿರುವ ನಕ್ಸಲೀಯರು ನಡೆಸುತ್ತಿರುವ ಹಿಂಸಾಚಾರಗಳು ವಿವೇಕ ಹೀನ - ಅಸಮರ್ಥನೀಯ ಎಂಬುದನ್ನು ಅರ್ಥ ಮಾಡಿಕೊಳ್ಳಲು ಭಾರತದ ರಾಜಕೀಯ, ಸಾಮಾಜಿಕ ವಾಸ್ತವದ ಕನಿಷ್ಠ ತಿಳುವಳಿಕೆಯಷ್ಟೇ ಸಾಕು. ಆದರೆ ಈ 'ಮಾವೋವಾದಿ'ಗಳು 'ಮಾರ್ಕ್ಸ್‌ವಾದ'ದಿಂದ ಮತ್ತು 'ಮಾವೋವಾದ'ದಿಂದಲೂ ದಾರಿತಪ್ಪಿ ಅರಾಜಕ ಹಿಂಸಾಚಾರದ ದಾರಿ ಹಿಡಿಯಲು ಕಾರಣವಾದ ಚಾರಿತ್ರಿಕ ಹಿನ್ನೆಲೆ - ಸೈದ್ಧಾಂತಿಕ ನೆಲೆಗಳ ಬಗ್ಗೆ ಅರ್ಥೈಸುವುದು ಮುಖ್ಯ. ಆ ಬಗ್ಗೆ ಸಿಪಿಐ(ಎಂ) ಮುಖಂಡರಾದ ಕಾಂ.ಸೀತಾರಾಂ ಯೆಚೂರಿ ಅವರ ಲೇಖನ.



ಸಿಪಿಐ(ಮಾವೋವಾದಿ) ಹಿಂಸಾಚಾರ

ಕ್ರಾಂತಿಕಾರಿಯೋ ಅಥವಾ ಅರಾಜಕವಾದಿಯೋ ?

ಜಹಾನಾಬಾದ್ ಜೈಲಿನಲ್ಲಿ ಸಿಪಿಐ(ಮಾವೋವಾದಿ) ನಡೆಸಿದ ಉದ್ಧಟ ಪ್ರಹಾರ ಭದ್ರತೆ ಮತ್ತು ಗುಪ್ತಚರ ಲೋಪಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನೆತ್ತಿದೆ. ಚುನಾವಣಾ ಆಯೋಗಕ್ಕೆ ಮುಕ್ತ ಮತ್ತು ನ್ಯಾಯವಾದ ಚುನಾವಣೆ ನಡೆಸುವುದಷ್ಟೇ ಮುಖ್ಯವಾಗಿ ಭದ್ರತಾ ಪಡೆಗಳನ್ನೆಲ್ಲಾ ಅತ್ತ ಕಳಿಸಿದ್ದು ಕೂಡಾ ಈ 'ಆಪರೇಶನ್ ಜೈಲ್ ಬ್ರೇಕ್' ಗೆ ನೆರವಾಯಿತು. ಅಲ್ಲದೆ ಈ ಸಂಘಟನೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೇಗೆ ಪಡೆಯಿತು, ವೃತ್ತಿಪರ ತರಬೇತಿ ಹೇಗೆಸಾಧ್ಯವಾಯಿತು, ಇತರ ಉಗ್ರಗಾಮಿ ಸಂಘಟನೆಗಳೊಡನೆ ಇದರ ಸಂಪರ್ಕಗಳೇನು ಎಂಬೆಲ್ಲಾ ಗಂಭೀರ ಪ್ರಶ್ನೆಗಳನ್ನು ಈ ಇಡೀ ಘಟನೆ ಎತ್ತುತ್ತದೆ. ಇವೆಲ್ಲಾ ಸರ್ಕಾರ ಮತ್ತು ಅದರ ಏಜೆನ್ಸಿಗಳ ಗಮನ ಸೆಳೆಯುತ್ತಿರುವಾಗಲೇ ಬೇರೆ ಕೆಲವು ಪ್ರಶ್ನೆಗಳನ್ನು ಚರ್ಚಿಸಬೇಕಾಗಿದೆ.

ಇಂತಹ ಹಿಂಸಾಚಾರವನ್ನು ಸಾಮಾನ್ಯವಾಗಿ ಎಡಪಂಥೀಯ ಹಿಂಸಾಚಾರ ಎಂದು ವರ್ಣಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಕಮ್ಯುನಿಸಂ 'ಹಿಂಸಾಚಾರ ಪಂಥ' ವನ್ನು ಪೋಷಿಸುತ್ತದೆ ಎಂದು ಖಂಡಿಸುವ, ಅರಾಜಕತೆ ಮತ್ತು ಕ್ರಾಂತಿಕಾರಿ ಚಟುವಟಿಕೆಗಳೆರಡೂ ಒಂದೇ ಎಂದು ಸಮೀಕರಿಸುವ ಪ್ರಯತ್ನಗಳು ನಡೆಯುತ್ತಿವೆ. ವಾಸ್ತವವಾಗಿ ಆರ್‌ಎಸ್‌ಎಸ್ ಇಂತಹ ಅರಾಜಕ ಹಿಂಸಾಚಾರ ಮತ್ತು ಸಿಪಿಐ(ಎಂ) ಮಾಡುತ್ತಿರುವ ಕ್ರಾಂತಿಕಾರಿ ಕೆಲಸ ಎರಡೂ ಒಂದೇ ಎಂದು ಹೇಳುತ್ತಾ ಸುಳ್ಳು ಪ್ರಚಾರ ನಡೆಸಿದೆ. ಆರ್‌ಎಸ್‌ಎಸ್ ತನ್ನ ರಾಜಕೀಯ ಗುರಿ ಸಾಧನೆಗಾಗಿ ಉದ್ದೇಶಪೂರ್ವಕವಾಗಿಯೇ ಅರಾಜಕ ಹಿಂಸಾಚಾರ ಮತ್ತು ಇಸ್ಲಾಮೀ ಮೂಲಭೂತವಾದ ಎರಡೂ ಕೂಡಾ ಒಂದೇ ಎಂದು ಹೇಳುವ ಮಟ್ಟಕ್ಕೂ ಹೋಗುತ್ತಿದೆ. ನಿಜ, ಆರ್‌ಎಸ್‌ಎಸ್ ಎಂದೂ ಇಂತಹ ಸುಳ್ಳುಗಳನ್ನು ಸೃಷ್ಟಿಸಿ ಜನಗಳಲ್ಲಿ ಗೊಂದಲ ಹುಟ್ಟಿಸುವುದು ಸಾಧ್ಯವಾಗಿಲ್ಲ, ಮುಂದೆಯೂ ಸಾಧ್ಯವಾಗದು. ಆದರೆ ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕು - ಅರಾಜಕವಾದ ಎಂಬುದು ಮಾರ್ಕ್ಸ್‌ವಾದಕ್ಕೆ ತದ್ವಿರುದ್ಧವಾದದ್ದು ಹಾಗೂ ಬುದ್ಧಿಶೂನ್ಯವಾದ ಸಮರಶೀಲತೆ ಕ್ರಾಂತಿಕಾರಿ ಚಟುವಟಿಕೆಯ ಮೂಲತತ್ವಗಳನ್ನೇ ನಿರಾಕರಿಸುತ್ತದೆ, ಸಾಮಾನ್ಯವಾಗಿ ಹಿಂದಕ್ಕೆ ತಳ್ಳುತ್ತದೆ.

ಐತಿಹಾಸಿಕ ಮೂಲ

ಇಂತಹ ಎಡ ಉಗ್ರವಾದ ಹೇಗೆ ಮೂಡಿಬಂತು ಎಂಬುದರ ಐತಿಹಾಸಿಕ ಮೂಲಗಳನ್ನು ಸಂಕ್ಷಿಪ್ತವಾಗಿ ನೆನಪಿಸಿಕೊಳ್ಳುವುದು ಅಗತ್ಯ. ಭಾರತೀಯ ಕಮ್ಯೂನಿಸ್ಟ್ ಆಂದೋಲನದಲ್ಲಿ ಒಂದು ದೀರ್ಘ ಸೈದ್ಧಾಂತಿಕ ಚರ್ಚೆಯ ನಂತರ 1964 ರಲ್ಲಿ ಸಿಪಿಐ(ಎಂ) ರಚನೆಗೊಂಡಿತು. ತಕ್ಷಣವೇ, ಆಗಿನ ಆಳುವ ಸರ್ಕಾರಗಳ ವಿರುದ್ಧ ಸಾಮೂಹಿಕ ಕ್ರೋಧದಿಂದಾಗಿ 1967 ರಲ್ಲಿ ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗ ಸರ್ಕಾರ ಸ್ಥಾಪನೆ ಗೊಂಡಿತು. ಇದರಿಂದ ಭೂಸುಧಾರಣೆಗಳ ಪ್ರಶ್ನೆಯ ಮೇಲೆ ಇನ್ನಷ್ಟು ಹೋರಾಟಗಳು ಹರಿದುಬಂದವು. ನಕ್ಸಲ್‌ಬಾರಿ ಎಂಬ ಹಳ್ಳಿಯಲ್ಲಿ ಸಂಘಟಿಸಿದ ಒಂದು ರೈತ ಚಳುವಳಿಯನ್ನು ಪಕ್ಷದ ಒಳಗಿನ ಕೆಲವು ವಿಭಾಗಗಳು ಭಾರತದಲ್ಲಿ ಪ್ರಭುತ್ವ ಅಧಿಕಾರವನ್ನು ವಶಪಡಿಸಿಕೊಳ್ಳುವ ಒಂದು ಹೋರಾಟ ಎಂಬ ಮಟ್ಟಕ್ಕೆ ಏರಿಸಿದವು. ಇದು, ಒಂದೆಡೆ ಪರಿಷ್ಕರಣಾವಾದೀ ಮಾರ್ಗಚ್ಯುತಿಯನ್ನು ಎದುರಿಸಿ ಹೋರಾಡುವಾಗ, ಇನ್ನೊಂದೆಡೆ ಎಡ ದುಸ್ಸಾಹಸವಾದೀ ಮಾರ್ಗಚ್ಯುತಿಯತ್ತ ಜಾರುವ ಭಯವಿರುತ್ತದೆ ಎಂಬುದನ್ನು ಸಾಬೀತು ಮಾಡಿತು. ಇಂತಹ ಮಾರ್ಗಚ್ಯುತಿಗೆ ಬಲಿಯಾದವರು ಮುಂದೆ ಮೇ 1969 ರಲ್ಲಿ ಸಿಪಿಐ(ಎಂಎಲ್) ರಚಿಸಿಕೊಂಡರು.

ಈ ಮಾರ್ಗಚ್ಯುತಿಯ ಹಿಂದಿರುವ ಕೆಲವು ಸೈದ್ಧಾಂತಿಕ ಪ್ರಶ್ನೆಗಳನ್ನು ಚರ್ಚಿಸುವ ಮೊದಲು ಒಂದೊಮ್ಮೆ ಲೆನಿನ್ ಮಾರ್ಕ್ಸ್‌ವಾದದ ಬಗ್ಗೆ ಏನು ಹೇಳಿದ್ದರೆಂಬುದನ್ನು ನೆನಪಿಸಿಕೊಳ್ಳುವುದು ಅಗತ್ಯ: "ಎಲ್ಲಾ ದೇಶಗಳ ಸಮಾಜವಾದಿಗಳನ್ನು ಸೆಳೆಯುವ ಈ ಸಿದ್ಧಾಂತದ ತಡೆಯಲಾಗದ ಆಕರ್ಷಣೆಯಿರುವುದು ಅದರಲ್ಲಿ ಕಟ್ಟುನಿಟ್ಟಾಗಿ, ಅತ್ಯಂತ ವೈಜ್ಞಾನಿಕವಾಗಿರುವ ಗುಣದ ಜತೆಗೆ ಕ್ರಾಂತಿಕಾರಿಯಾಗಿರುವ ಗುಣವನ್ನು ಮೇಳೈಸಿದೆ ಎಂಬ ಕಾರಣದಿಂದಾಗಿಯೇ. ಇದು ಆಕಸ್ಮಿಕವಾಗಿ ಮೇಳೈಸಿದ್ದಲ್ಲ ಅಥವಾ ಈ ಸಿದ್ಧಾಂತ ಸ್ಥಾಪಕನ ವ್ಯಕ್ತಿತ್ವದಲ್ಲಿ ಒಬ್ಬ ವಿಜ್ಞಾನಿಯ ಹಾಗೂ ಒಬ್ಬ ಕ್ರಾಂತಿಕಾರಿಯ ಗುಣಗಳು ಮೇಳೈಸಿದ್ದವು ಎಂಬ ಕಾರಣಕ್ಕಾಗಿಯೂ ಅಲ್ಲ. ಅದು ಆ ಸಿದ್ಧಾಂತದಲ್ಲೇ ಅಡಕವಾಗಿದೆ, ಅವಿಭಾಜ್ಯವಾಗಿದೆ".

ಹೀಗೆ ವೈಜ್ಞಾನಿಕ ಹಾಗೂ ಕ್ರಾಂತಿಕಾರಕ ಅಂಶಗಳನ್ನು ಮೇಳೈಸುವ ಸಾಮರ್ಥ್ಯ ಮಾರ್ಕ್ಸ್‌ವಾದ-ಲೆನಿನ್‌ವಾದದ ಸೃಜನಾತ್ಮಕ ವಿಜ್ಞಾನದ ಸಾರಾಂಶ ಎಂಬುದು ಸ್ಪಷ್ಟ. ಮಾರ್ಕ್ಸ್‌ವಾದ ವೈಜ್ಞಾನಿಕ ತಿರುಳಿಗೇ ಒತ್ತು ನೀಡಿ ಅದರ ಕ್ರಾಂತಿಕಾರಿ ಅಂಶಗಳನ್ನು ನಿರ್ಲಕ್ಷಿಸಿದರೆ ಅದು ಬಲ ಪರಿಷ್ಕರಣವಾದ ಅಥವಾ ವರ್ಗ ಶಾಮೀಲಿನತ್ತ ಒಯ್ಯುತ್ತದೆ. ಅದೇ ರೀತಿ, ಕ್ರಾಂತಿಕಾರಿ ಅಂಶವನ್ನೇ ಮುಖ್ಯವಾಗಿ ಭಾವನಾತ್ಮಕ ರೋಷದ ಮಟ್ಟದಲ್ಲಿ ಎತ್ತಿ ಹಿಡಿದರೆ ಕಮ್ಯುನಿಸ್ಟ್ ಆಂದೋಲನವನ್ನು ಎಡದುಸ್ಸಾಹಸವಾದದ ತಪ್ಪು



ಮಾರ್ಗದತ್ತ ಒಯ್ಯುವ ಭಯವಿರುತ್ತದೆ. ಈ ಎರಡೂ ಸಂದರ್ಭಗಳಲ್ಲಿ ಕಮ್ಯೂನಿಸ್ಟ್ ಆಂದೋಲನ ಹಳಿ ತಪ್ಪುವ ಅಪಾಯವಿರುತ್ತದೆ.

ತಪ್ಪು ತಿಳುವಳಿಕೆ

ಭಾರತೀಯ ಆಳುವ ವರ್ಗಗಳು 'ಕಾಂಪ್ರೆಡೋರ್ ಬೂರ್ಜ್ವಾ' ವರ್ಗ ಅಥವಾ ಸಾಮ್ರಾಜ್ಯಶಾಹಿಯ ಏಜೆಂಟರಷ್ಟೇ, ಆದ್ದರಿಂದ ಅವರಿಗೇನೂ ಸಾಮಾಜಿಕ ಶಕ್ತಿಯಿಲ್ಲ, ಅಥವಾ ದೇಶದೊಳಗೆ ಸಾಮೂಹಿಕ ಬೆಂಬಲಿಗರಿಲ್ಲ ಎಂಬ ತಪ್ಪು ತಿಳುವಳಿಕೆಯನ್ನು ಆಧರಿಸಿದ ನಕ್ಸಲೀಯರ ಪ್ರಕಾರ ಆಳುವ ವರ್ಗಗಳನ್ನು ಕಿತ್ತೆಸೆಯುವುದು ಯಾವಾಗ ಎಂಬುದಷ್ಟೇ ಈಗ ಉಳಿದಿರುವ ಪ್ರಶ್ನೆ. ಆದ್ದರಿಂದ ಜನಗಳನ್ನು ಅಣಿನೆರೆಸುವ ಅಥವಾ ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ಅಗತ್ಯವಿಲ್ಲ. ಆಳುವ ವರ್ಗಗಳನ್ನು ಕಿತ್ತೆಸೆದು ಕ್ರಾಂತಿ ನಡೆಸಲು ಜನ ಸಿದ್ಧರಾಗಿದ್ದಾರೆ, ಈಗ ಅಗತ್ಯವಾಗಿರುವುದು ಜನಗಳನ್ನು ಸಶಸ್ತ್ರಗೊಳಿಸುವುದು ಎಂದು ಭಾವಿಸಲಾಗಿದೆ. ಆದ್ದರಿಂದಲೇ 'ಜನತಾಯುದ್ಧ' ಘೋಷಣೆ ಮೂಡಿಬಂತು. ಈ ಘೋಷಣೆಯೊಂದಿಗೇ ಅದರ ಅವಳಿಯಾದ ವರ್ಗಶತ್ರುಗಳ 'ನಿರ್ನಾಮ' ದ ಘೋಷಣೆಯೂ ಬಂತು. ನಂತರದ ವರ್ಷಗಳಲ್ಲಿ ವ್ಯಾಪಕ ಹಿಂಸಾಚಾರ ಮತ್ತು ಅರಾಜಕತೆ ಕಂಡುಬಂತು. ಸಿಪಿಐ(ಎಂ) ಇದರ

ಸೀತಾರಾಂ ಯೆಚೂರಿ

ಮುಖ್ಯಗುರಿಯಾಗಿತ್ತು, ಏಕೆಂದರೆ ಅದು ಈ ಪ್ರಕ್ರಿಯೆಗೆ ಅಡ್ಡಿ ಪಡಿಸುತ್ತದೆ ಎಂದು ಕಾಣಲಾಗಿತ್ತು.

ಆದರೆ ಐದು ವರ್ಷಗಳೊಳಗೇ ನಕ್ಸಲೀಯ ಆಂದೋಲನ ಛಿದ್ರಗೊಂಡು ಅಸಂಖ್ಯ ಸಣ್ಣ ಗುಂಪುಗಳಾಗಿ ಹರಿಹಂಚಿಹೋದವು. ಈ ಪ್ರಕ್ರಿಯೆ ಕೆಲವು ದಶಕಗಳವರೆಗೂ ನಡೆಯಿತು. ಒಂದು ಗುಂಪು - ಸಿಪಿಐ(ಎಂಎಲ್) ಈ ತಿಳುವಳಿಕೆಯನ್ನು ತ್ಯಜಿಸಿ, ಚುನಾವಣೆಗಳಲ್ಲಿ ಸ್ಪರ್ಧಿಸಿ ರಾಜಕೀಯದ ಮುಖ್ಯ ಧಾರೆಗೆ ಹಿಂದಿರುಗಿದರೆ, ಇನ್ನೆರೆಡು ಗುಂಪುಗಳು, ಆಂಧ್ರಪ್ರದೇಶದಲ್ಲಿನ 'ಪೀಪಲ್ಸ್ ವಾರ್ ಗ್ರೂಪ್ (ಪಿಡಬ್ಲ್ಯುಜಿ) ಹಾಗೂ ಝಾರ್ಖಂಡ್ ಮತ್ತು ಬಿಹಾರದ ಪ್ರದೇಶಗಳಲ್ಲಿ ಇರುವ ಮಾವೋವಾದಿ ಕಮ್ಯೂನಿಸ್ಟ್ ಕೇಂದ್ರ (ಎಂಸಿಸಿ) ತಮ್ಮ ಅರಾಜಕ ಹಿಂಸಾ ಚಟುವಟಿಕೆಗಳನ್ನು ಮುಂದುವರೆಸಿದವು. ಒಂದೊಮ್ಮೆ ಸೈದ್ಧಾಂತಿಕವಾಗಿ ಮುಖಾಮುಖಿಯಾಗಿ ನಿಂತಿದ್ದ ಈ ಎರಡೂ ಗುಂಪುಗಳು ಸೇರಿ ಸೆಪ್ಟೆಂಬರ್ 21, 2004 ರಂದುಹೊಸ ಪಕ್ಷವೊಂದನ್ನು ರಚಿಸಿದರು - ಸಿಪಿಐ (ಮಾವೋವಾದಿ). ಜೆಹನಾಬಾದ್ ಜೈಲ್ ಧಾಳಿ ನಡೆಸಿದ್ದು ಈ ಪಕ್ಷ.

ಸಿಪಿಐ(ಎಂ) ಸದಾ ಈ ಗುಂಪುಗಳ ಪ್ರಮುಖ ಗುರಿ. ಸಿಪಿಐ(ಎಂ)ನ ಅಸಂಖ್ಯ ಕಾರ್ಯಕರ್ತರ ಮೇಲೆ ಗುರಿಯಿಟ್ಟು ಕೊಲ್ಲಲಾಗಿದೆ. ಅಲ್ಲದೆ ಅವರ ಅರಾಜಕ ಹಿಂಸಾಚಾರ ಹಲವು ಮುಗ್ಧರ ಪ್ರಾಣಗಳ ಬಲಿತೆಗೆದುಕೊಂಡಿದೆ.

1991 ರಿಂದ 2001 ರ ನಡುವೆ ನಕ್ಸಲೀಯ ಸಂಬಂಧಿ ಹಿಂಸಾಚಾರದಲ್ಲಿ 2077 ಜನ, ಹೆಚ್ಚಿನವರು ಸಾಮಾನ್ಯ ಜನ ಬಲಿಯಾದರು.

ಕೊಲ್ಲುವ ವಿಧಾನವೂ ಭೀಕರ

2002 ರಲ್ಲಿ ಮಾವೋವಾದಿಗಳು 90 ಮಂದಿಯನ್ನು ಕೊಂದರು, 2003 ರಲ್ಲಿ ಈ ಸಂಖ್ಯೆ 136, 2004 ಲ್ಲಿ 70 ಮತ್ತು 2005 ರಲ್ಲಿ ಜೆಹನಾಬಾದ್ ಘಟನೆಯ ಮೊದಲು 122. ಜನಗಳನ್ನು ಕೊಲ್ಲುವ ಮೊದಲು ಅವರನ್ನು 'ಪೊಲೀಸರಿಗೆ ಮಾಹಿತಿ ನೀಡುವವರು' ಎಂದು ಗುರುತಿಸುವುದು ಮಾವೋವಾದಿಗಳ ಚಟವಾಗಿದ್ದರೂ, ಅವರು ಕೊಂದವರಲ್ಲಿ 80 ಶೇಕಡಾ ಸಾಮಾನ್ಯ ಜನರು, ಮಾವೋವಾದಿ ಮಾನದಂಡದ ಪ್ರಕಾರವೂ ಅವರ ವರ್ಗಶತ್ರುಗಳಲ್ಲ. ಕೊಲೆಯಾದ ಕೆಲವರಂತೂ ಪ್ರತಿಸ್ಪರ್ಧಿ ನಕ್ಸಲೀಯ ಗುಂಪಿನ ಸದಸ್ಯರು ಅಥವಾ ಬೆಂಬಲಿಗರು - ಅಂದರೆ ಇದು ಒಂದು ಆಂತರಿಕ ಕಲಹವಷ್ಟೇ ಆಗಿತ್ತು.

ಗಂಭೀರ ಸೈದ್ಧಾಂತಿಕ ಲೋಪ

ಇಂತಹ ದೂಷಣಾರ್ಹ ಹಿಂಸಾ ಚಟುವಟಿಕೆಯಷ್ಟೇ ಅಲ್ಲ, ಒಂದ ಗಂಭೀರ ಸೈದ್ಧಾಂತಿಕ ಸಮಸ್ಯೆಯೂ ಇದೆ. ಅವರು 'ಮಾವೋವಾದ'ದ ಹೆಸರಿಟ್ಟುಕೊಂಡ ಕ್ರಾಂತಿಪೂರ್ವ ಚೀಣಾದ ಅನುಭವವನ್ನು ಆಧುನಿಕ ಭಾರತದಲ್ಲಿ ಪುನಾರವರ್ತಿಸಲು ಪ್ರಯತ್ನಿಸುತ್ತಾರೆ. ಭಾರತದ ಆಂತರಿಕ ಪರಿಸ್ಥಿತಿಗಳನ್ನು ಎಷ್ಟರಮಟ್ಟಿಗೆ ಅವರು ಉದ್ದೇಶಪೂರ್ವಕವಾಗಿ ಉಪೇಕ್ಷಿಸಿದ್ದಾರೆಂದರೆ 'ಚೀಣಾದ ಅಧ್ಯಕ್ಷ ನಮ್ಮ ಅಧ್ಯಕ್ಷ' ಎಂಬ ಘೋಷಣೆಯನ್ನು ಕೊಡುವ ಮಟ್ಟದವರೆಗೂ ಹೋಗಿದ್ದಾರೆ. ಹೀಗೆ ಅವರು ಭಾರತದ ಸಾಮಾಜಿಕ - ಆರ್ಥಿಕ ವಾಸ್ತವತೆಗಳ ಮಾರ್ಕ್ಸ್‌ವಾದಿ ವಿಶ್ಲೇಷಣೆಯಲ್ಲಿ ತೊಡಗಿಸಿಕೊಳ್ಳಲು ನಿರಾಕರಿಸಿದ್ದಾರೆ. ಆ ಮೂಲಕ ಅವರು ಮಾವೋರನ್ನೇ ತಿರಸ್ಕರಿಸಿದ್ದಾರೆ. ತನ್ನದೇ ದೇಶದಲ್ಲಿ ವಿಕಾಸಗೊಳ್ಳುತ್ತಿರುವ ಸನ್ನಿವೇಶವನ್ನು ವಿಶ್ಲೇಷಿಸಲು ಅಸಮರ್ಥವಾದ, ಅದರ ಬದಲು ಇನ್ನೊಂದು ದೇಶದ ಅನುಭವವನ್ನು ವಿಶ್ಲೇಷಣೆಯಿಲ್ಲದೆಯೇ ಅನುಸರಿಸುವ ಒಂದು ಪಕ್ಷ ಒಂದು 'ಕಲಬೆರಕೆ' ಎಂದು ಒಮ್ಮೆ ಮಾವೋ ಹೇಳಿದ್ದರು. ನಿಜ ಸಂಗತಿಯೆಂದರೆ ಚೀಣೀ ಕಮ್ಯೂನಿಸ್ಟ್ ಪಕ್ಷ ಎಂದೂ ಮಾವೋವಾದಿ ಎಂಬ ಪದವನ್ನು ಬಳಸಿಲ್ಲ. 'ಮಾವೋ ಝೆ ಡೆಂಗ್ ವಿಚಾರ' ಎಂಬ ಪದವನ್ನೇ ಸತತವಾಗಿ ಬಳಸಿದ್ದಾರೆ. 'ಮಾರ್ಕ್ಸ್‌ವಾದ-ಲೆನಿನ್ ವಾದದ ಸಾರ್ವತ್ರಿಕ ತತ್ವಗಳನ್ನು ಚೀಣೀ ಕ್ರಾಂತಿಯ ಮೂರ್ತ ಆಚರಣೆಗಳೊಂದಿಗೆ ಸಮಗ್ರೀಕರಿಸುವುದೇ' ಅವರ ಪ್ರಕಾರ 'ಮಾವೋ ಝೆ ಡೆಂಗ್ ವಿಚಾರ'. ಅಂದರೆ ಇದು ನಿರ್ದಿಷ್ಟ ಚೀಣೀ ಸನ್ನಿವೇಶಕ್ಕೆ, ಚೀಣೀ ಅನುಭವಕ್ಕೆ ಸೀಮಿತವಾದದ್ದು ಎಂಬುದು ಸ್ಪಷ್ಟ. ಇದನ್ನು ಸಾರ್ವತ್ರಿಕಗೊಳಿಸಿ ಆಧುನಿಕ ಭಾರತೀಯ ಪರಿಸ್ಥಿತಿಗಳಿಗೆ ಅದನ್ನು ಅನ್ವಯಿಸುವುದು ಒಂದು ಗಂಭೀರ ಸೈದ್ಧಾಂತಿಕ ಲೋಪ.

ಸಿಪಿಐ(ಎಂ) ನಿಲುವು

ಸಿಪಿಐ(ಎಂ) ಈ ಎರಡೂ ಸೈದ್ಧಾಂತಿಕ ನಿಲುವುಗಳನ್ನು ಹಾಗೂ ವಿವಿಧ ನಕ್ಸಲೀಯ ಗುಂಪುಗಳ ಆಚರಣೆಗಳನ್ನು ತಿರಸ್ಕರಿಸುತ್ತ ತನ್ನ ಕಾರ್ಯಕ್ರಮದಲ್ಲಿ ಹೀಗೆ ಹೇಳಿದೆ:

"ಕಾರ್ಮಿಕ - ರೈತ ಸಖ್ಯತೆಯ ಬುನಾದಿಯೊಂದಿಗೆ, ಎಲ್ಲಾ ದೇಶಪ್ರೇಮಿ, ಪ್ರಜಾಸತ್ತಾತ್ಮಕ ಶಕ್ತಿಗಳ ಕ್ರಾಂತಿಕಾರಿ ಐಕ್ಯತೆಯ ಮೂಲಕ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಉದ್ದೇಶಗಳನ್ನು ಸಾಧಿಸಲು ನಡೆಯುವ ಹೋರಾಟವು ಜಟಿಲವೂ ಮತ್ತು ದೀರ್ಘ ಕಾಲಿಕವೂ

ಪುಟ 8ಕ್ಕೆ

ಡಿಸೆಂಬರ್ 13 ರಿಂದ 18, 2005 ವರೆಗೆ ಹಾಂಗ್‌ಕಾಂಗ್‌ನಲ್ಲಿ ವಿಶ್ವವ್ಯಾಪಾರ ಸಂಘಟನೆ (WTO)ಯು ಸಚಿವ ಮಟ್ಟದ ಸಮ್ಮೇಳನ ನಡೆಯುತ್ತಿದೆ. ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿಯ ಪಾದಗಳಿಗೆರಗಲು - ಶ್ರೀಮಂತ ದೇಶಗಳ ಹಿತಾಸಕ್ತಿಗಳಿಗೆ ಶರಣಾಗಲು ತುಡಿಯುತ್ತಿರುವ ಭಾರತ ಸರ್ಕಾರದ ಧೋರಣೆಯು ಬದಲಾಗಬೇಕೆಂದು ಆಗ್ರಹಿಸಿರುವ ಎಡಪಕ್ಷಗಳು ರಾಷ್ಟ್ರವ್ಯಾಪಿ ಆಂದೋಲನಕ್ಕೆ ಕರೆ ನೀಡಿವೆ. ಡಿಸೆಂಬರ್ 13 ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ಸಿಪಿಐ(ಎಂ) ಪಕ್ಷ ಕರೆ ನೀಡಿದೆ.

2003 ರ ಕ್ಯಾನ್‌ಕುನ್ ಸಚಿವ ಮಟ್ಟದ ಸಭೆಯ ಸಂದರ್ಭದಲ್ಲಿ ದೇಶದಲ್ಲಿ ನಡೆದ ವ್ಯಾಪಕ ಆಂದೋಲನಗಳ ಒತ್ತಡದಿಂದಾಗಿ ಭಾರತವು ಜಿ.-20, ಜಿ-23 ಒಕ್ಕೂಟಗಳ ಮೂಲಕ ವಹಿಸಿದ ಸಕಾರಾತ್ಮಕ ಪಾತ್ರವನ್ನು ಮುಂದುವರಿಸುವ ಬದಲಿಗೆ ಶ್ರೀಮಂತ ದೇಶಗಳ ತಂತ್ರಗಳಿಗೆ ಬಲಿಯಾಗಿ ಚಂಚಲತೆ ತೋರುತ್ತಿರುವುದು ಆತಂಕಕಾರಿಯಾಗಿದೆ.

ಭಾರತ ಸರ್ಕಾರ ವಿಶ್ವ ವ್ಯಾಪಾರ ಸಂಘಟನೆಯ ಒತ್ತಡ

ಡಿಸೆಂಬರ್ 13 ದೇಶಾದ್ಯಂತ ಪ್ರತಿಭಟನೆಗೆ ಕರೆ

ನಿತ್ಯಾನಂದಸ್ವಾಮಿ

2005 ಡಿಸೆಂಬರ್ 13 ರಿಂದ 18 ರ ವರೆಗೆ ಹಾಂಗ್‌ಕಾಂಗ್ ನಗರದಲ್ಲಿ ವಿಶ್ವ ವ್ಯಾಪಾರ ಸಂಘಟನೆ (WTO) ಯ ಸಚಿವ ಮಟ್ಟದ 6ನೇ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನದಲ್ಲಿ ನಡೆಯುವ ಮಾತುಕತೆಗಳ ಕೊನೆಯಲ್ಲಿ ಕೈಗೊಳ್ಳಲಾಗುವ ತೀರ್ಮಾನಗಳು ನಮ್ಮ ದೇಶದ ಅರ್ಥವ್ಯವಸ್ಥೆಯ ಮೇಲೆ, ದೇಶದ ಜನತೆಯ ಮೇಲೆ ಮುಖ್ಯವಾಗಿ ರೈತರ ಮೇಲೆ ಹಾಗೂ ದುಡಿಯುವ ಜನವಿಭಾಗಗಳ ಮೇಲೆ ದೂರಗಾಮಿಯಾದ, ಮುಂದೆ ಬದಲಾಯಿಸಲಿಕ್ಕೂ ಸಾಧ್ಯವಾಗದ ಪ್ರತಿಕೂಲ ಪರಿಣಾಮಗಳನ್ನು ಬೀರುವ ಅಪಾಯವಿದೆ.

1995 ರಲ್ಲಿ WTO ಸ್ಥಾಪನೆಯಾದಾಗ, ಅದು ಅಭಿವೃದ್ಧಿ ಹೊಂದುತ್ತಿರುವ, ಕನಿಷ್ಠ ಅಭಿವೃದ್ಧಿ ಹೊಂದಿರುವ ದೇಶಗಳಿಗೆ ವರದಾನವಾಗಲಿದೆ ಎಂದೂ ಮುಕ್ತ ವ್ಯಾಪಾರವನ್ನು ವಿಸ್ತರಿಸುವ ಮೂಲಕ ವಿಶ್ವ ದಾರಿದ್ರ್ಯವನ್ನೂ, ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡಲಿದೆ ಎಂದೂ ಹೇಳಲಾಗಿತ್ತು. ಆದರೆ ಕಳೆದ ಹತ್ತು ವರ್ಷಗಳ ವಿಶ್ವ ಅನುಭವ ಇದಕ್ಕೆ ತದ್ವಿರುದ್ಧವಾಗಿದೆ. ಕೃಷಿ ಕುರಿತಾದ ಒಪ್ಪಂದ (AOA) ದಿಂದ ಅಮೆರಿಕ ಮತ್ತು ಯುರೋಪ್ ಒಕ್ಕೂಟದ ದೇಶಗಳಿಗೆ ಭಾರಿ ಸಬ್ಸಿಡಿಗಳನ್ನು ಕೊಟ್ಟು ಅಗ್ಗಗೊಳಿಸಿದ ತಮ್ಮ ಧಾನ್ಯಗಳನ್ನು ಮತ್ತು ಇತರ ಆಹಾರ ಪದಾರ್ಥಗಳನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕೃಷಿ ಮಾರುಕಟ್ಟೆಗಳಲ್ಲಿ ರಾಶಿ ಹಾಕಲು ಸಾಧ್ಯವಾಗಿದೆ ಮತ್ತು ಆ ಮೂಲಕ ಆ ದೇಶಗಳ ಕೋಟ್ಯಾಂತರ ರೈತರ ಮತ್ತು ಕೃಷಿ ಕಾರ್ಮಿಕರ ಬದುಕನ್ನು ನಾಶ ಮಾಡಲು ಮಾತ್ರ ಸಾಧ್ಯವಾಗಿದೆ. ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳ (TRIPS) ಒಪ್ಪಂದವೂ ನಮ್ಮಂತಹ ದೇಶಗಳ ಸಮುದಾಯಗಳು ಅನುಭವಿಸುತ್ತಿದ್ದ ಬೀಜ, ತಳಿಗಳು, ದೇಶೀಯ ಜ್ಞಾನ, ಸಂಶೋಧನೆಗಳ ಹಕ್ಕುಗಳನ್ನು ಕಬಳಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ ತಂತ್ರಜ್ಞಾನ ಅಭಿವೃದ್ಧಿಯ ಗುತ್ತಿಗೆಯನ್ನೇ ಒಪ್ಪಿಸಿಬಿಟ್ಟಿದೆ. ಸೇವೆಗಳ ವ್ಯಾಪಾರ ಕುರಿತಾದ ಸಾರ್ವತ್ರಿಕ ಒಪ್ಪಂದ (GATS)ವು ಸೇವಾಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ಪ್ರವೇಶಾವಕಾಶವನ್ನು ಒದಗಿಸಿದೆಯಲ್ಲದೆ ಸಾರ್ವಜನಿಕ ರಂಗವನ್ನು ಕುಗ್ಗಿಸಿ ನೀರು, ವಿದ್ಯುತ್, ಆರೋಗ್ಯ, ಶಿಕ್ಷಣ ಮೊದಲಾದ ಅವಶ್ಯಕ ಸೇವೆಗಳ ನಿರ್ವಹಣೆಗೆ ಬೆದರಿಕೆಯೊಡ್ಡಿದೆ. ಕೃಷಿಯೇತರ ಮಾರುಕಟ್ಟೆ ಪ್ರವೇಶ (NAMA) ಚೌಕಟ್ಟಿನ ಮೂಲಕ ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳು ದಕ್ಷಿಣದ ದೇಶಗಳ ಮಾರುಕಟ್ಟೆಗಳನ್ನು ಆವರಿಸಿಕೊಳ್ಳುವಂತಾಗಿದೆ. ಅಲ್ಲದೆ ಕೈಗಾರಿಕೆಗಳ ವಿನಾಶಕ್ಕೆ, ನಿರುದ್ಯೋಗದ ಹೆಚ್ಚಳಕ್ಕೆ ಕಾರಣವಾಗಿದೆ. ಆದ್ದರಿಂದ ಮುಂಬರುವ ಹಾಂಗ್‌ಕಾಂಗ್ ಸಚಿವ ಮಟ್ಟದ ಸಭೆಯಲ್ಲಿ, ಕೃಷಿ, ಬೌದ್ಧಿಕ ಆಸ್ತಿ ಹಕ್ಕುಗಳು, ಸೇವೆಗಳು, ಕೃಷಿಯೇತರ ಮಾರುಕಟ್ಟೆ ಮೊದಲಾದ ಕೆಲವು ಪ್ರಮುಖ ವಿಷಯಗಳ ಬಗ್ಗೆ ಭಾರತ ಸರ್ಕಾರ ಯಾವ ಧೋರಣೆಯನ್ನು ಅನುಸರಿಸಲಿದೆ, ಯಾವ ನಿಲುಮೆಯನ್ನು ಪ್ರತಿಪಾದಿಸಲಿದೆ ಎನ್ನುವುದು ಮುಖ್ಯವಾಗಿದೆ.

ಅಭಿವೃದ್ಧಿ ವಿರೋಧಿ ಜುಲೈ ಒಪ್ಪಂದ

ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟದ ಹಿಡಿತದಲ್ಲಿರುವ ವಿಶ್ವ ವ್ಯಾಪಾರ ಸಂಘಟನೆಯಲ್ಲಿ ಸದಸ್ಯ ರಾಷ್ಟ್ರಗಳ ನಡುವೆ ಸಮಾನತೆಯಾಗಲಿ ಸಮಾನ ಅವಕಾಶಗಳಾಗಲಿ ಇಲ್ಲವೇ ಇಲ್ಲ. ಅಭಿವೃದ್ಧಿ ಹೊಂದಿದ ದೇಶಗಳ ಪಕ್ಷಪಾತಿಯಾಗಿರುವ ಈ ಸಂಘಟನೆಯಲ್ಲಿ ಭಾರತಕ್ಕೆ ತನ್ನ ದೀರ್ಘಕಾಲಿಕ ಹಿತಗಳನ್ನು ಕಾಪಾಡಿಕೊಳ್ಳಲು ಸಾಧ್ಯವಾಗಬೇಕಾದರೆ ಅದು ಅಭಿವೃದ್ಧಿ ಹೊಂದುತ್ತಿರುವ ದೇಶಗಳಜೊತೆಯಲ್ಲಿ ನಿಲ್ಲಬೇಕಾಗಿದೆ. 2003 ರ ಕ್ಯಾನ್‌ಕುನ್ ಸಚಿವ ಮಟ್ಟದ ಸಭೆಯ ಸಂದರ್ಭದಲ್ಲಿ ಭಾರತವೂ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಕನಿಷ್ಠ ಅಭಿವೃದ್ಧಿ ಹೊಂದಿರುವ ದೇಶಗಳು ಜಿ-20 ಹಾಗೂ ಜಿ-33 ಒಕ್ಕೂಟಗಳನ್ನು ರಚಿಸಿಕೊಂಡದ್ದು ಸರಿಯಾದ ದಿಕ್ಕಿನಲ್ಲಿಟ್ಟ ಸರಿಯಾದ ಹೆಜ್ಜೆಯಾಗಿತ್ತು. ಹೀಗೆ ಕ್ಯಾನ್‌ಕುನ್ ಸಮ್ಮೇಳನದ ಒಳಗೆ ಹಾಗೂ ಹೊರಗೆ ಮತ್ತು ಜಗತ್ತಿನಾದ್ಯಂತ ನಡೆದ ಪ್ರತಿಭಟನೆಗಳಿಂದಾಗಿ 5ನೇ ಸಚಿವ ಮಟ್ಟದ ಮಾತುಕತೆಗಳೇ ಮುರಿದುಬಿದ್ದವು.

ಆದರೆ ಅನಂತರದ ಬೆಳವಣಿಗೆಗಳಲ್ಲಿ, ವಿಶ್ವ ವ್ಯಾಪಾರ ಸಂಘಟನೆಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಬೆಳೆದುಬಂದಿದ್ದ ಐಕ್ಯತೆಯನ್ನು ಒಡೆಯುವಲ್ಲಿ ಯಶಸ್ವಿಯಾಯಿತು. ಜಿ-20 ರ ನೇತೃತ್ವ ವಹಿಸಿದ್ದ ಬ್ರೆಜಿಲ್ ಮತ್ತು ಭಾರತವನ್ನು ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟವನ್ನು ಒಳಗೊಂಡ 'ಐದು ಆಸಕ್ತ' ದೇಶಗಳ ಗುಂಪಿಗೆ ದಕ್ಷಿಣದ ಪ್ರತಿನಿಧಿಗಳೆಂದು ಸೇರಿಸಿಕೊಳ್ಳಲಾಯಿತಲ್ಲದೆ ಜುಲೈ 2004 ರಲ್ಲಿ 'ಜುಲೈ ಚೌಕಟ್ಟು ಒಪ್ಪಂದ' ಎಂದೇ ಕುಖ್ಯಾತವಾದ ನಿರ್ಣಯವನ್ನು ಅಂಗೀಕರಿಸಲಾಯಿತು. ಸಚಿವಮಟ್ಟದ ಸಭೆಯಲ್ಲಿ ಮಾತ್ರ ಕೈಗೊಳ್ಳಬಹುದಾದ ಇಂತಹ ನಿರ್ಣಯವನ್ನು ಅಕ್ರಮವಾಗಿ ವಿಶ್ವ ವ್ಯಾಪಾರ ಸಂಘಟನೆಯ ಸಾಮಾನ್ಯ ಮಂಡಳಿಯಲ್ಲಿ ಕೈಗೊಳ್ಳಲಾಗಿದ್ದು ಈ ನಿರ್ಣಯಕ್ಕೆ ಅನುಗುಣವಾಗಿ ಹಾಂಗ್‌ಕಾಂಗ್ ಮಾತುಕತೆಗಳನ್ನು ಮುಕ್ತಾಯಗೊಳಿಸಬೇಕೆಂದು 'ಪೂರ್ವಯೋಜನೆ' ಮಾಡಿಕೊಳ್ಳಲಾಗಿದೆ.

'ಜುಲೈ ಚೌಕಟ್ಟು ಒಪ್ಪಂದ' ಎಂಬ ಈ ನಿರ್ಣಯವು ಅಭಿವೃದ್ಧಿ ವಿರೋಧಿಯಾಗಿದ್ದು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತಕ್ಕೆ ಮಾರಕವಾಗಿದೆ. ಕೃಷಿ ರಂಗದಲ್ಲಿ ಅದು ಉತ್ತರದ (ಅಭಿವೃದ್ಧಿ ಹೊಂದಿದ) ದೇಶಗಳಿಗೆ ಸಬ್ಸಿಡಿಗಳನ್ನು ಇನ್ನೂ ಹೆಚ್ಚಿಸಲು ಅವಕಾಶ ನೀಡುತ್ತದೆ, ಮಾತ್ರವಲ್ಲ ಬೃಹತ್ ಪ್ರಮಾಣದ ಸುಂಕ ಕಡಿತದೊಂದಿಗೆ ದಕ್ಷಿಣ(ಅಭಿವೃದ್ಧಿ ಹೊಂದುತ್ತಿರುವ) ದೇಶಗಳ ಮಾರುಕಟ್ಟೆಗೆ ಪ್ರವೇಶಾವಕಾಶವನ್ನು ನೀಡಬೇಕೆಂದು ಆಗ್ರಹಿಸುತ್ತದೆ. ಕೃಷಿಯೇತರ ಮಾರುಕಟ್ಟೆಯಲ್ಲಿಯೂ ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳ ಪ್ರವಾಹವನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಾರುಕಟ್ಟೆಗೆ ನುಗ್ಗಿಸಲು ಅನುಕೂಲವಾಗುವಂತೆ ಎಲ್ಲಾ ಅಡೆತಡೆಗಳನ್ನು ತೆರವುಗೊಳಿಸಲು ಆಗ್ರಹಿಸುತ್ತದೆ.

ಇಂತಹ ಒಂದು ಒಪ್ಪಂದದಲ್ಲಿ ಭಾರತ ಭಾಗಿದಾರ ಆಗಿರುವುದು, ಇತ್ತೀಚೆಗೆ ಅಮೆರಿಕದ ಜೊತೆಯಲ್ಲಿ 'ಸೇವಾ ವಲಯ ಗುಂಪಿ'ನ ಜಂಟಿ ಅಧ್ಯಕ್ಷತೆ ವಹಿಸಿದ್ದು, ಮುಂದಿನ ಮಾತುಕತೆಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತಕ್ಕೆ ವಿರುದ್ಧವಾಗಿ ನಡೆದುಕೊಳ್ಳಲಿರುವುದನ್ನು ಗಮನಿಸಿಯೂ ಮೌನ ವಹಿಸಿರುವುದು ಪ್ರಶ್ನಾರ್ಹವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಐಕ್ಯತೆಗೆ ಭಾರತ ಈಗ ಎಷ್ಟರಮಟ್ಟಿಗೆ ಬದ್ಧವಾಗಿದೆ ಎಂಬ ಅನುಮಾನಕ್ಕೆ ಆಸ್ಪದವಾಗಿದೆ.

ಆದ್ದರಿಂದ, ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ವಿಶ್ವ ವ್ಯಾಪಾರ ಸಂಘಟನೆಯ ಮಾತುಕತೆಗಳ ಕುರಿತಾಗಿ ಭಾರತ ಸರ್ಕಾರ ಬಿಡುಗಡೆ ಮಾಡಿರುವ ಟಿಪ್ಪಣಿಯಲ್ಲಿರುವ ಕೆಲವು ಅಂಶಗಳ ಬಗ್ಗೆ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಸರ್ಕಾರದ ಟಿಪ್ಪಣಿಯಲ್ಲಿ 'ನಿರ್ದಿಷ್ಟ ವಿಷಯಗಳ ಮೇಲೆ ಸಮಾನ ಹಿತಾಸಕ್ತಿ ಇದ್ದಲ್ಲೆಲ್ಲಾ ಭಾರತವು ಅಭಿವೃದ್ಧಿ ಹೊಂದಿದ ದೇಶಗಳೊಂದಿಗೂ ನಿಕಟವಾಗಿ ಕೆಲಸಮಾಡಿದೆ" ಎಂದು ಹೇಳಿರುವುದು ಆತಂಕದ ವಿಷಯವಾಗಿದೆ ಎಂದಿರುವ ಎಡಪಕ್ಷಗಳು ವಿಶ್ವ ವ್ಯಾಪಾರ ಸಂಘಟನೆಯಲ್ಲಿ ದಕ್ಷಿಣದ ದೇಶಗಳ ಸೌಹಾರ್ದತೆಯೇ ನಮ್ಮ ಕಾರ್ಯತಂತ್ರದ ಗಟ್ಟಿ ಆಧಾರವಾಗಿರಬೇಕೇ ಹೊರತು ಅಮೆರಿಕ ಅಥವಾ ಯುರೋಪಿಯನ್ ಒಕ್ಕೂಟದೊಂದಿಗೆ 'ವಿಷಯ ಆಧಾರಿತ' ಸಮಯಸಾಧಕ ಮೈತ್ರಿಗಳಲ್ಲ ಎಂದು ಎಡಪಕ್ಷಗಳು ಖಾರವಾಗಿಯೇ ಹೇಳಿವೆ.

ಈ ಹಿನ್ನೆಲೆಯಲ್ಲಿ ಹಾಂಗ್‌ಕಾಂಗ್ ಸಚಿವ ಮಟ್ಟದ ಸಭೆಯಲ್ಲಿ ಭಾರತ ತೆಗೆದುಕೊಳ್ಳುವ ನಿಲುವು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಹಿಂದೆ ಉರುಗ್ವೆ ಸುತ್ತಿನ ಮಾತುಕತೆಯಲ್ಲಿ ನಿರ್ಣಯಗಳನ್ನು ಕೈಗೊಳ್ಳುವಾಗ ಪಾರದರ್ಶಕತೆ ಇರಲಿಲ್ಲ. ನಿರ್ಣಯಗಳನ್ನು ಸಮರ್ಥಿಸಲು ಪಕ್ಷಪಾತಿ 'ತಜ್ಞರಿಂದ' ಅತಿರಂಜಿತ ಅಂದಾಜುಗಳನ್ನು ನೀಡಲಾಯಿತು. ಆದರೆ ಅಂದು ನಡೆಸಲಾದ ಚೌಕಾಸಿಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ವ್ಯವಸ್ಥಿತವಾಗಿ ವಂಚನೆ ಮಾಡಲಾಯಿತು ಎಂಬುದು ನಂತರ ಸ್ಪಷ್ಟವಾಯಿತು. ಈ ಕಹಿ ಅನುಭವದಿಂದ ನಾವು ಪಾಠ ಕಲಿಯಲೇಬೇಕು. ಆದ್ದರಿಂದ ಹಾಂಗ್‌ಕಾಂಗ್ ಸಚಿವ ಮಟ್ಟದ ಸಭೆಯಲ್ಲಿ ಸರ್ಕಾರ ಅನುಸರಿಸಬೇಕಾದ ನಿಲುಮೆಗಳ ಬಗ್ಗೆ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಚರ್ಚಿಸಬೇಕೆಂದು ಈ ಕುರಿತು ರಾಷ್ಟ್ರೀಯ ಒಮ್ಮತವನ್ನು ರೂಪಿಸಬೇಕೆಂದು ಎಡಪಕ್ಷಗಳು ಆಗ್ರಹಿಸಿದ್ದು ಸರ್ಕಾರಕ್ಕೆ ತಮ್ಮ ನಿರ್ದಿಷ್ಟ ಸಲಹೆಗಳನ್ನು ಸಲ್ಲಿಸಿವೆ ಮತ್ತು ಈ ಸಲಹೆಗಳ ಬಗ್ಗೆ ಡಿಸೆಂಬರ್ 1 ರಿಂದ 12 ರ ವರೆಗೆ ದೇಶಾದ್ಯಂತ ಪ್ರಚಾರಾಂದೋಲನ ನಡೆಸಲು ಹಾಗೂ ಡಿಸೆಂಬರ್ 13 ರಂದು ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಸಾಮೂಹಿಕ ಪ್ರದರ್ಶನಗಳನ್ನು ನಡೆಸಲು ಕರೆ ನೀಡಿವೆ.



ಡಬ್ಲ್ಯುಟಿಒ ವಿರೋಧಿಸಿ ಕೊಲ್ಕತ್ತದಲ್ಲಿ ನಡೆದ ಪ್ರತಿಭಟನೆ

ಎಡಪಕ್ಷಗಳ ಸಲಹೆಗಳು

ಕೃಷಿ ಕುರಿತಾದ ಒಪ್ಪಂದ (AOA) :

1) ಉದಾರೀಕರಣದ ಮುಂದಿನ ಘಟ್ಟವನ್ನು ಅಂತಿಮಗೊಳಿಸುವ ಮೊದಲು ಈ ಹಿಂದೆ ನಡೆದ 'ಕೃಷಿ ಕುರಿತಾದ ಒಪ್ಪಂದ'ದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ನೀಡಿರುವ ಭರವಸೆಗಳು ಎಷ್ಟು ಈಡೇರಿವೆ ಎಂಬುದನ್ನು ಪರಿಶೀಲಿಸುವುದಾಗಬೇಕು.

2) ಅಭಿವೃದ್ಧಿ ಹೊಂದಿರುವ ದೇಶಗಳು ಕೃಷಿಗೆ ನೀಡುತ್ತಿರುವ ರಫ್ತುಸಾಲ, ರಫ್ತು ಸಾಲ ಗ್ಯಾರಂಟಿ ಹಾಗೂ ರಫ್ತು ವಿಮೆ ಮೊದಲಾದ ಎಲ್ಲಾ (ನೀಲಿ ಪೆಟ್ಟಿಗೆ) ರಫ್ತು ಸಬ್ಸಿಡಿಗಳನ್ನು ತಕ್ಷಣವೇ ನಿರ್ಮೂಲ ಮಾಡಬೇಕು. ಅದರಂತೆಯೇ ಅಭಿವೃದ್ಧಿ ಹೊಂದಿರುವ ದೇಶಗಳು ಕೃಷಿಗೆ ನೀಡುತ್ತಿರುವ ಒಟ್ಟು ಉತ್ಪಾದನಾ ಪ್ರೋತ್ಸಾಹವನ್ನು (ಹಸಿರು ಪೆಟ್ಟಿಗೆ ಸೌಲಭ್ಯಗಳು) ಗಣನೀಯವಾಗಿ ಕಡಿತಮಾಡುವಂತೆ ಒತ್ತಾಯಿಸಬೇಕು. ಈ ಕ್ರಮಗಳಿಂದಾಗಿ ಭಾರಿ ಸಬ್ಸಿಡಿ ಪಡೆದ ಉತ್ತರದ ದೇಶಗಳ ಅಗ್ಗದ ಕೃಷಿ ಉತ್ಪನ್ನಗಳು ಮಾಡುವ ಧಾಳಿಯಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಂತರಿಕ ಮಾರುಕಟ್ಟೆಗಳನ್ನು ರಕ್ಷಿಸಬಹುದು.

3) ಉತ್ಪಾದನೆ ಮತ್ತು ರಫ್ತು ವ್ಯಾಪಾರಕ್ಕೆ ಭಾರಿ ಸಬ್ಸಿಡಿ ಪಡೆದುಕೊಂಡು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಾರುಕಟ್ಟೆಗಳಿಗೆ ಶ್ರೀಮಂತ ದೇಶಗಳ ಕೃಷಿ ಉತ್ಪನ್ನಗಳು ನುಗ್ಗುವುದನ್ನು ತಡೆದು ಕೃಷಿಯನ್ನೇ ಅವಲಂಬಿಸಿರುವ 300 ಕೋಟಿ ಸಣ್ಣ ಮತ್ತು ಅಂಚಿನ ರೈತರ ಜೀವನಾಧಾರವನ್ನು ರಕ್ಷಿಸಲು ಆಮದುಗಳ ಮೇಲೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ಹೇರಲು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಹಕ್ಕಿದೆ ಎಂಬುದನ್ನು ಕೃಷಿ ಕುರಿತಾದ ಒಪ್ಪಂದದಲ್ಲಿ ಸೇರಿಸಬೇಕು.

4) ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ, ಆಂತರಿಕ ಬಳಕೆಗಾಗಿ ಬೇಕಾಗುವ ಆಹಾರ ಧಾನ್ಯಗಳನ್ನು ಮತ್ತಿತರ ಕೃಷಿ ಉತ್ಪನ್ನಗಳನ್ನು

ಉತ್ಪಾದಿಸಲು ಸಬ್ಸಿಡಿ ನೀಡುವ ಹಕ್ಕಿರಬೇಕು ಹಾಗೂ ರೈತರ ಜೀವನ ನಿರ್ವಹಣೆಗೆ ನೆರವು ನೀಡುವ ಹಕ್ಕು ಇರಬೇಕು.

5) 'ವಿಶೇಷ ರಕ್ಷಣಾ ವ್ಯವಸ್ಥೆ'ಯನ್ನು ಬಳಸಿ ಅಭಿವೃದ್ಧಿ ಹೊಂದಿರುವ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ಬರುವ ಆಮದುಗಳನ್ನು ನಿಯಂತ್ರಿಸುತ್ತವೆ. ಇದುವರೆಗೆ ಕೇವಲ 22 ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಈ ಹಕ್ಕನ್ನು ನೀಡಲಾಗಿದ್ದು ಈ ಹಕ್ಕನ್ನು ಎಲ್ಲಾ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೂ ನೀಡಬೇಕು.

6) ಬೆಲೆ ಕುಸಿತದ ವಿರುದ್ಧ ರಕ್ಷಣೆ ಪಡೆಯಲೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ 'ವಿಶೇಷ ರಕ್ಷಣಾ ವ್ಯವಸ್ಥೆ' ಯನ್ನು ಬಳಸಿಕೊಳ್ಳಲು ಹಕ್ಕು ಇರಬೇಕು.

7) ಅಭಿವೃದ್ಧಿ ಹೊಂದಿರುವ ದೇಶಗಳು ಹೇರುವ ವಿವಿಧ ಸುಂಕ-ಯೇತರ ನಿರ್ಬಂಧಗಳನ್ನು ತೆಗೆದುಹಾಕಬೇಕು.

8) ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ರಫ್ತು ಸಬ್ಸಿಡಿ ನೀಡಲು, ವಿಶೇಷವಾಗಿ ಉನ್ನತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಾಗ ರಫ್ತು ಸಬ್ಸಿಡಿ ನೀಡಲು ಅವಕಾಶವಿರಬೇಕು.

ಕೃಷಿಯೇತರ ಮಾರುಕಟ್ಟೆ ಪ್ರವೇಶ (NAMA):

1) ಸಂಕುಗಳನ್ನು ಹೆಚ್ಚಿಸುವ ಮೂಲಕವಷ್ಟೇ

...ೆ ಮಣಿಯದಿರಲಿ

ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಮ್ಮ ಮಾರುಕಟ್ಟೆಗಳಿಗೆ ರಕ್ಷಣೆ ಒದಗಿಸಬಹುದು. ಆದ್ದರಿಂದ ಅರ್ಜೆಂಟೈನಾ, ಬ್ರೆಜಿಲ್ ಮತ್ತು ಇಂಡಿಯಾ ಇತ್ತೀಚಿಗೆ ಒಪ್ಪಿರುವ (ABI ಪ್ರಸ್ತಾವ) ಸುಂಕ ಕಡಿತದ ಪ್ರಸ್ತಾವವನ್ನು ಮರುಪರಿಶೀಲನೆ ಮಾಡಬೇಕು.

2) ಪ್ರತಿಯೊಂದು ಉತ್ಪನ್ನಕ್ಕೆ ಪ್ರತ್ಯೇಕ ಸುಂಕ ಕಡಿತದ ಬದಲು ಸರಾಸರಿ ಕಡಿತ, ಕನಿಷ್ಟ ಕಡಿತದ ನಿಲುವು ನಮ್ಮ ಮಾತುಕತೆಯ ಆಧಾರವಾಗಿರಬೇಕು.

3) ಯಾವುದೇ ಒಂದು ದೇಶ ವಿಧಿಸಬಹುದಾದ ಗರಿಷ್ಟ ಸುಂಕ ದರವನ್ನು ಮಾತುಕತೆಗಳ ಮೂಲಕ ನಿಗದಿಪಡಿಸಬಹುದು.

4) ಅಭಿವೃದ್ಧಿ ಹೊಂದಿರುವ ದೇಶಗಳು ಸುಂಕ-ಯೇತರ ನಿರ್ಬಂಧಗಳ ಮೂಲಕವೇ ಮಾರುಕಟ್ಟೆ ಪ್ರವೇಶವನ್ನು ತಡೆಯುತ್ತಿರುವುದರಿಂದ ಈ ನಿರ್ಬಂಧಗಳಿಗೆ ಕಡಿವಾಣ ಹಾಕಬೇಕು. ಆದ್ದರಿಂದ ಸುಂಕ ಕಡಿತ ಪ್ರಶ್ನೆಯೊಂದಿಗೆ ಸುಂಕ-ಯೇತರ ನಿರ್ಬಂಧಗಳ ಪ್ರಶ್ನೆಯನ್ನೂ ಚರ್ಚಿಸಬೇಕು.

5) ಸುಂಕ ಕಡಿತದ ಕುರಿತಾಗಿ ನಿಲುವುಗಳನ್ನು ರೂಪಿಸುವ ಮೊದಲು ಸಣ್ಣ ಪ್ರಮಾಣದ ಉದ್ದಿಷ್ಟಗಳ ಕುರಿತು ವಿಶೇಷ ಗಮನ ನೀಡಬೇಕು.

6) ಯಾವುದೇ ವಲಯವಾರು ಸುಂಕ ತೆಗೆದುಹಾಕುವುದನ್ನು ಒಪ್ಪಬಾರದು.

7) ಜೀವನಾಧಾರ ಪ್ರಶ್ನೆಗಳನ್ನು ವ್ಯಾಪಾರದ ಪ್ರಶ್ನೆಗಳಾಗಿ ಪರಿವರ್ತಿಸುವುದನ್ನು ಭಾರತ ವಿರೋಧಿಸಬೇಕು. ಉದಾ: ಮೀನುಗಾರಿಕೆ ವಲಯವನ್ನು NAMA ದಲ್ಲಿ ಸೇರಿಸುವುದು.

ಸೇವೆಗಳ ವ್ಯಾಪಾರ ಕುರಿತಾದ ಸಾರ್ವತ್ರಿಕ ಒಪ್ಪಂದ (GATS):

1) ಈ ಒಪ್ಪಂದದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಒದಗಿಸಲಾಗಿದ್ದ ವಿಶೇಷ ಸ್ಥಾನಮಾನವನ್ನು ತೆಗೆದುಹಾಕುವ ಅಭಿವೃದ್ಧಿ ಹೊಂದಿರುವ ದೇಶಗಳ ಪ್ರಯತ್ನವನ್ನು ಭಾರತ ಬಲವಾಗಿ ವಿರೋಧಿಸಬೇಕು.

2) ನೀರು, ಆರೋಗ್ಯ, ಶಿಕ್ಷಣ ಮುಂತಾದ ಮೂಲ ಸೇವೆಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ಮಾರುಕಟ್ಟೆ ಪ್ರವೇಶ ಒದಗಿಸುವ ಕುರಿತೆಸೆಶ ನೀಡಲಾದ ಪ್ರಸ್ತಾವಗಳನ್ನು ಹಿಂತೆಗೆದುಕೊಳ್ಳಬೇಕು.

3) ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟ

ಪುಟ 8 ಕ್ಕೆ

ಪಂಚಾಯತ್ ಚುನಾವಣೆಗಳು: ವಿಧಾನಸಭಾ ಚುನಾವಣೆಗಳಿಗೆ ತಾಲೀಮು

ಜಿ.ಎನ್.ನಾಗರಾಜ್

ಜಿಲ್ಲಾ ಪಂಚಾಯತ್, ತಾಲ್ಲೂಕಾ ಪಂಚಾಯತ್ ಚುನಾವಣೆಗಳು ಗ್ರಾಮೀಣ ಜನತೆಯ ಕೈಗೆ ಅಧಿಕಾರವನ್ನು ಹಸ್ತಾಂತರಿಸುವ ಸಾಧನವಾಗಿ ಪಂಚಾಯತ್ ಸಂಸ್ಥೆಗಳ ಉಪಯುಕ್ತತೆ, ಹಿಂದಿನ 5 ವರ್ಷಗಳ ಅನುಭವದ ಆಧಾರದ ಮೇಲೆ ಅವುಗಳನ್ನು ಪ್ರಜಾಪ್ರಭುತ್ವದ ವಿಸ್ತರಣೆಯ ಸಾಧನವಾಗಿ ಇನ್ನೂ ಉತ್ತಮಪಡಿಸುವುದು ಹೇಗೆ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಆ ಮೂಲಕ ನಗರಗಳ ಜನದಟ್ಟಣೆ, ಅದರಿಂದುಂಟಾಗುವ ಸಮಸ್ಯೆಗಳನ್ನು ತಡೆಯುವ ಹಾಗೂ ನಗರಾಭಿವೃದ್ಧಿಗೆ ಸಾಧಕವಾಗುವಂತೆ ಹೇಗೆ ಬಳಸಿಕೊಳ್ಳಬೇಕು. ಕೃಷಿ ಬಿಕ್ಕಟ್ಟಿನ ಈ ಸನ್ನಿವೇಶದಲ್ಲಿ ಈ ಚುನಾಯಿತ ಸಂಸ್ಥೆಗಳು ರೈತಾಪಿ ಜನತೆಯನ್ನು ರಕ್ಷಿಸುವ ಕರ್ತವ್ಯವನ್ನು ಅವು ನಿರ್ವಹಿಸಿವೆಯೇ, ಎಲ್ಲಕ್ಕಿಂತ ಮಿಗಿಲಾಗಿ ಈ ಸಂಸ್ಥೆಗಳ ಅಧಿಕಾರವೆಂಬುದು ಬಡಜನರಲ್ಲಿ ಕೇಂದ್ರೀಕೃತವಾಗಿದೆಯೆ, ಶ್ರೀಮಂತರು, ಪಟ್ಟಭದ್ರರು ಅಧಿಕಾರವನ್ನು ಹಿಡಿಯುವ ಸಾಧನವಾಗಿದೆಯೇ? ಗ್ರಾಮೀಣ ಶ್ರೀಮಂತರ ಕೈಗೆ ಪಂಚಾಯತ್‌ಗಳ ಅಧಿಕಾರ ಸಿಗದಂತೆ ಬಡಜನತೆಯ ಸಾಧನವಾಗುವಂತೆ ಮಾಡಬೇಕಾದರೆ ಯಾವ ಕ್ರಮಗಳು ಅತ್ಯಗತ್ಯ, ಮುಖ್ಯವಾಗಿ ಭೂಸುಧಾರಣೆಯ ಪಾತ್ರ ಏನು? ಗ್ರಾಮ ಸಭೆಗಳ ಪಾತ್ರ ಏನು? ಇತ್ಯಾದಿ ವಿಷಯಗಳು ಚರ್ಚೆಯ ವೇದಿಕೆಯಾಗಿ, ಗ್ರಾಮೀಣ ಪ್ರದೇಶದ ಜನರ ರಾಜಕೀಯ ಎಚ್ಚರವನ್ನು ಮತ್ತಷ್ಟು ಮೇಲಕ್ಕೊಯ್ಯುವ ವಿಶ್ವವಿದ್ಯಾಲಯವಾಗಿ ಪರಿಗಣಿಸಬೇಕು. ಇಂತಹ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿವಿಧ ರಾಜಕೀಯ ಪಕ್ಷಗಳ ಸಿದ್ಧಾಂತ ವಿಚಾರಧಾರೆ, ಪ್ರಣಾಳಿಕೆ, ಕಾರ್ಯಕ್ರಮಗಳು ಯಾವುದು? ಸಿದ್ಧಾಂತ ಪ್ರಣಾಳಿಕೆ ಮತ್ತು ಆಚರಣೆ ನಡುವಣ ವ್ಯತ್ಯಾಸ ಯಾವ ಪಕ್ಷದಲ್ಲಿ ಎಷ್ಟು ಎಂಬ ಚರ್ಚೆ ಪ್ರಧಾನವಾಗಬೇಕು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳು, ಅವುಗಳನ್ನು ನಡೆಸುತ್ತಿರುವ ರಾಜಕೀಯ ಪಕ್ಷಗಳು ಈ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಹಿಸುತ್ತಿರುವ ಧೋರಣೆ, ನೀತಿ ಏನು ಎಂಬುದೂ ಕೂಡ ಚರ್ಚೆಗೊಳಗಾಗಬೇಕಾಗಿತ್ತು.

ಈ ಬಾರಿಯ ಚುನಾವಣೆಗಳ ಸಂದರ್ಭದಲ್ಲಿಯಂತೂ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಕಾಯಿದೆಗಳ ಸಾಧಕ, ಬಾಧಕಗಳು ಅದನ್ನು ಜಾರಿಗೊಳಿಸುವ ಬಗ್ಗೆ ಉತ್ತಮಪಡಿಸುವುದರ ಬಗ್ಗೆ ಹಾಗೂ ರಾಜ್ಯ ಸರ್ಕಾರ ಇತ್ತೀಚಿಗೆ ಹಲವು ಅಧಿಕಾರ ಹಾಗೂ ಇಲಾಖೆಗಳ ಕೆಲಸವನ್ನು ಪಂಚಾಯತ್‌ಗಳಿಗೆ ವರ್ಗಾಯಿಸಲು ಹೊರಟಿರುವ ಬಗ್ಗೆ ಚರ್ಚೆಯ ಆಂದೋಲನವೇ ಆಗಬೇಕು.

ಈ ಬಾರಿಯ ಪಂಚಾಯತ್ ಚುನಾವಣೆಗಳ ಚರ್ಚೆಯ ಅಜೆಂಡಾದಿಂದ ಪಂಚಾಯತ್ ಸಂಸ್ಥೆಗಳ ಕೆಲಸ ಮತ್ತು ಪಾತ್ರವೇ ಗೌಣವಾಗಿರುವುದು (ಮಾಯವಾಗಿರುವುದು ಎಂದೇ ಹೇಳಬಹುದು) ಅತ್ಯಂತ ವಿಷಾದಕರ ಪರಿಸ್ಥಿತಿ ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲಿಯೂ ವಿಧಾನಸಭೆಯೇ ಆ ಸ್ಥಾನವನ್ನು ಆಕ್ರಮಿಸಿ ಪಂಚಾಯತ್‌ಗಳನ್ನು ಚರ್ಚೆ, ಪ್ರಚಾರಗಳಿಂದ ಹೊರದಬ್ಬಿದೆ.

ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಜನತೆ ಇತ್ತ ತೀರ್ಪು, ಅದರಿಂದ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಸಮ್ಮಿಶ್ರ ಸರ್ಕಾರ ಜನರ ಆಶೋತ್ತರಗಳಿಗೆ ಸ್ಪಂದಿಸದಿರುವುದು ಅದರಲ್ಲಿ ಭಾಗಿದಾರರಾದ ಪಕ್ಷಗಳಲ್ಲಿ ನಿರಂತರವಾಗಿ ನಡೆಸುತ್ತಿರುವ ವಾಗ್ವಾದ, ವಾಗ್ಯುದ್ಧ, ಸ್ಪರ್ಧೆಗಳು ಈ ಪರಿಸ್ಥಿತಿಗೆ ಕಾರಣವಾಗಿದೆ. ವಿಧಾನಸಭೆಗೆ ನಡೆಯಬಹುದಾದ ಮಧ್ಯಂತರ ಚುನಾವಣೆಯ ದಟ್ಟಛಾಯೆ ಈ ಚುನಾವಣೆಗಳನ್ನು ಆವರಿಸಿದೆ. ಪ್ರತಿಯೊಂದು ಪಕ್ಷವೂ ಮುಂಬರುವ ವಿಧಾನಸಭಾ ಚುನಾವಣೆಗಳಿಗೆ ಮೊದಲು ತಂತಮ್ಮ ಶಕ್ತಿಯನ್ನು ಅಳೆಯುವ, ಹೆಚ್ಚಿಸಿಕೊಳ್ಳುವ ಸಾಧನವಾಗಿಯೇ ಈ ಚುನಾವಣೆಗಳನ್ನು ನೋಡುತ್ತಿವೆ.

ಬಂಗಾರಪ್ಪನವರ ಸಮಾಜವಾದಿ ಪಕ್ಷ, ಸಿದ್ಧರಾಮಯ್ಯನವರ ಪ್ರಗತಿಪರ ಜನತಾದಳ, ರೈತಸಂಘ, ದಲಿತಸಂಘರ್ಷ ಸಮಿತಿಗಳ ಸರ್ವೋದಯ ಕರ್ನಾಟಕ ಮೊದಲಾದ ಪಕ್ಷಗಳಿಗೆ ಇದು ಅರಂಗೇಟ್ರಂ ಅಥವಾ ರಂಗಪ್ರವೇಶ.

ಕಾಂಗ್ರೆಸ್ ಪಕ್ಷಕ್ಕೆ ಮುಖ್ಯವಾಗಿ ಕೃಷ್ಣ, ಖರ್ಗೆ ಬಣಕ್ಕೆ ಕಾಂಗ್ರೆಸ್ ರಾಜ್ಯದೆಲ್ಲೆಡೆಯೂ ಗೆದ್ದು ಮತ್ತೆ ರಾಜ್ಯಸರ್ಕಾರದ ಏಕಸ್ವಾಮ್ಯವನ್ನು ಮರಳಿ ಪಡೆಯುವ, ಆ ಮೂಲಕ ದೇವೇಗೌಡರ ಧಾಳಿಗಳಿಂದ ತಪ್ಪಿಸಿಕೊಳ್ಳುವ ತವಕ. ಇಂತಹ ತವಕವನ್ನು ಮೊದಲು ತೋರಿದ್ದೇ ಜೆ.ಡಿ(ಎಸ್). ಜನತಾದಳ(ಎಸ್)ಗೆ ವಿಧಾನಸಭಾ ಚುನಾವಣೆಗಳಲ್ಲಿ ತಮಗೆ ಸಿಕ್ಕ ಸ್ಥಾನ ಮತ್ತು ನಂತರದ ಅವಕಾಶಗಳನ್ನು ಬಳಸಿಕೊಂಡು, ವಿವಿಧ ಜಿಲ್ಲೆಗಳಲ್ಲಿ ಪಕ್ಷಾಂತರಗಳ ಮೂಲಕ ಪಕ್ಷವನ್ನು ವಿಸ್ತರಿಸುವ, ಬಲಗೊಳಿಸುವ ಪ್ರಯತ್ನಗಳ ಫಲವನ್ನು ಪಡೆಯುವ, ಆ ಮೂಲಕ ಕರ್ನಾಟಕದಲ್ಲಿ ರಾಜ್ಯ ಸರ್ಕಾರದ ಏಕಸ್ವಾಮ್ಯವನ್ನು ಪಡೆಯುವ ಕಾತರವಿತ್ತು.

ಜೆ.ಡಿ(ಎಸ್) ನ ಈ ಮುಂಧಾಳಿಯೇ ಕಾಂಗ್ರೆಸ್‌ನಲ್ಲಿ ಆತಂಕ ಮೂಡಿಸಿ ಕಾಂಗ್ರೆಸ್ ಸಂಘಟನಾತ್ಮಕವಾಗಿ ಬಲಗೊಳ್ಳಲು ಒತ್ತಡ ಹಾಕಿತು. ಆದರೆ ಸಿದ್ಧರಾಮಯ್ಯ ಮತ್ತು ಜೊತೆಗಾರರ ಬೇರ್ಪಡೆಯ ನಂತರ ಆಹಿಂದದ ಧಾಳಿಯ ನಂತರ ಜೆ.ಡಿ(ಎಸ್)ನ ರಭಸಕ್ಕೆ ಕುಂದಾಗಿದೆ. ಪಂಚಾಯತ್ ಚುನಾವಣೆಗಳ ನಂತರ ಸರ್ಕಾರವನ್ನು ಕೆಡವುತ್ತೇವೆ, ಮಧ್ಯಂತರ ಚುನಾವಣೆಗಳ ಮೂಲಕ ನಾವೇ ಅಧಿಕಾರಕ್ಕೆ ಬರುತ್ತೇವೆಂಬ ಹುಮ್ಮಸ್ಸಿನಲ್ಲಿದ್ದ ಜೆ.ಡಿ(ಎಸ್) ಈಗ ಚುನಾವಣೆಗಳಲ್ಲಿ 20 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತ್‌ಗಳನ್ನು ಹಿಡಿದುಕೊಳ್ಳುತ್ತೇವೆ, ಹಾಗೆ ನಾವು ಯಶಸ್ಸುಗಳಿಸಿದರೂ ಕೂಡ ಸಮ್ಮಿಶ್ರ ಸರ್ಕಾರಕ್ಕೆ ನಮ್ಮ ಬೆಂಬಲ ಮುಂದುವರೆಸುತ್ತೇವೆ ಎಂಬ ಮಾತುಗಳನ್ನಾಡುತ್ತಿದೆ. ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತೇವೆಂಬ ಭರವಸೆಯಿಂದ ಚುನಾವಣೆಗಳಲ್ಲಿ ಭಾಗವಹಿಸುತ್ತಿದೆ.


ಬಿ.ಜೆ.ಪಿ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಹಾಗೂ ಭಾರತ ಪ್ರಕಾಶಿಸುತ್ತಿದೆ ಎಂಬ ಅಬ್ಬರದ ಪ್ರಚಾರ, ಇತರ ಪಕ್ಷಗಳಿಂದ ಪಡೆದ ಪಕ್ಷಾಂತರಗಳು, ಕೃಷ್ಣ ಸರ್ಕಾರದ ಬಗೆಗಿನ ವ್ಯಾಪಕ ಅತೃಪ್ತಿಯ ಪ್ರಯೋಜನ ಪಡೆದು ತನ್ನ ಶಕ್ತಿಗಿಂತ ಹೆಚ್ಚಿನ ವಿಧಾನಸಭಾ ಹಾಗೂ ಲೋಕಸಭಾ ಸ್ಥಾನಗಳನ್ನು ಗಳಿಸಿತು. ಈಗ ಬಿಜೆಪಿಯಿಂದ ಪಲಾಯನವಾಗುತ್ತಿರುವುದನ್ನು, ಉಪಚುನಾವಣೆಗಳಲ್ಲಿ ಸೋಲನ್ನು ನೋಡಿ ತಮ್ಮ ಶಕ್ತಿ ಕುಂದುತ್ತಿದೆ ಎಂಬ ಅರಿವು ಬಿಜೆಪಿಯಲ್ಲಿ ಮೂಡಿದೆ. ಬಿಜೆಪಿಯೊಳಗೆ ರಾಷ್ಟ್ರೀಯಮಟ್ಟದಲ್ಲಿರುವ ಗೊಂದಲ, ಕಿತ್ತಾಟಗಳು, ರಾಜ್ಯದಲ್ಲಿ ಬಹಿರಂಗವಾದ ಗುಂಪುಗಾರಿಕೆಗಳು ಅದರ ಜನಬೆಂಬಲದ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ. ಗೋಯಾತ್ರೆ, ಬಾಬಾಬುಡನ್‌ಗಿರಿ, ಕೆಲವು ಕಡೆ ಕೋಮುಗಲಭೆಗಳು ಅವರ ಬೆಂಬಲವನ್ನು ಹೆಚ್ಚಿಸುವಂತೆ ಕಾಣಿಸುತ್ತಿಲ್ಲ. ಮೊದಲಿನಿಂದಲೂ ಗ್ರಾಮೀಣ ಪ್ರದೇಶಗಳ ಜನರ ಒಲವನ್ನು ಗಳಿಸುವ ಬಗ್ಗೆ ಬಿಜೆಪಿಗಿರುವ ಅತ್ಯಂತ ಅನಾದರ ಹಾಗೂ ಆ ಪಕ್ಷದ ಸ್ವರೂಪವೇ ಹೇರುವ ಮಿತಿಯಿಂದಾಗಿ ಬಿಜೆಪಿ ತಾನು ವಿಧಾನಸಭೆ, ಲೋಕಸಭೆಗಳಲ್ಲಿ ಸೋಲನ್ನೇ ಕಂಡಿತ್ತು ಮತ್ತು ಗೆಲುವು ಗಳಿಸಬೇಕೆಂಬ ಶತಾಯಗತಾಯ ಪ್ರಯತ್ನ ಮಾಡುತ್ತಿರಲಿಲ್ಲ.

ಆದರೆ ಈ ಬಾರಿ ಅಂತಹ ನಿರ್ಲಕ್ಷ್ಯ ತಮ್ಮ ಕುತ್ತಿಗೆಗೆ ಬರುತ್ತದೆ ಎಂದು ಎಂದಿಗಿಂತ ಹೆಚ್ಚು ಶ್ರಮಹಾಕಿ ತಮ್ಮ ಸ್ಥಾನಗಳನ್ನು ಹೆಚ್ಚಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸುತ್ತಿದೆ.

ಹೊಸದಾಗಿ ಚುನಾವಣಾ ರಂಗವನ್ನು ಪ್ರವೇಶಿಸಿದ ಪಕ್ಷಗಳಿಗೂ ಇದು ಅವರ ಅಸ್ತಿತ್ವದ ಪ್ರಶ್ನೆ. ಮುಂದೆ ವಿಧಾನ ಸಭೆಯಲ್ಲಿ ಪಡೆಯಬಹುದಾದ, ಆ ಮೂಲಕ ಆಯಾ ಪಕ್ಷದ ನಾಯಕರ ರಾಜಕೀಯ ಪ್ರಾಮುಖ್ಯತೆಯ ಪ್ರಶ್ನೆ. ಹೀಗೆ ಆಳುವ ವರ್ಗದ ಯಾವ ಪಕ್ಷಗಳಿಗೂ ಪಂಚಾಯತ್ ವ್ಯವಸ್ಥೆ ಅವುಗಳಲ್ಲಿ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳ ಪಾತ್ರ - ಇವು ಪ್ರಮುಖ ಪ್ರಶ್ನೆಯಾಗಿಲ್ಲ. ಹೀಗೆ ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲಿಯೇ ಪಂಚಾಯತ್ ಸಂಸ್ಥೆಗಳ ಮಹತ್ವ ಅಪಹರಣವಾಗಿದೆ. ನಡೆಯುತ್ತಿರುವುದು ಪಂಚಾಯತ್ ಚುನಾವಣೆ. ಆದರೆ ಗುರಿ ವಿಧಾನಸಭೆಯಲ್ಲಿನ ಬಲಾಬಲ ಮತ್ತು ರಾಜ್ಯದ ಅಧಿಕಾರ. ಇಂದು ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಆರ್ಥಿಕ ಕೇಂದ್ರೀಕರಣವನ್ನು ಮುಚ್ಚಿಹಾಕಲು ಆಳುವ ವರ್ಗದ ಪಕ್ಷಗಳು ಆಗಾಗ ಎತ್ತುವ ಅಧಿಕಾರ ವಿಕೇಂದ್ರೀಕರಣವೆಂಬ ಪೊಳ್ಳು ಘೋಷಣೆಗಳ ನಡುವಣ ವೈರುಧ್ಯ ಇದು.

ಭೂಮಿ, ನಿವೇಶನ, ಹಕ್ಕುಪತ್ರಕ್ಕಾಗಿ ಒತ್ತಾಯಿಸಿ ರೈತರ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಕ್ರಮ ವಿರೋಧಿಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ

ಅನಿರ್ದಿಷ್ಟ ಕಾಲ ಧರಣಿ



ಹಕ್ಕುಪತ್ರಗಳಿಗೆ ಆಗ್ರಹಿಸಿ ಧರಣಿ ನಿರತರು

ಮುಕ್ತ ವ್ಯಾಪಾರದ ನೀತಿಯ ಭಾಗವಾಗಿ ವಿದೇಶಿ ಬಂಡವಾಳ, ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ ಹೆಚ್ಚುತ್ತಿದೆ. ಇದರಿಂದಾಗಿ ಬೆಂಗಳೂರಿನ ಸುತ್ತಮುತ್ತಲಿನ ಭೂಮಿಯ ಬೆಲೆ ಬಂಗಾರದ ಬೆಲೆಯಾಗಿದೆ. ಭ್ರಷ್ಟ ರಾಜಕಾರಣಿಗಳು, ಅಧಿಕಾರಿಗಳು, ಮಠಾಧೀಶರು ಮತ್ತು ಕಂಪನಿಗಳು ಭೂಗಳ್ಳತನದಲ್ಲಿ ತೊಡಗಿದ್ದಾರೆ. ಭೂಮಾಫಿಯಾಗಳ ಕೈವಾಡ ಸಹ ಇದೆ.

ಬೆಂಗಳೂರು ನಗರ ಗ್ರಾಮಾಂತರ ಜಿಲ್ಲೆಗಳಲ್ಲಿ ಹಲವಾರು ದಶಕಗಳಿಂದ ಸರ್ಕಾರಿ ಭೂಮಿಯಲ್ಲಿ ಉಳುಮೆ ಮಾಡುತ್ತಿದ್ದ ಬಡ ರೈತರಿಗೆ ಸಾಗುವಳಿ ಚೀಟಿ ನೀಡದೆ, ಅವರನ್ನು ಒಕ್ಕಲೆಬ್ಬಿಸಿ ಅದೇ ಭೂಮಿಯನ್ನು ಹಣವಂತರಿಗೆ ಹಸ್ತಾಂತರಿಸಲು ಅಧಿಕಾರಿಗಳು ರಾಜಕಾರಣಿಗಳು ಹೊರಟಿದ್ದಾರೆ. ಸರ್ಕಾರಿ ಭೂಮಿಯನ್ನು ನಿವೇಶನ, ಶಾಲೆ, ಆಸ್ಪತ್ರೆ, ಆಟದ ಮೈದಾನ ಮತ್ತು ಸ್ಮಶಾನ ಮುಂತಾದ ಸಾರ್ವಜನಿಕ ಉದ್ದೇಶಗಳಿಗೆ ಬಳಕೆ ಮಾಡದೆ ಶ್ರೀಮಂತರಿಗೆ ಹರಾಜು ಹಾಕಲಾಗುತ್ತಿದೆ. ಬಡ ಕಾರ್ಮಿಕರು, ಕೂಲಿಕಾರರು ವಾಸಕ್ಕಾಗಿ ಮನೆಯಿಲ್ಲದೆ ಪ್ರಾಣಿಗಳಂತೆ ಬದುಕಬೇಕಾಗಿದೆ.

ಸರ್ಕಾರಿ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಮತ್ತು ಹತ್ತಾರು ವರ್ಷಗಳಿಂದ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿರುವ ಬಡವರಿಗೆ ಹಕ್ಕುಪತ್ರಗಳನ್ನು ನೀಡದೆ ಕೆಲವು ಕಡೆ ವಾಸದ ದೃಢೀಕರಣ ಪತ್ರಗಳನ್ನು ಮಾತ್ರ ನೀಡಲಾಗುತ್ತಿದೆ. ಈ ಗಂಭೀರ ಸಮಸ್ಯೆಗಳ ಆಧಾರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (KPRS) ಜನವಾದಿ ಮಹಿಳಾ ಸಂಘಟನೆ (JMS) ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ, ನಿವೇಶನ ರಹಿತರ ಹೋರಾಟ ಸಮಿತಿ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DYFI)



ಈ ಸಂಘಟನೆಗಳ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನಾ ಧರಣಿ ನಡೆಸಲಾಯಿತು. ಈ ಸಂದರ್ಭಧಲ್ಲಿ ಮಾತನಾಡಿದ ಮುಖಂಡರುಗಳು ದಕ್ಷಿಣ ತಾಲ್ಲೂಕಿನ ಬಿ.ಎಂ.ಕಾವಲ್, ಗಾಂಧಿ ನಗರ, ಭೀಮನಕುಪ್ಪೆ ಉದಿಪಾಳು (ಹಕ್ಕಿ-ಪಿಕ್ಕಿ ಕಾಲೋನಿ) ಹೊಸಪಾಳ್ಯ, ಭುವನೇಶ್ವರಿ ನಗರ, ದೊಡ್ಡ ಬಳ್ಳಾಪುರ ತಾಲ್ಲೂಕಿನ ಬಸವೇಶ್ವರ ನಗರ, ಕರೇನಹಳ್ಳಿ (ವಿಜಯನಗರ) ಮತ್ತು ಪಿಂಜಾರು ಬೀಡು ಪ್ರದೇಶಗಳಲ್ಲಿ ಆನೇಕಲ್ಲು ನಗರದ ಅಯೋಧ್ಯನಗರ, ಜನತಾ ಕಾಲೋನಿ, ಬಹುದ್ದೂರ್‌ಪುರ, ನಾರಾಯಣಪುರ ಮುಂತಾದ ಪ್ರದೇಶಗಳಲ್ಲಿ ವಾಸವಾಗಿರುವ ನಿವಾಸಿಗಳಿಗೆ ಹಕ್ಕುಪತ್ರ ಕೂಡಲೇ ನೀಡುವಂತೆ ಒತ್ತಾಯಿಸಿದರು.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಹೆನ್ನಾಗರ, ಹೆಚ್.ಹೊಸಹಳ್ಳಿ, ಚಿತ್ತಗಾನಹಳ್ಳಿ, ಕಾಚನಾಯಕನಹಳ್ಳಿಗಳ ರೈತರ ಭೂಮಿಯನ್ನು ಕೆ.ಐ.ಡಿ.ಬಿ. ಯವರು, ಆದಿಗೊಂಡನಹಳ್ಳಿ, ಜಿಗಳ, ಎಡವನಹಳ್ಳಿ, ಹಿನ್ನಕಿ, ನಾಗನಾಯಕನಹಳ್ಳಿ ಮತ್ತು ಲಿಂಗಾಪುರ ಗ್ರಾಮಗಳ ಕೃಷಿ ಭೂಮಿಯನ್ನು ರೈತರ ವಿರೋಧದ ನಡುವೆಯು ಕೆ.ಹೆಚ್.ಬಿ. ವಶಪಡಿಸಿಕೊಳ್ಳುತ್ತಿದ್ದು ಈ ಕ್ರಮವನ್ನು ರಾಜ್ಯ ಸರ್ಕಾರ ಕೂಡಲೇ ಕೈಬಿಡಬೇಕೆಂದು ಅವರು ಆಗ್ರಹಿಸಿದರು.

ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಈಗಾಗಲೇ ತಾಲ್ಲೂಕ್ ಮಟ್ಟದ ಹಲವಾರು ಹೋರಾಟಗಳನ್ನು ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಅರ್ಪಿಸಿದರೂ ಸಹ ಸರ್ಕಾರ ಮತ್ತು ಅಧಿಕಾರಿಗಳು ದಿವ್ಯ ನಿರ್ಲಕ್ಷ್ಯ ತೋರುತ್ತಿರುವುದನ್ನು ಸಂಘಟನೆಗಳ ಮುಖಂಡರು ತೀವ್ರವಾಗಿ ಖಂಡಿಸಿದರು. ಬೆಂಗಳೂರು ನಗರದ ಚಿಕ್ಕಲಾಲ್‌ಬಾಗ್‌ನಿಂದ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಯಿತು. ಮೆರವಣಿಗೆ ಧರಣಿಯಲ್ಲಿ ಸಾವಿರಾರು ಜನರು ವಿಶೇಷವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಸಭೆಯನ್ನು ಉದ್ದೇಶಿಸಿ. ಕರ್ನಾಟಕ ಪ್ರಾಂತ ರೈತ ಸಂಘಟನೆಯ ಜಿಲ್ಲಾ ಉಪಾಧ್ಯಕ್ಷರಾದ ಕಾಂ.ಚಂದ್ರತೇಜಸ್ವಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಗೌರಮ್ಮ, ಕರ್ನಾಟಕ ಪ್ರಾಂತ ರೈತ ಸಂಘಟನೆಯ ರಾಜ್ಯಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾ ಅಧ್ಯಕ್ಷರಾದ ವೆಂಕಟಾಚಲಯ್ಯ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಹಾಗೂ ಇನ್ನಿತರ ಸಾಮೂಹಿಕ ಸಂಘಟನೆಗಳ ಮುಖಂಡರುಗಳು ಮಾತನಾಡಿದರು. ಈ ಹೋರಾಟಕ್ಕೆ ಬೆಂಬಲ ನೀಡಿ ಊಟದ ವ್ಯವಸ್ಥೆಯನ್ನು ಬ್ಯಾಂಕ್ ನೌಕರರ ಸಂಘಟನೆ ವಿಮಾ ಸಂಘಟನೆಗಳು ಮಾಡಿದ್ದವು.

ವರದಿ **ಯಶೋದಮ್ಮ**

ಕ್ರಾಂತಿಕಾರಿಯೋ ಅಥವಾ ಅರಾಜಕವಾದಿಯೋ?

ಪುಟ 5 ರಿಂದ

ಆಗಿದೆ. ವಿವಿಧ ಪರಿಸ್ಥಿತಿಗಳಲ್ಲಿ, ವಿವಿಧ ಹಂತಗಳಲ್ಲಿ ವಿವಿಧ ವರ್ಗಗಳು, ಹಾಗೂ ಒಂದೇ ವರ್ಗದಲ್ಲಿರುವ ವಿವಿಧ ವಿಭಾಗಗಳು ಬೇರೆ ಬೇರೆ ನಿಲುವುಗಳನ್ನು ತಳೆಯುತ್ತವೆ. ಸಾಮೂಹಿಕ ಚಳುವಳಿಗಳನ್ನು ಬೆಳೆಸುವ ಮತ್ತು ತನ್ನ ಕಾರ್ಯವ್ಯೂಹಾತ್ಮಕ ಗುರಿಯನ್ನು ಸಾಧಿಸಲು ಯುಕ್ತವಾದ ಸಂಯುಕ್ತ ರಂಗದ ತಂತ್ರಗಳನ್ನು ಬಳಸುವ ಒಂದು ಬಲಿಷ್ಠವಾದ ಕಮ್ಯೂನಿಸ್ಟ್ ಪಕ್ಷವು ಮಾತ್ರ ಈ ಬದಲಾವಣೆಗಳನ್ನು ಬಳಸಿಕೊಳ್ಳಬಹುದು ಮತ್ತು ಈ ವಿಭಾಗಗಳನ್ನು ತನ್ನ ಕಾರ್ಯಕರ್ತರನ್ನಾಗಿ ಸೆಳೆಯಬಹುದು. ಅತ್ಯಂತ ಪ್ರಾಮಾಣಿಕ ಮತ್ತು ನಿಸ್ವಾರ್ಥ ಕ್ರಾಂತಿಕಾರಿಗಳನ್ನು ತನ್ನ ಮಡಿಲಿಗೆ ತರುತ್ತಿರುವ ಪಕ್ಷಕ್ಕೆ ಮಾತ್ರವೇ ಕ್ರಾಂತಿಕಾರಿ ಚಳುವಳಿಯ ಹಾದಿಯಲ್ಲಿ ಅವಶ್ಯವಾಗಿ ಎದುರಾಗುವ ವಿವಿಧ ತಿರುವು ಮುರುವುಗಳಲ್ಲಿ ಜನ ಸಮುದಾಯವನ್ನು ಮುನ್ನಡೆಸಲು ಸಾಧ್ಯವಾಗುವುದು (ಕಾರ್ಯಕ್ರಮದ ಕಲಮು 7.16).

"ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ವು ಜನತಾ ಪ್ರಜಾಪ್ರಭುತ್ವವನ್ನು ಮತ್ತು ಸಮಾಜವಾದಿ ಪರಿವರ್ತನೆಯನ್ನು ಶಾಂತಿಯುತ ವಿಧಾನದ ಮೂಲಕ ಸಾಧಿಸಲು ಶ್ರಮಿಸುತ್ತದೆ. ಒಂದು ಶಕ್ತಿಯುತವಾದ ಸಾಮೂಹಿಕ ಕ್ರಾಂತಿಕಾರಿ ಚಳುವಳಿಯನ್ನು ಬೆಳೆಸುವ ಮೂಲಕ, ಸಂಸದೀಯ ಮತ್ತು ಸಂಸದೀಯೇತರ ಸ್ವರೂಪದ ಹೋರಾಟಗಳನ್ನು ಜೋಡಿಸುವುದರ ಮೂಲಕ, ಪ್ರತಿಗಾಮಿ ಶಕ್ತಿಗಳ ಪ್ರತಿರೋಧವನ್ನು ಸೋಲಿಸಲು ಮತ್ತು ಈ ಪರಿವರ್ತನೆಗಳನ್ನು ಶಾಂತಿಯುತ ವಿಧಾನಗಳ ಮೂಲಕ ಅನುಷ್ಠಾನಕ್ಕೆ ತರಲು ಕಾರ್ಮಿಕ ವರ್ಗ ಮತ್ತು ಅದರ ಮಿತ್ರ ವಿಭಾಗಗಳು ಶಕ್ತಿಮೀರಿ ಪ್ರಯತ್ನಿಸುವವು. ಆದರೆ ಆಳುವ ವರ್ಗಗಳು ಸ್ವಯಂ ಪ್ರೇರಣೆಯಿಂದ ತಮ್ಮ ಅಧಿಕಾರವನ್ನು ಎಂದೂ ಬಿಟ್ಟು ಕೊಡುವುದಿಲ್ಲ ಎಂಬುದನ್ನು ಯಾವಾಗಲು ನೆನಪಿನಲ್ಲಿಡಬೇಕು. ಜನತೆಯ ಇಚ್ಛೆಯನ್ನು ಧಿಕ್ಕರಿಸಿ, ಅದನ್ನು ಹಿಂಸೆಯಿಂದಲೂ, ಕಾನೂನು ಬಾಹಿರವಾದ ಅಕ್ರಮಗಳಿಂದಲೂ ಬದಲಿಸಲು ಅವು ಪ್ರಯತ್ನಿಸುತ್ತವೆ. ಆದ್ದರಿಂದ ಕ್ರಾಂತಿಕಾರಿ ಶಕ್ತಿಗಳು ಸದಾಕಾಲ ಎಚ್ಚರದಿಂದಿದ್ದು, ಯಾವುದೇ ಪರಿಸ್ಥಿತಿಯನ್ನು, ದೇಶದ ರಾಜಕೀಯ ಜೀವನದಲ್ಲುಂಟಾಗುವ ಯಾವುದೇ ತಿರುವು ಮುರುವು ಗಳನ್ನೆದುರಿಸಲು ಸಜ್ಜಾಗಿರುವಂತೆ ತಮ್ಮ ಕೆಲಸವನ್ನು ಯೋಜಿಸಿಕೊಳ್ಳುವುದು ಅಗತ್ಯವಾಗಿದೆ" (ಕಲಮು 7.18)

ಹೀಗೆ ಭಾರತದಲ್ಲಿ ಸಾಮಾಜಿಕ ಪರಿವರ್ತನೆ ಭಾರತದಲ್ಲಿರುವ ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆಯ ಆಧಾರದಲ್ಲಿ ಮಾತ್ರವೇ ಸಾಧ್ಯ. ಅದು ರಶ್ಯಾದ ಅನುಭವವನ್ನಾಗಲೀ, ಚೀಣಾ ಅನುಭವವನ್ನಾಗಲೀ, ಅಥವಾ ವಿಶ್ವದ ಬೇರೆ ಯಾವುದೇ ಅನುಭವವನ್ನಾಗಲೀ ಪುನಾರವರ್ತಿಸುವುದು ಸಾಧ್ಯವಿಲ್ಲ.

ಕೊನೆಯಲ್ಲಿ ಲೆನಿನ್ ಮಾತುಗಳನ್ನು ನೆನಪಿಸಿಕೊಳ್ಳೋಣ : "ಬಂಡವಾಳಶಾಹಿಯ ಭೀಕರತೆಯಿಂದ ಒಬ್ಬ ಪುಟ್ಟ ಬಂಡವಾಳಶಾಹಿ ಚಿತ್ತಕ್ಷೋಭೆಗೊಳಗಾಗುವುದು ಒಂದು ಸಾಮಾಜಿಕ ವಿದ್ಯಮಾನ. ಇದು ಅರಾಜಕವಾದಂತೆ ಎಲ್ಲಾ ಬಂಡವಾಳಶಾಹಿ ದೇಶಗಳ ಗುಣಲಕ್ಷಣಗಳಲ್ಲಿ ಒಂದು. ಇಂತಹ ಕ್ರಾಂತಿಕಾರತೆಯ ಅಸ್ಥಿರತೆ, ಅದರ ಒರಟುತನ, ತ್ವರಿತವಾಗಿ ಅಡಿಯಾಳಾಗುವ ಅದರ ಪ್ರವೃತ್ತಿ, ಔದಾಸೀನ್ಯ, ಭ್ರಾಂತಿ ಹಾಗೂ ಒಂದಿಲ್ಲೊಂದು ಬೂರ್ಜ್ವಾ ಖಯಾಲಿಯ ಬಗ್ಗೆ ಆವೇಶಭರಿತ ಮೋಹ ಕೂಡಾ ಎಲ್ಲರಿಗೂ ತಿಳಿದ ವಿಷಯ". ಹೀಗಿದೆ ಈ ಹಿಂದಿನ ಹಲವು 'ಸಂಗಾತಿ'ಗಳ ಮಾವೋವಾದಿ ಅರಾಜಕತಾವಾದ ಹಾಗೂ ಆಚರಣೆ.

WTO ಒತ್ತಡಗಳಿಗೆ ಮಣಿಯದಿರಲಿ......

ಪುಟ 7 ರಿಂದ

ನೀಡಿರುವ ಪ್ರತಿಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು ಒಪ್ಪಂದದಲ್ಲಿ ಸೇರಿಸುವ ಸೇವೆಗಳ ಪ್ರಸ್ತಾವ ಪಟ್ಟಿಯನ್ನು ಸಂಬಂಧಪಟ್ಟ ಎಲ್ಲರೊಂದಿಗೆ ಸಮಾಲೋಚಿಸಿ ಪರಿಷ್ಕರಿಸಬೇಕು.

4) ನೀಡಲಾದ ಸೇವೆಗಳ ಪ್ರಸ್ತಾವ ಪಟ್ಟಿಯಲ್ಲಿ ಶೇ. 51 ರ ವಿದೇಶಿ ನೇರ ಬಂಡವಾಳ (FDI) ದ ಮಿತಿಯನ್ನು ಮರುಪರಿಶೀಲಿಸಬೇಕು. ಈಗ ಭಾರತದಲ್ಲಿ ಎಫ್‌ಡಿಐ ಮಿತಿ ಶೇ 51 ಕ್ಕಿಂತ ಕಡಿಮೆ ಇರುವ ಸೂಕ್ಷ್ಮ ವಲಯಗಳನ್ನು ಈ ಪಟ್ಟಿಯಿಂದ ತೆಗೆದುಹಾಕಬೇಕು.

5) ರಿಯಾಯ್ತಿಗಳನ್ನು ಗಿಟ್ಟಿಸುವ ನೆಪದಲ್ಲಿ ಕೃಷಿ ಮತ್ತು ಕೃಷಿಯೇತರ ಮಾರುಕಟ್ಟೆ ಪ್ರವೇಶದ ರಕ್ಷಣೆಯನ್ನು ಸಡಿಲಗೊಳಿಸಬಾರದು.

ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳು (TRIPS) :

1) ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದಲ್ಲಿನ 'ಭೌಗೋಳಿಕ ಸೂಚಕಗಳ ರಕ್ಷಣೆ'ಯನ್ನು ಕೃಷಿ, ನೈಸರ್ಗಿಕ ಸರಕುಗಳು, ಕರಕುಶಲ ಉತ್ಪನ್ನಗಳು, ಕೈಗಾರಿಕಾ ಉತ್ಪನ್ನಗಳು, ಆಹಾರ ಪದಾರ್ಥಗಳು ಮೊಧಲಾದವುಗಳಿಗೆ ವಿಸ್ತರಿಸಲು ಶೀಘ್ರವೇ ಮಾತುಕತೆಗಳು ನಡೆಯಬೇಕು.

2) ಸೂಕ್ಷ್ಮಜೀವಾಣುಗಳು ಮತ್ತು ಜೈವಿಕೇತರ ಹಾಗೂ ಸೂಕ್ಷ್ಮಜೈವಿಕ ಪ್ರಕ್ರಿಯೆಗಳನ್ನು ಪೇಟೆಂಟ್ ಮಾಡುವ ಕುರಿತು ನಡೆಯುತ್ತಿರುವ ಪರಾಮರ್ಶೆಯಲ್ಲಿ ಭಾರತ ಇವುಗಳನ್ನು ಪೇಟೆಂಟ್‌ನಿಂದ ಹೊರಗಿಡಬೇಕು ಎಂದು ವಾದಿಸಬೇಕು.

3) ಟ್ರಿಪ್ಸ್‌ನ ವಿಮರ್ಶೆಯನ್ನು ಅದರ ಪರಿಣಾಮಗಳ ವಿಶಾಲ ಹಿನ್ನೆಲೆಯಲ್ಲಿ ಮಾಡುವಂತೆ ಭಾರತ ಆಗ್ರಹಿಸಬೇಕು ಮತ್ತು ಒಪ್ಪಂದದಲ್ಲೇ ಬದಲಾವಣೆ ಮಾಡುವಂತೆ ಒತ್ತಾಯಿಸಬೇಕು.

4) ಜೈವಿಕ ಸಂಪನ್ಮೂಲಗಳಿಗೆ ದಾರಿ, ಮಾಹಿತಿಪೂರ್ಣ ಪೂರ್ವ ಸಮ್ಮತಿ, ಪ್ರಯೋಜನದ ಪಾಲುದಾರಿಕೆಯ ಪ್ರಶ್ನೆಗಳನ್ನು ಚರ್ಚಿಸಬೇಕು.

5) ಭಾರತವು ತಂತ್ರಾಂಶ (ಸಾಫ್ಟ್‌ವೇರ್) ಹಾಗೂ ಜೈವಿಕ ತಂತ್ರಜ್ಞಾನ(ಬಯೋಟೆಕ್ನಾಲಜಿ)ಗಳಲ್ಲಿ ಸಾರ್ವತ್ರಿಕ ಸಾರ್ವಜನಿಕ ಪರವಾನಗಿ(ಜನರಲ್ ಪಬ್ಲಿಕ್ ಲೈಸನ್ಸ್) ಮಿತಿ ಅಗತ್ಯವಿದೆ ಎಂದು ವಾದಿಸಬೇಕು. ಸಾರ್ವಜನಿಕ ವ್ಯಾಪ್ತಿಯಲ್ಲಿ ತೆರೆದ ಪರವಾನಗಿಗಳ ಅಡಿಯಲ್ಲಿ ಜ್ಞಾನವನ್ನೂ ಬಳಸುವ ಎಲ್ಲಾ ಅವಿಷ್ಕಾರ ಹಾಗೂ ತಂತ್ರಾಂಶಗಳನ್ನು ಕಾಪಿರೈಟ್ ಮಾಡುವ ಹಕ್ಕಿಲ್ಲ, ಅಂದರೆ ಪೇಟೆಂಟ್ ಮಾಡುವಂತಿಲ್ಲ. ಎಲ್ಲಾ ದೇಶಗಳ ಕಾನೂನುಗಳಲ್ಲಿ ಈ ರಕ್ಷಣೆ ಬಿಂಬಿತವಾಗಿರಬೇಕು.

6) ಪ್ರತಿಯೊಂದು ದೇಶದ ಪೇಟೆಂಟ್ ಕಾನೂನು ತಂತ್ರಜ್ಞಾನದ ವರ್ಗಾವಣೆಯನ್ನು ವಿಳಂಬವಿಲ್ಲದೆ ಮಾಡುವುದನ್ನು ಮತ್ತಷ್ಟು ಮಾತುಕತೆಗಳಿಲ್ಲದೆ ಒಪ್ಪಿಕೊಳ್ಳಬೇಕು.

ಹೂಡಿಕೆ

ಹರಿದು ಬಂದರೆ
ನಮ್ಮಲ್ಲಿಗೆ
ವಿದೇಶಿ ಬಂಡವಾಳ
ದೊರೆಯುವುದಂತೆ
ದೇಶದೆಲ್ಲೆಡೆ
ರೂಪಾಯಿಗೆ
ನಾಲ್ಕು ಶೇರಿ ಜೋಳು

- ನರಸಿಂಹಪ್ಪ,
ಸಿಂಧನೂರು



ಉಮಾ ಭಾರತಿ ಅಮಾನತು ಮತ್ತು ಇದಕ್ಕೆ ಸಂಬಂಧಿಸಿದ ಬೆಳವಣಿಗೆಗಳು ಕೇವಲ ವ್ಯಕ್ತಿಗತ ಪ್ರಶ್ನೆಗಳಾಗಿರದೇ ಸಂಘ ಪರಿವಾರವು ಎದುರಿಸುತ್ತಿರುವ ಆಳವಾದ ಬಿಕ್ಕಟ್ಟಿನ ಮತ್ತೊಂದು ಸಾಕ್ಷಿಯಾಗಿದೆ.

ಉಮಾ ಭಾರತಿ ಅಮಾನತು

ಇನ್ನೂ ಆಳವಾದ ಬಿಕ್ಕಟ್ಟಿನಲ್ಲಿ ಮುಳುಗಿರುವ ಬಿಜೆಪಿ

ಬಿಜೆಪಿ ನಿಜವಾಗಿಯೂ ಒಂದು ಗಂಭೀರ ಬಿಕ್ಕಟ್ಟಿನಲ್ಲಿದೆ. ಉಮಾ ಭಾರತಿಯವರನ್ನು ಪಕ್ಷದಿಂದ ಅಮಾನತುಗೊಳಿಸಲಾಗಿದೆ. ಇದು ಈ ಒಂದು ವರ್ಷದಲ್ಲಿ ಎರಡನೇ ಬಾರಿ. ಬಿಹಾರದ ಚುನಾವಣೆಗಳ ಭಾವೋದ್ರೇಕ, ಅಲ್ಲಿನ "ಫೀಲ್ ಗುಡ್" ಇಳಿಯುವ ಮೊದಲೇ ಮಧ್ಯಪ್ರದೇಶದ ಬಿಜೆಪಿಯಲ್ಲಿ ಒಂದು ಆಳವಾದ ಕಂದರ ಬೆಳೆದಿದೆ. ಹುಬ್ಬಳ್ಳಿಯ ಈದ್ಗಾ ಮೈದಾನದ ಮೊಕದ್ದಮೆಯಲ್ಲಿ ಆರೋಪ ಪಟ್ಟಿ ಎದುರಿಸುತ್ತಿದ್ದ ಉಮಾ ಭಾರತಿ ಮಧ್ಯಪ್ರದೇಶದ ಮುಖ್ಯಮಂತ್ರಿ ಸ್ಥಾನವನ್ನು ಬಿಡಬೇಕಾಗಿ ಬಂದಿತ್ತು. ಆದರೆ ನಂತರ ಆಕೆಯ ಮೇಲಿನ ಆರೋಪ ಪಟ್ಟಿಯನ್ನು ಹಿಂತೆಗೆದುಕೊಂಡರೂ ಕೇಂದ್ರ ನಾಯಕತ್ವ ಆಕೆ ಮತ್ತೆ ಮುಖ್ಯಮಂತ್ರಿಯಾಗಲು ಬಿಡಲಿಲ್ಲ. ಈಗ ಅಲ್ಲಿ ಮೂರನೇ ಮುಖ್ಯಮಂತ್ರಿ ಬಂದರೂ ಉಮಾಗೆ ಆ ಸ್ಥಾನ ಮತ್ತೆ ಸಿಗಲಿಲ್ಲ ಎಂಬ ಸಿಟ್ಟಿನಿಂದ ಆಕೆಯ ಬೆಂಬಲಿಗರು ಭೋಪಾಲದ ಬಿಜೆಪಿ ಮುಖ್ಯ ಕಛೇರಿಯೆದುರು ಧಾಂಧಲೆ ಎಬ್ಬಿಸಿದ್ದು ಎಲ್ಲರ ಗಮನ ಸೆಳೆದಿದೆ.

ಎಲ್.ಕೆ.ಅಡ್ವಾಣಿ ಬಿಜೆಪಿ ಅಧ್ಯಕ್ಷರಾಗಿ ಮುಂದುವರೆಯುತ್ತಾರೋ ಇಲ್ಲವೋ ಎಂಬ ಅನಿಶ್ಚಿತತೆಯ ನಡುವೆಯೋ ಈ ಧಾಂಧಲೆಯೂ ನಡೆದಿದೆ. "ಸೈದ್ಧಾಂತಿಕ ಶುದ್ಧತೆ" ಉಳಿಸಿಕೊಂಡಿಲ್ಲ ಎಂಬ ಆರ್‌ಎಸ್‌ಎಸ್ ಟೀಕೆಯಿಂದ ಅಡ್ವಾಣಿ ಡಿಸೆಂಬರ್‌ನಲ್ಲಿ ಸ್ಥಾನ ತ್ಯಜಿಸುವುದಾಗಿ ಪ್ರಕಟಿಸಿದ್ದರು. ಅವರು ನಿಜವಾಗಿಯೂ ಬಿಡುತ್ತಾರೆಯೋ ಎಂದು ಕಾದು ನೋಡಬೇಕಾಗಿದೆ.

ಇವೆಲ್ಲಾ ಚುನಾವಣಾ ಸೋಲನ್ನು ಅರಗಿಸಿಕೊಳ್ಳಲಾರದ ಒಂದು ಪಕ್ಷದ ವ್ಯಕ್ತಿಗಳ ಸುತ್ತ ನಡೆಯುತ್ತಿರುವ ಗುಂಪುಗಾರಿಕೆಯ ಕಿತ್ತಾಟಗಳು ಎಂಬಂತೆ ಕಂಡರೂ ವಾಸ್ತವವಾಗಿ ಇವು ಇನ್ನೂ ಆಳವಾದ ಬಿಕ್ಕಟ್ಟಿನ ಮೇಲೆ ಪರದೆ ಎಳೆದಿವೆ. 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಪರಾಭವದ ನಂತರ ಆರ್‌ಎಸ್‌ಎಸ್/ಬಿಜೆಪಿಗೆ ಯಾವ ಪ್ರಶ್ನೆಗಳ ಮೇಲೆ ಸಾಮೂಹಿಕ ಬೆಂಬಲವನ್ನು ಅಣಿನೆರೆಸುವುದು ಎಂದು ತಿಳಿಯದಾಗಿದೆ. ಅವರ ಕೋಮುವಾದಿ ಅಜೆಂಡಾಕ್ಕೆ ಜನ ಅವರು ನಿರೀಕ್ಷಿಸಿದ ರೀತಿಯಲ್ಲಿ ಸ್ಪಂದಿಸಲಿಲ್ಲ. ಮಧ್ಯಪ್ರದೇಶ ಹಾಗೂ ರಾಜಸ್ತಾನದಲ್ಲಿ ಬಿಜ್‌ಲೀ. ಸಡಕ್, ಪಾನಿ (ವಿದ್ಯುತ್, ರಸ್ತೆ, ನೀರು) ಘೋಷಣೆಯ ಮೇಲೆ ಜಯ ಗಳಿಸಿದ್ದರಿಂದ ಈ ಅಭಿವೃದ್ಧಿ ಅಜೆಂಡಾವನ್ನು ಅಂಗೀಕರಿಸುವ ಪ್ರಯತ್ನ ನಡೆಯಿತು. ಇದರಿಂದಾಗಿಯೇ 'ಭಾರತ ಪ್ರಕಾಶಿಸುತ್ತಿದೆ', 'ಫೀಲ್‌ಗುಡ್' ಘೋಷಣೆಗಳು ಬಂದವು. ಆದರೆ ಈ ಘೋಷಣೆಗಳು ಮತ್ತು ವಾಸ್ತವತೆಯ ನಡುವಿನ ಅಜಗಜಾಂತರ ಅವರನ್ನು ತತ್ತರಗೊಳಿಸುವಂತಹ ತಿರುಗು ಬಾಣವಾಯಿತು. ಮಧ್ಯಪ್ರದೇಶದಲ್ಲೂ ಕೂಡಾ ಎರಡೇ ವರ್ಷಗಳಲ್ಲಿ ಮೂರನೇ ಮುಖ್ಯಮಂತ್ರಿಯನ್ನು ಪ್ರತಿಷ್ಠಾಪಿಸಬೇಕಾಗಿ ಬಂದಿದೆ. ಇದೊಂದು ರೀತಿಯ ದಾಖಲೆಯೇ ಸರಿ.


ಕೃಪೆ: ದಿ ಹಿಂದು


ಇವೆಲ್ಲಾ ಬಿಜೆಪಿ/ ಆರ್‌ಎಸ್‌ಎಸ್‌ನೊಳಗಿನ ಗಂಭೀರ ಬಿಕ್ಕಟ್ಟಿನೆಡೆ ಸ್ಪಷ್ಟವಾಗಿ ಬೊಟ್ಟು ಮಾಡಿ ತೋರಿಸುತ್ತಿವೆ. ಉಮಾ ಭಾರತಿ ತಾನೇ 'ಮೂಲ ಬಿಜೆಪಿ', ಸೋಗಿನ ಜನ ತನ್ನನ್ನು ಹೊರಹಾಕಿದ್ದಾರೆ ಎಂದು ಸಾರಿದ್ದಾರೆ. ಅತ್ತ ಆರ್‌ಎಸ್‌ಎಸ್ ಬಿಜೆಪಿಯ ಈಗಿನ ಮುಖಂಡತ್ವ ಪಕ್ಷವನ್ನು ದುರ್ಬಲಗೊಳಿಸುತ್ತಿದೆ ಎಂದು ಬಗೆದಿದೆ. ಈ ನಡುವೆ ಬಿಜೆಪಿಯ ಕಾರ್ಯಕರ್ತರು ಅಧಿಕಾರ ಕಳಕೊಂಡು ಶೂನ್ಯಭಾವದಿಂದ ಅಸ್ತವ್ಯಸ್ತಗೊಂಡಿದ್ದಾರೆ.

ಒಂದರ್ಥದಲ್ಲಿ ಈ ಬೆಳವಣಿಗೆ ಭಾರತೀಯ ರಾಜಕಾರಣ ಪ್ರೌಢಗೊಳ್ಳುತ್ತಿರುವ ಲಕ್ಷಣ. ಬಿಜೆಪಿಯ ಒಂದು ಫ್ಯಾಸಿಸ್ಟ್ ಮಾದರಿಯ ಉನ್ಮತ್ತ ಅಸಹಿಷ್ಣು "ಹಿಂದೂ ರಾಷ್ಟ್ರ" ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಸಂವಿಧಾನಿಕ ಗಣತಂತ್ರಕ್ಕೆ ಸಂಪೂರ್ಣವಾಗಿ ವಿರುದ್ಧವಾದದ್ದು. ಹೀಗಿರುವಾಗ ಆರ್‌ಎಸ್‌ಎಸ್/ ಬಿಜೆಪಿಯೊಳಗಿನ ಗೊಂದಲ ಈ ದುಷ್ಟ ಕೋಮುವಾದಿ ತತ್ವ ಮತ್ತು ಅಜೆಂಡಾವನ್ನು ಸಮುದ್ರಕ್ಕೆ ಎಸೆದುಬಿಡಬೇಕು ಎಂಬ ಭಾರತೀಯ ಜನಗಳ ಆಶಯವನ್ನು ಬಿಂಬಿಸುತ್ತದೆ. ಅದು ಭಾರತದ ಮಟ್ಟಿಗೆ ಒಳ್ಳೆಯದೇ ಅಲ್ಲವೇ? ○

ಗಂಗಾವತಿ: ಶ್ರೀಮಂತರು ಕಬಳಿಸಿದ್ದ ಭೂಮಿಯಲ್ಲಿ ಕೂಲಿಕಾರರು ನೆಟ್ಟ ಪೈರು

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಶ್ರೀಮಂತ ಭೂಮಾಲೀಕರು ಒತ್ತುಮಾಡಿಕೊಂಡಿದ್ದ ಸರಕಾರಿ ಭೂಮಿಯನ್ನು ಅದರ ನ್ಯಾಯಬದ್ಧ ಹಕ್ಕುದಾರರಾದ ಭೂಹೀನ ಕೂಲಿಕಾರರು ವಶಪಡಿಸಿಕೊಂಡು ಅಲ್ಲೀಗ ಹಸಿರು ಪೈರು ಬೆಳೆಯುತ್ತಿದೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ಪ್ರಭಾವ ಮತ್ತು ಚಳುವಳಿಯೂ ಬೆಳೆಯುತ್ತಿದೆ.

ಕನಕಗಿರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕಾರಟಗಿ ಹೋಬಳಿಯಲ್ಲಿರುವ ತೊಂಡಿಹಾಳ ಎನ್ನುವ ಪುಟ್ಟ ಗ್ರಾಮದಲ್ಲಿ ಶೇಕಡಾ 90ರಷ್ಟು ಕೂಲಿಕಾರರೇ ವಾಸವಾಗಿದ್ದಾರೆ. ಇದರ ಹತ್ತಿರ ದುಂಡಿಗಿ ಎನ್ನುವ ಗ್ರಾಮವು ಸಹಿತ ಇದ್ದು ಇಲ್ಲಿ ಕೇವಲ ಶೇ.10ರಷ್ಟು ಜನ ಅಕ್ಷರ ತಿಳಿದವರಿದ್ದಾರೆ. ಇಲ್ಲಿ ಶ್ರೀಮಂತ ಭೂಮಾಲಕರದ್ದೇ ದರ್ಬಾರು. ಯಾವುದೇ ಸೌಲಭ್ಯಗಳಿಲ್ಲದೇ ಜೀವನ ಸಾಗಿಸುವ ನಿರ್ಗತಿಕ ಕುಟುಂಬಗಳಿವೆ. ಇಂತಹ ಪ್ರದೇಶದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘ ತನ್ನ ಘಟಕವನ್ನು ಸ್ಥಾಪಿಸಲು 1995ರಿಂದ ಶ್ರಮ ವಹಿಸಿದೆ. ಈ ಗ್ರಾಮಗಳಿಗೆ ಹತ್ತಿರವಾದ ಸಿಂಗನಾಳ ಘಟಕವು ಶ್ರಮವಹಿಸಿ ಘಟಕ ಸ್ಥಾಪನೆಗೆ ಪ್ರಯತ್ನಿಸಿದಾಗ ಗ್ರಾಮದ ಕೆಲವು ಪಟ್ಟಭದ್ರರಿಂದ ದಬ್ಬಾಳಿಕೆಗೆ ಒಳಗಾಗಿದ್ದರೂ ಸಹಿತ ಪಟ್ಟುಬಿಡದೇ ಸತತ ಪ್ರಯತ್ನದಿಂದ ತೊಂಡಿಹಾಳ ದುಂಡಿಗಿಯಲ್ಲಿ ಘಟಕ ಸ್ಥಾಪನೆಯಾಯಿತು. ಇದನ್ನು ಸಹಿಸದ ಕೆಲವು ದುಷ್ಟ ಹಿತಾಸಕ್ತಿಗಳು ಸಂಘಟನೆಯಲ್ಲಿ ಒಡಕುತರುವ ಸಾಧ್ಯತೆಯಿತ್ತು. ತಾಲೂಕುಸಮಿತಿ ನಿಗಾವಹಿಸಿ ಹಾಗಾಗದಂತೆ ಹೆಚ್ಚಿನ ಶ್ರಮವನ್ನು ಹಾಕಿತು. ಗ್ರಾಮ ಹುಟ್ಟಿದಾರಂಭದಿಂದ ಸ್ಮಶಾನವಿದ್ದಿಲ್ಲ, ಭೂಮಾಲಕರು ತಮ್ಮ ಹೊಲಗಳಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ಭೂರಹಿತರು ಹಳ್ಳದ ದಂಡೆಯಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ಸಂಘಟನೆಯಿಂದ 1 ಎಕರೆ ಭೂಮಿಯನ್ನು ಸ್ಮಶಾನಕ್ಕೆ ಪ್ರಥಮವಾಗಿ ಬಿಡಿಸಿಕೊಟ್ಟಿದ್ದರಿಂದ ಸಂಘಟನೆಯ ಬಗೆಗೆ ಗ್ರಾಮದ ರೈತರ ಸಹಕಾರವೂ ದೊರೆಯಿತು. ಸರ್ವೆ ನಂ.107 ಕರ್ನಾಟಕ ಸರಕಾರಿ ಭೂಮಿ 7 ಎಕರೆ ಇದ್ದು ಕೆಲವು ಶ್ರೀಮಂತರು ಒತ್ತುವರಿ ಮಾಡಿದ್ದನ್ನು ಗುರುತಿಸಿ, ಅದನ್ನು ಸಾಮೂಹಿಕವಾಗಿ ಬೇಸಾಯ ಮಾಡಲು ಸಂಘವು ತೀರ್ಮಾನಿಸಿತು.


ಶ್ರೀಮಂತರು ಆಕ್ರಮಿಸಿಕೊಂಡಿದ್ದ ಸರ್ಕಾರಿ ಭೂಮಿಯನ್ನು ತಮ್ಮ ವಶಕ್ಕೆ ಪಡೆದ ಭೂಹೀನರು

ಅದರಂತೆ ಮಹಿಳಾ ಕಾರ್ಯಕರ್ತರೇ ಮುಂದೆ ನಿಂತು ಭೂಮಿಯಲ್ಲಿ ಪ್ರವೇಶ ಮಾಡಿದರು. ಶ್ರೀಮಂತರು ಅವಾಚ್ಯ ಶಬ್ದಗಳಿಂದ ಬಯ್ದು ಹೊರಗೆ ಹೋಗುವಂತೆ ಬೆದರಿಸಿ ಕಲಹಕ್ಕಿಳಿದರು. ಆದರೆ ಎದೆಗುಂದದೇ, ದುರಗಮ್ಮ ಮಂಗಳಾಪುರ, ಗಂಗಮ್ಮ ಚನ್ನಳ್ಳಿ, ಮಾರೆಮ್ಮ ಉಳೇನೂರ, ಹಂಪಮ್ಮ ಕೊಪ್ಪಳ, ಲಕ್ಕಮ್ಮ ಮಡಿವಾಳರ ಹೀಗೆ ಎಲ್ಲ ಮಹಿಳೆಯರು ಸಂಘದ ಘೋಷಣೆ ಕೂಗುತ್ತ ಸಾಗುವಳಿಗೆ ಪ್ರಯತ್ನಿಸಿದರು. ಆಗ ಆ ಶ್ರೀಮಂತರು ಹಿಂದೆ ಸರಿದರು. ರೈತ ಮುಖಂಡರಾದ ಶರಣಪ್ಪ ನಾಡಿಗೇರ ಎನ್ನುವವರು ತಮ್ಮ ಟ್ರಾಕ್ಟರನ್ನು ಕೊಟ್ಟರು. ಅದರಿಂದ ಭೂಮಿ ಹದ ಮಾಡಿ ಭತ್ತವನ್ನು ನಾಟಿ ಮಾಡಲಾಯಿತು. ಸದರಿ ಶರಣಪ್ಪನವರೇ ಈ ಗದ್ದೆಗೆ ಬೇಕಾದ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಕೊಟ್ಟಿದ್ದಾರೆ. ಈಗ ಬೆಳೆ ಹುಲುಸಾಗಿ ಬೆಳೆದಿದೆ ಸಾಮೂಹಿಕವಾಗಿ ಕಟಾವು ಮಾಡುವುದೆಂದು ತೀರ್ಮಾನಿಸಲಾಗಿದೆ.

ಇದಲ್ಲದೆ ಜನರಿಗೆ ನಿವೇಶನದ ಸಮಸ್ಯೆ ತೀವ್ರವಾಗಿತ್ತು. ದುಂಡಿಗಿ ಗ್ರಾಮದಲ್ಲಿ, ಸ.ನಂ.24ರಲ್ಲಿ 35 ಎಕರೆ ಕರ್ನಾಟಕ ಸರಕಾರದ ಭೂಮಿ ಇದ್ದು ಅಲ್ಲಿ ಕೆಲವು ಶ್ರೀಮಂತರು 1 ಎಕರೆ, 2ಎಕರೆ ಹೀಗೆ ನಿವೇಶನಗಳನ್ನು ಹಿಡಿದಿದ್ದರು. ಅಲ್ಲಿ ಗಿಡಮರಗಳನ್ನು ಬೆಳೆಸಿ ಕೊಂಡಿದ್ದರು. ಯಾರೂ ಅಲ್ಲಿ ಪ್ರವೇಶಿಸದಂತೆ ತಡೆ ಹಿಡಿದಿದ್ದರು. ಈ ಭೂಮಿ ಯಲ್ಲಿ ಪ್ರವೇಶಿಸಿದ ಕಾರ್ಯಕರ್ತರು ಸಂಘಟನೆಯ ಬಾವುಟವನ್ನು ತೆಗೆದು ಕೊಂಡು ಘೋಷಣೆ ಕೂಗುತ್ತ ಅಲ್ಲಿದ್ದ ಗಿಡಗಳನ್ನು ಕಡಿದು ಮನೆ ನಿವೇಶನಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನುಳಿದ ಒತ್ತುವರಿ ಮಾಡಿದ್ದ ಭೂಮಿಯನ್ನು ಬಿಡಿಸಿ ಸಾಗುವಳಿ ಮಾಡುವ ಗುರಿಯನ್ನು ಸಂಘಟನೆ ಹೊಂದಿದೆ.

ಈ ಯಶಸ್ಸಿನ ಹಿನ್ನೆಲೆಯಲ್ಲಿ ಕೂಲಿಯ ಬಗ್ಗೆ ದುಂಡಿಗಿಯಲ್ಲಿ ಸಮಾವೇಶವನ್ನು ಸಂಘಟಿಸಲಾಗಿತ್ತು. ಸುಮಾರು 10 ಹಳ್ಳಿಗಳಿಂದ 600 ಜನರು ಭಾಗವಹಿಸಿದ್ದರು. ನಂತರ ತೊಂಡಿಹಾಳದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ.ನಿತ್ಯಾನಂದ ಸ್ವಾಮಿಯವರು ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದರು. ರೈತರು ಕೂಲಿಯನ್ನು ಹೆಚ್ಚಿಸಲು ಒಪ್ಪಿದ್ದಾರೆ. ಗುತ್ತಿಗೆ ಆಧಾರದಲ್ಲಿ ನಾಟಿ ಕೆಲಸ, ಕಟಾವು ಕೆಲಸಗಳು ನಡೆಯುತ್ತಿವೆ. ಎಕರೆಗೆ 50ರಿಂದ 100 ರೂ ಹೆಚ್ಚಿಗೆ ಕೊಡಿಸಲು ಸಾಧ್ಯವಾಗಿದೆ. ಈಗ ಸಂಘಟನೆಯು ಬೇರೆ ಬೇರೆ ಹಳ್ಳಿಗಳಿಗೆ ವಿಸ್ತರಿಸುವ ಸಾಧ್ಯತೆ ಹೆಚ್ಚಾಗಿದೆ. ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾಂ.ಬಾಳಪ್ಪ ಮತ್ತು ತಾಲೂಕು ಕಾರ್ಯದರ್ಶಿಯಾದ ಹೆಚ್.ಲಿಂಗಪ್ಪ ಇವರು ಮಾರ್ಗದರ್ಶನ ಮಾಡುತ್ತಿದ್ದಾರೆ. ಪಕ್ಕದ ಗ್ರಾಮವಾದ ತೊಂಡಿಹಾಳ ಕ್ಯಾಂಪ್ (28ನೇ ಕಾಲುವೆ)ನಲ್ಲಿ ನಿವೇಶನರಹಿತ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಾಲುವೆ ದಂಡೆಯ ಮೇಲೆ, ರಸ್ತೆ ಬದಿಯಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಇಲ್ಲಿ ಸರಕಾರಿ ಭೂಮಿ ಇಲ್ಲದ್ದರಿಂದ ಆಶ್ರಯ ಯೋಜನೆ ಅಡಿಯಲ್ಲಿ ಭೂಮಿಯನ್ನು ಖರೀದಿಸಿ ನಿವೇಶನರಹಿತರಿಗೆ ವಿತರಿಸಬೇಕೆಂಬ ಹೋರಾಟ ನಡೆದಿದೆ. ಈ ಎಲ್ಲಾ ಹೋರಾಟಗಳಿಗೆ ಸಿಂಗನಾಳ ಘಟಕದವರು ಪ್ರೋತ್ಸಾಹ ಕೊಡುತ್ತಿರುವುದು ವಿಶೇಷವಾಗಿದೆ. ಇದರಂತೆ ಹೊಸ ಜೂರಟಗಿ ಗ್ರಾಮದಲ್ಲಿ ಕೆಲವು ಶ್ರೀಮಂತರು ಸರಕಾರಿ ಭೂಮಿಯನ್ನು ಅತಿಕ್ರಮಿಸಿಕೊಂಡು ನಿವೇಶನರಹಿತ ಕೂಲಿಕಾರರಿಗೆ ಮನೆ ನಿವೇಶನ ಸಿಗದಂತೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಇಲ್ಲಿ ದೌರ್ಜನ್ಯ, ದಬ್ಬಾಳಿಕೆ ಎಷ್ಟು ಹೆಚ್ಚಿದೆ ಎಂದರೆ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಬಡವರು ಸ್ಪರ್ದೆಗೆ ಇಳಿಯುವುದೇ ಒಂದು ದೊಡ್ಡ ಅಪರಾಧವಾಗಿದೆ. ಪಾಳೆಯಗಾರರಂತೆ ಕೆಲವರು ವರ್ತಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದು ಇಷ್ಟು ವರುಷಗಳಾದರೂ ಇಲ್ಲಿ ಕನಿಷ್ಠ ಪ್ರಜಾಪ್ರಭುತ್ವ ಹಕ್ಕುಗಳು ಜಾರಿಯಾಗಿಲ್ಲ. ಸರಕಾರಿ ಅಧಿಕಾರಿಗಳು ಈ ಪಾಳೆಯಗಾರರೊಂದಿಗೆ ಶಾಮೀಲಾಗಿರುವುದರಿಂದ ನಿರಂತರ ಶೋಷಣೆ ನಡೆದಿದೆ. ಸಂಘಟನೆ ಸದಸ್ಯರಾಗದಂತೆ ಜನರಲ್ಲಿ ಭಯಭೀತಿ ಮೂಡಿಸಲಾಗಿದೆ. ಪ್ರಾಣಭಯದ ನೆರಳಿನಲ್ಲಿ ಕೂಲಿಕಾರರು ಜೀವಿಸುತ್ತಿದ್ದಾರೆ. ಇದೆಲ್ಲವನ್ನು ಮೀರಿ ಕೂಲಿಕಾರರನ್ನು ಸಂಘಟಿಸಿ ಚಳುವಳಿ ಬೆಳೆಸಲು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಶ್ರಮಿಸುತ್ತಿದೆ.

ವರದಿ : ಹೆಚ್.ಗಂಗಾಧರಯ್ಯ

ನಮಗೆ ಬೇಕಾಗುವ ಔಷಧಿಗಳು

ನಮ್ಮ ಆರೋಗ್ಯದ ಜವಾಬ್ದಾರಿಯನ್ನು ಕೇವಲ ವೈದ್ಯರು - ಔಷಧ ಕಂಪನಿಗಳಿಗೆ ಬಿಡಲಾಗದು - ಓದಿ

ಆರೋಗ್ಯ ಸಾಧನೆಗೆ ಹಲವಾರು ವಿಧಾನಗಳಿವೆ. ಉದಾ : ಪೌಷ್ಟಿಕ ಆಹಾರ, ನೈರ್ಮಲ್ಯ, ವ್ಯಾಯಾಮ. ಅನಾರೋಗ್ಯವಾದಾಗ ಆರೋಗ್ಯ ಹೊಂದಲು ಔಷಧಿಗಳು ಪ್ರಮುಖ ಪಾತ್ರವಹಿಸುತ್ತದೆ. ಔಷಧಿ ಸಂಶೋಧನೆ ಭರದಿಂದ ಸಾಗಿದೆ ಹಾಗೂ ನಮಗೆ ಹೊಸ ಹೊಸ ಔಷಧಿಗಳು ದೊರಕುತ್ತವೆ. ಆದರೆ ಎಲ್ಲ ರೋಗಗಳಿಗೂ ಔಷಧಿಗಳಿವೆ (Every ill has a Pill) ಎಂಬುದು ತಪ್ಪು ನಂಬಿಕೆ.

ನಮಗೆ ಬೇಕಾಗುವ ಔಷಧಿಗಳು ಹೇಗಿರಬೇಕು? ನಮಗೆ ದೊರಕುವ ಔಷಧಿಗಳು ಉಪಯುಕ್ತ ಔಷಧಿಯೆಂದು ವೈಜ್ಞಾನಿಕವಾಗಿ ರುಜುವಾತಾಗಿರಬೇಕು. ಔಷಧಿಗಳಿಂದ ಚಿಕಿತ್ಸೆ ಪರಿಣಾಮಕಾರಿಯಾಗಬೇಕು. ಔಷಧಿಗಳು ಕೈಗೆಟುಕುವ ಬೆಲೆಯಲ್ಲಿ ಸುಲಭವಾಗಿ ದೊರಕಬೇಕು. ಔಷಧಿಯಿಂದ ಅಡ್ಡಪರಿಣಾಮಗಳಿರಬಾರದು. ಈ ಎಲ್ಲಾ ಗುಣಗಳಿರುವ ಔಷಧಿಗಳು ದೊರಕುತ್ತವೆಯೇ?

ಔಷಧಿಗಳಿಗೆ ಈ ಎಲ್ಲಾ ಗುಣಗಳಿರಬೇಕೆಂಬುದು ಬಯಸುವುದು ಸಹಜವಾದುದ್ದು. ಆದರೆ ಎಲ್ಲ ಔಷಧಿಗಳಲ್ಲಿ ಈ ಎಲ್ಲ ಗುಣಗಳಿರುವುದಿಲ್ಲ. ಮಾರುಕಟ್ಟೆಯಲ್ಲಿ ದೊರಕುವ ಕೆಲವು ಔಷಧಿಗಳು ವೈಜ್ಞಾನಿಕವಾಗಿ ರುಜುವಾತಾಗಿದೆ. ಉದಾ ಐಬೂಪ್ರೋಫೆನ್ (ಐಬುಜೆಸಿಕ್), ಅಮಾಕ್ಸಿಸಿಲಿನ್ (ನೈಮಾಕ್ಸ್). ಆದರೆ ರುಜುವಾತಾಗದ ಔಷಧಿಗಳೂ ಹಲವಾರಿವೆ ಉದಾ. ಸೇರೀಶಿಯೋಪೆಪ್ಟಿಡಿಸ್ (ಗಾಯದಿಂದಾದ ಊತ ಕಡಿಮೆ ಮಾಡಲು ಉಪಯೋಗಿಸುವ ಔಷಧಿ) ಪ್ಲಾಸೆಂಟ್ರೆಕ್ಸ್ (ಪೆಲ್ವಿಕ್ ಇನ್‌ಫ್ಲಮೇಟರಿ ಡಿಸೀಸ್ - ಮಹಿಳೆಯರ ಕಾಯಿಲೆಗೆ ಉಪಯೋಗಿಸುವ ಔಷಧಿ), ಟಾನಿಕ್‌ಗಳು (ಬೇಯರ್ಸ್ ಟಾನಿಕ್, ಪ್ರೋಟೋಬೆಕ್ಸ್), ಮಲ್ಟಿವಿಟಮಿನ್‌ಗಳು (ಸುಪ್ರಾಡಿನ್), ಆಂಟಿಆಕ್ಸಿಡೆಂಟ್‌ಗಳು (ಗ್ಲೇಸ್, ನೋಕ್ಸಾಡ್), ರಕ್ತಸ್ರಾವ ನಿಲ್ಲಿಸಲು ಉಪಯೋಗಿಸುವ ಔಷಧಿಗಳು, ಹೆಚ್ಚು ಮಾರಾಟವಾಗುವ ಕೆಮ್ಮಿನ ಸಿರಪ್‌ಗಳು (ಗ್ಲೈಕೋಡಿನ್ ಇತ್ಯಾದಿ), ಸಂಮಿಶ್ರ ಔಷಧಿಗಳು (ಆಂಟಿಬಯಾಟಿಕ್‌ಗಳು - ಅಮಾಕ್ಸಿಸಿಲಿನ್ + ಕ್ಲಾಕ್ಸಾಸಿಲಿನ್; ನೋವು ನಿವಾರಕಗಳು - ಐಬೂಪ್ರೋಫೆನ್ + ಪೇರಸಿಟಮಲ್, ವಿಟಮಿನ್‌ಗಳು - ನ್ಯುರೋಬಿಯಾನ್ ಫೋರ್ಟ್ ಇತ್ಯಾದಿ).



ಆಧುನಿಕ ಔಷಧಿಗಳು ಪರಿಣಾಮಕಾರಿಯಾಗಬೇಕಾದರೆ ಆ ಔಷಧಿಗಳ ಉಪಯೋಗ ಸರಿಯಾಗಿರಬೇಕು. ಭಾರತದಲ್ಲಿ ದೊರಕುವ ಔಷಧಿಗಳು ಕೈಗೆಟುಕುವ ಬೆಲೆಯಲ್ಲಿ ದೊರಕುತ್ತವೆಯೆಂದು ಹೇಳಬಹುದು. ಇದಕ್ಕೆ ಕಾರಣ ನಮ್ಮ 'ಭಾರತೀಯ ಪೇಟೆಂಟ್ ಕಾನೂನು 1970'. ಆದರೆ ಪೇಟೆಂಟ್ ಕಾಯಿದೆಯನ್ನು ಬದಲಿಸಲಾಗುತ್ತಿದೆ. ಈಗ ದೊರಕುವ ಔಷಧಿಗಳ ಬೆಲೆಗಳು ಅತಿ ಹೆಚ್ಚಾಗುವ ಸಂಭವವಿತ್ತು. ಆದರೆ ಒಂದು ಸಮಾಧಾನಕರ ವಿಷಯವೆಂದರೆ ಪೇಟೆಂಟ್ ಕಾನೂನನ್ನು ಬದಲಿಸುವಂತೆ ಎಡಪಕ್ಷಗಳು ಹಾಗೂ ಕೆಲವು ಜನಾರೋಗ್ಯ ಸಂಸ್ಥೆಗಳು ಹೋರಾಟ ಮಾಡಿವೆ. ಇದರಿಂದಾಗಿ ಈಗ ದೊರಕುವ ಎಲ್ಲ ಔಷಧಿ ಬೆಲೆಗಳು ಹೆಚ್ಚಾಗುವುದಿಲ್ಲ.

ಎಲ್ಲ ಔಷಧಿಗಳಿಗೆ ಅಡ್ಡಪರಿಣಾಮಗಳಿರುತ್ತವೆ. ಅಡ್ಡ ಪರಿಣಾಮವಿರದೇ ಇರುವ ಔಷಧಿಗಳೇ ಇಲ್ಲ. ಔಷಧಿ ಪ್ರಮಾಣ ಹೆಚ್ಚಿದಂತೆ ಅಡ್ಡಪರಿಣಾಮ ಹೆಚ್ಚುತ್ತದೆ. ಅನೇಕ ಬಾರಿ ಅಡ್ಡ ಪರಿಣಾಮವಾದಲ್ಲಿ (ಉದಾ. ಎದೇ ನೋವಿಗೆ ಉಪಯೊಗಿಸುವ ನೈಟ್ರೋ ಗ್ಲಿಸರಿನ್‌ನಿಂದ ಉಂಟಾಗುವ ತಲೇ ನೋವು) ಅದನ್ನು ಸಹಿಸಿಕೊಳ್ಳಬಹುದಾಗಿದೆ, ಕ್ಯಾನ್ಸರ್ ಔಷಧಿಗಳನ್ನು ಉಪಯೋಗಿಸಿದಾಗ ಉಂಟಾಗುವ ವಾಂತಿ, ಕೂದಲುದುರುವಿಕೆಯನ್ನು ಸಹಿಸಿಕೊಳ್ಳದಿದ್ದರೆ, ಕ್ಯಾನ್ಸರ್‌ನಿಂದಾಗುವ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ವೈದರು ಔಷಧಿ ಯಿಂದಾಗುವ ಅಡ್ಡ ಪರಿಣಾಮಗಳನ್ನು ತಿಳಿಸುತ್ತಾರೆ, ಅವರು ತಿಳಿಸದಿದ್ದರೆ ನೀವೇ ಕೇಳಿ ತಿಳಿದುಕೊಳ್ಳಬಹುದಲ್ಲ? ಅವರು ನಿಮಗೆ ತಿಳಿಸದಿದ್ದರೂ ವಿಷಯದ ಬಗ್ಗೆ ಜಾಗರೂಕತೆ ವಹಿಸುತ್ತಾರೆ. ಔಷದಿಯಿಂದ ಅಡ್ಡಪರಿಣಾಮ ವಿದೆಯೆಂದು ಔಷಧಿ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕಾಗಿಲ್ಲ !

ಔಷಧಿಗಳು ಸುಲಭವಾಗಿ ದೊರಕಬೇಕು. ದೊರೆಯದಿದ್ದರೆ ಉಪಯೋಗಿಸುವದೆಂತು? ಸಾಮಾನ್ಯವಾಗಿ ವೈದ್ಯರು ಬರೆದುಕೊಟ್ಟ ಔಷಧಿಗಳು ಔಷಧಿ ಅಂಗಡಿಗಳಲ್ಲಿ ದೊರಕಬೇಕು, ಔಷಧಿಗಳು ಎಲ್ಲಿ ದೊರಕುತ್ತವೆ ಎಂದು ವೈದ್ಯರೇ ತಿಳಿಸಬೇಕು. ಔಷಧಿಗಳು ದೊರಕದಿದ್ದರೆ ವೈದ್ಯರೇ ಔಷಧಿ ತರಿಸಿಕೊಡಬೇಕು. ಸರಕಾರಿ ಆಸ್ಪತ್ರೆ ವೈದ್ಯರು ಬರೆದುಕೊಟ್ಟ ಔಷಧಿಗಳು ಸರಕಾರಿ ಆಸ್ಪತ್ರೆಯಲ್ಲಿಯೇ ದೊರಕಬೇಕು. ಆದರೆ ಕೆಲವು ಬಾರಿ ಹೊರಗಿನ ಔಷಧಿ ಅಂಗಡಿಗಳಲ್ಲಿ ದೊರಕುವ ಔಷಧಿಗಳಿಗೆ ಚೀಟಿ ಬರೆದುಕೊಡುತ್ತಾರೆ ! ಸರಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಉಚಿತವಾಗಿ ದೊರಕಬೇಕು. ಆದ್ದರಿಂದ ಔಷಧಿಗಳನ್ನು ಕೇಳಿ ಪಡೆದುಕೊಳ್ಳಿ.


ಅನಗತ್ಯ ಅಪಾಯಕಾರಿ ಔಷಧಿಗಳು

ನಮಗೆ ಬೇಕಾಗದಿರುವ ಔಷಧಿಗಳೆಂದರೆ ಅನಗತ್ಯ ಅಪಾಯಕಾರಿ ಔಷಧಿಗಳು. ಆ ಔಷಧಿಗಳು ನಮ್ಮಲ್ಲಿ ಹೇರಳವಾಗಿ ದೊರೆಯುತ್ತವೆ. ವೈದ್ಯರೂ ಆ ಔಷಧಿಯನ್ನು ಬರೆದುಕೊಡುತ್ತಾರೆ. ಔಷಧಿ ಕಂಪೆನಿಗಳು ಆ ಔಷಧಿಯನ್ನು ತಯಾರಿಸುತ್ತಾ ಬಂದಿವೆ. ಔಷಧಿ ನಿಯಂತ್ರಣ, ಸರಕಾರ ಆ ಔಷಧಿಗಳ ಬಗ್ಗೆ ಗಮನಹರಿಸಿಲ್ಲ. ಔಷಧಿ ಕಂಪೆನಿಗಳಿಗೆ ಲಾಭ ಮುಖ್ಯ ಆದ್ದರಿಂದ ಇವುಗಳ ಬಗ್ಗೆ ಅವರು ಗಮನಹರಿಸುವುದಿಲ್ಲ.

ಭಾರತ ಔಷಧಿ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಹೊಂದಿದ್ದರೂ ಭಾರತದಲ್ಲಿ ಅನಗತ್ಯ ಅಪಾಯಕರ ಔಷಧಿಗಳ ಹಾವಳಿ ಇದ್ದೇ ಇದೆ. ಈ ವಿಷಯದ ವಿರುದ್ಧ ಔಷಧಿ ಕ್ರಿಯಾವೇದಿಕೆಗಳು ಹಾಗೂ ಜನಾರೋಗ್ಯ ಸಂಘಟನೆಗಳು ಹೋರಾಡುತ್ತಾ ಬಂದಿವೆ, ನೀವು ಈ ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರಯತ್ನಿಸುವಿರಾ ?

○


ವಿಜಯ ಕರ್ನಾಟಕ - ಕೋಮುಭಾವನೆ ಪ್ರಚೋದಕ



ದೇಶದ ನಂ.1 ಕನ್ನಡ ಪತ್ರಿಕೆಯ ಮಾಲೀಕರಾದ ವಿಜಯ ಸಂಕೇಶ್ವರರು ಬಿಜೆಪಿ ಪಕ್ಷವನ್ನು ತೊರೆದು, ಕನ್ನಡ ನಾಡು ಪಕ್ಷ ರಚಿಸಿ-ಇದೀಗ 'ಜಾತ್ಯಾತೀತ ಜನತಾದಳ' ಸೇರಿದರೂ ಪತ್ರಿಕೆಯ ಕೇಸರಿ ಬಣ್ಣದಲ್ಲಿ ಏನು ಬದಲಾವಣೆಯಾಗಿಲ್ಲ. ಸಂಘ ಪರಿವಾರದ ಕೋಮುವಾದಿ ಅಜೆಂಡಾಗಳು ಪತ್ರಿಕೆಯಲ್ಲಿ ಅತಿ ಹೆಚ್ಚು ಪ್ರಚಾರ ಪಡೆಯುತ್ತಾ ನಮ್ಮ ನಾಡಿದ ಕೋಮುಸೌಹಾರ್ದತೆಯ ಪರಂಪರೆಗೆ ಆತಂಕಕಾರಿಯಾಗಿವೆ.

ವಿಜಯಕರ್ನಾಟಕ ದಿನ ಪತ್ರಿಕೆಯ ಸಂಸ್ಥಾಪಕರಾದ ವಿಜಯ ಸಂಕೇಶ್ವರರವರು ಹಿಂದೆ ಬಿಜೆಪಿ ವತಿಯಿಂದ ಸಂಸತ್ ಸದಸ್ಯರಾಗಿದ್ದರು. ಆ ಸಂದರ್ಭಧಲ್ಲಿ ಸಾರ್ವಜನಿಕ ಸಭೆಗಳಲ್ಲಿ ಆರ್.ಎಸ್.ಎಸ್‌ನ ಪ್ರಚಾರಕರಂತೆ ಕೋಮು ಭಾವನೆಗಳನ್ನು ಕೆರಳಿಸುವಂತಹ ಭಾಷಣ ಮಾಡುತ್ತಿದ್ದರು. ಕೋಮು ಸಾಮರಸ್ಯವನ್ನು ಪ್ರತಿಪಾದಿಸುವ ಶ್ರೀ ತೋಂಟದಾರ್ಯ ಸ್ವಾಮಿಗಳು 'ಬೇರೆ ಧರ್ಮದವರೂ ಸಹ ನಿಮಗೆ ಮತ ನೀಡಿದ್ದರು' ಎಂಬುದನ್ನು ಮರೆಯಬಾರದು ಎಂದು ಒಮ್ಮೆ ಎಚ್ಚರಿಸಿಯೂ ಇದ್ದರು.

ಇಂದು ಸಂಕೇಶ್ವರರು ಬಿಜೆಪಿಯಲ್ಲಿಲ್ಲ, ಕನ್ನಡ ನಾಡು ಪಕ್ಷವನ್ನು ಕಟ್ಟಿ, ಕೈಸುಟ್ಟುಕೊಂಡು ಈಗ ಜನತಾದಳ (ಜಾತ್ಯಾತೀತ)ಕ್ಕೆ ಬಂದಿದ್ದಾರೆ. ಆದರೆ ಅವರು ನಡೆಸುತ್ತಿರುವ ಪತ್ರಿಕೆಯು ಕೋಮು ಭಾವನೆಗಳನ್ನು ಕೆರಳಿಸುವ ಸುದ್ದಿಗೆ ಹೆಚ್ಚಿನ ಮಹತ್ವ ನೀಡುವುದನ್ನು ನಿಲ್ಲಿಸಿಲ್ಲ. ಉದಾಹರಣೆಗೆ ನವೆಂಬರ್ 20ರ ಬೆಂಗಳೂರಿನಿಂದ ಮುದ್ರಿತವಾಗಿದ್ದ ಪತ್ರಿಕೆಯು 'ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಸಂಕಲ್ಪ' ಎಂಬ ತಲೆ ಬರಹದಲ್ಲಿ ಪ್ರವೀಣ್ ತೊಗಾಡಿಯಾ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ನಡೆದ ಸಾಧು ಸಂತರ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ್ದನ್ನು ದೊಡ್ಡ ಸುದ್ದಿಯಾಗಿ ಮಧ್ಯ ಪುಟದಲ್ಲಿ ಪ್ರಕಟಿಸಿದ್ದಾರೆ. ಮಧ್ಯಪುಟದಲ್ಲಿ ಪ್ರಕಟಿಸುವುದೆಂದರೆ, ಬಹುಶಃ ವಿಜಯಕರ್ನಾಟಕದ 10 'ಎಡಿಷನ್'ಗಳಿಗೂ ಹೋಗುತ್ತದೆ. ಅದೇ ಸುದ್ದಿಯ ಕೆಳಗಡೆಯಲ್ಲಿ 'ಗೋಹತ್ಯೆ ನಿಲ್ಲದೆ ಸ್ವಾಮಿ ಸಲ್ಲೆ' ಎಬ



ತಲೆಬರಹದಲ್ಲಿ ಹಿಂದೂ ಜಾಗರಣ ವೇದಿಕೆಯ ರಾಜ್ಯ ಸಂಚಾಲಕ ಜಗದೀಶ್ ಕಾರಂತ್ ಅವರ ಹೇಳಿಕೆಯನ್ನು ದೊಡ್ಡದಾಗಿಯೇ ಪ್ರಕಟಿಸಿದ್ದಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ನಡೆದ ಸಭೆಯ ಕುರಿತು ಸುದ್ದಿ.

ಬೆಂಗಳೂರಿನಿಂದ ಪ್ರಕಟವಾಗುವ ಇತರ ಪತ್ರಿಕೆಗಳಲ್ಲಿ ಈ ಸುದ್ದಿ ಇರಲಿಲ್ಲ. ಸಂಕೇಶ್ವರರು ಜಾತ್ಯಾತೀತ ಜನತಾದಳವನ್ನು ಸೇರಿದ್ದರೂ, ಕೋಮುವಾದಿ ಪ್ರಚಾರಕರು ವಿಜಯ ಕರ್ನಾಟಕದಲ್ಲಿ ಇನ್ನೂ ಭದ್ರವಾಗಿ ನೆಲೆಯೂರಿದ್ದಾರೆ. ಕೆಲವರು ಅನುಮಾನ ಪಡುವ ಪ್ರಕಾರ ಸಂಕೇಶ್ವರರು ಆರ್.ಎಸ್.ಎಸ್ ಪ್ರಚಾರಕರಾಗಿಯೇ ಜನತಾದಳ (ಎಸ್) ಸೇರಿದ್ದಾರೆಯೇ?

ರಾಮಚಂದ್ರಪುರ ಮಠದ ಸ್ವಾಮಿಯೊಬ್ಬರು ನಡೆಸಿದ ಗೋಯಾತ್ರೆ ಸುದ್ದಿಯನ್ನು ವಿಜಯ ಕರ್ನಾಟಕ ಪ್ರಕಟಿಸಿದ ರೀತಿಯೇ ಬೇರೆ. ಬೇರೆಲ್ಲಾ ದಿನ ಪತ್ರಿಕೆಗಳು ಗೋಯಾತ್ರೆ ಉದ್ಘಾಟನೆಯ ಸುದ್ದಿಯನ್ನು ಒಳಪುಟಗಳಲ್ಲಿ ಪ್ರಕಟಿಸಿದ್ದರೆ ನವೆಂಬರ್ 7ರ ವಿಜಯ ಕರ್ನಾಟಕ ಮುಖಪುಟದಲ್ಲಿ ಆಕರ್ಷಕ ಛಾಯಾಚಿತ್ರ ದೊಂದಿಗೆ ಪ್ರಕಟಿಸಿತ್ತು. ಗೋತಳಿಯನ್ನು ಕಾಪಾಡುವ ಹೆಸರಿನಲ್ಲಿ ಆರಂಭವಾದ ಗೋಯಾತ್ರೆ 65 ದಿನಗಳ ಕಾಲ ದಾರಿಯುದ್ದಕ್ಕೂ ಗೋಹತ್ಯೆ ನಿಷೇಧ, ಗೋಸಾಗಾಟ ನಿಷೇಧ ಮೊದಲಾದ ಘೋಷಣೆಗಳ ಮೂಲಕ ಅನ್ಯಧರ್ಮೀಯರ ಭಾವನೆಗಳನ್ನು ಕೆರಳಿಸುತ್ತ, ಹಿಂದೂ ಕೋಮು ಭಾವನೆಯನ್ನು ಪ್ರಚೋದಿಸುತ್ತಿರುವುದನ್ನು ಯಾರಾದರೂ ಗಮನಿಸಬಹುದು. ಸಂವಿಧಾನರೀತ್ಯ ಪ್ರಜಾತಂತ್ರ ವ್ಯವಸ್ಥೆಯನ್ನು ಬೆಳೆಸಬೇಕಾದ ಪತ್ರಿಕೆಗಳು, ಅದೇ ಸಂವಿಧಾನದಲ್ಲಿರುವ ಧರ್ಮನಿರಪೇಕ್ಷತೆ ಅಥವಾ ಜಾತ್ಯಾತೀತತೆ ಬೆಳೆಸಲೂ ಗಮನ ನೀಡಬೇಕು. ಧರ್ಮ ನಿರಪೇಕ್ಷತೆ ಬೆಳೆಸಿದರೆ, ಪ್ರಜಾತಂತ್ರ ವ್ಯವಸ್ಥೆಯೂ ಬಲಗೊಳ್ಳುತ್ತದೆ. ಮಾತ್ರವಲ್ಲ, ದೇಶದ ಐಕ್ಯತೆಯೂ ಗಟ್ಟಿಗೊಳ್ಳುತ್ತದೆ.

ಜಾತ್ಯಾತೀತ ಜನತಾದಳದಲ್ಲಿರುವ ಸಂಕೇಶ್ವರರು ಈ ಅಂಶವನ್ನು ಗಮನಿಸಬೇಕು. ಅದರತ್ತ ಅವರು ನಡೆಸುತ್ತಿರುವ ಪತ್ರಿಕೆಯೂ ಗಮನಹರಿಸುವಂತೆ ನೋಡಬೇಕು. ಬರೀ ಲಾಭದ ಅಂಶವನ್ನು ಮಾತ್ರ ಗಮನದಲ್ಲಿಟ್ಟುಕೊಂಡರೆ ಸಾಲದು.

ವಸ್ತುನಿಷ್ಠ ವರದಿಯ ಅಭಾವ : ಮಾಧ್ಯಮಗಳಲ್ಲಿ ವಸ್ತುನಿಷ್ಠ ವರದಿಯ ಅಭಾವ ಎದ್ದುಕಾಣುತ್ತಿದೆ. ಭಾವೋದ್ರೇಕಕ್ಕೆ ಒಳಗಾಗುವ ವರದಿಗಳಿಗೆ ಪ್ರಾಧಾನ್ಯತೆ ಹೆಚ್ಚುತ್ತಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಇತ್ತೀಚಿಗೆ ರಾಜ್ಯ ಸಮಿತಿಯಲ್ಲಿ ಅಂಗೀಕರಿಸಿದ ಮೂರು ಪ್ರಮುಖ ವಿಷಯಗಳನ್ನು ವಿವರಿಸಲು ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ಏರ್ಪಡಿಸಿತ್ತು. ಬೆಳಗಾವಿ ಮಹಾನಗರ ಪಾಲಿಕೆ ರದ್ದು ಮಾಡಿರುವುದು, ಹೊಸ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಟ್ಟುವಲ್ಲಿ ಆಗುತ್ತಿರುವ ಅವ್ಯವಹಾರ ತನಿಖೆ ಹಾಗೂ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಚುನಾವಣೆ - ಈ ಅಂಶಗಳನ್ನು ಪತ್ರಿಕಾಗೋಷ್ಠಿ ಒಳಗೊಂಡಿತ್ತು.

ಇದರಲ್ಲಿ ಬೆಳಗಾವಿ ಮಹಾನಗರ ಪಾಲಿಕೆ ಕುರಿತು ಪಕ್ಷವು ತೆಗೆದುಕೊಂಡಿರುವ ನಿಲುವು ಇನ್ನಾವುದೇ ರಾಜಕೀಯ ಪಕ್ಷವು ತೆಗೆದುಕೊಂಡಿಲ್ಲ (ವಿವರ ಬೇರೆಡೆ ಇದೆ). ಚುನಾಯಿತ ಸಂಸ್ಥೆಯನ್ನು ರದ್ದು ಮಾಡುವುದು ಅಪ್ರಜಾಸತ್ತಾತ್ಮಕ ಮಾತ್ರವಲ್ಲದೆ, ಭಾಷಾಂಧತೆಯನ್ನು ಪ್ರಚೋದಿಸುತ್ತದೆ ಎಂದು ಪಕ್ಷವು ಎಚ್ಚರಿಸಿತ್ತು. ಅಲ್ಲದೆ, ಭಾಷಾಂಧ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತ್ತು. ಜತೆಯಲ್ಲಿ ಪಾಲಿಕೆಯನ್ನು ರದ್ದುಮಾಡಲು ನೀಡಿರುವ ಕಾರಣಗಳು, ವಿಶ್ವಬ್ಯಾಂಕ್ ನಿರ್ದೇಶಿತ ಶರತ್ತುಗಳನ್ನು ಎಲ್ಲಾ ಚುನಾಯಿತ ಸ್ಥಳೀಯ ಸಂಸ್ಥೆಗಳ ಮೇಲೆ ಹೇರುವ ಕುತಂತ್ರ ಎಂದು ವಾದಿಸಿತ್ತು.

ಇನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ

ಪುಟ 12 ಕ್ಕೆ

ಐರ್ಲೆಂಡ್ ವರ್ಕರ್ಸ್ ಪಾರ್ಟಿ ಮೇಲೆ ಅಮೆರಿಕನ್ ಧಾಳಿ

ಜಗತ್ತಿನ ಕಮ್ಯೂನಿಸ್ಟ್ ಪಕ್ಷಗಳಿಂದ ತೀವ್ರ ಖಂಡನೆ

ಅಕ್ಟೋಬರ್ 7ರಂದು ಬ್ರಿಟಿಷ್ ಸರ್ಕಾರ ಐರ್ಲೆಂಡ್ ವರ್ಕರ್ಸ್ ಪಾರ್ಟಿಯ ಅಧ್ಯಕ್ಷ ಸೀನ್ ಗಾರ್ಲೆಂಡ್‌ರನ್ನು ಬಂಧಿಸಿ, ಅಮೆರಿಕಕ್ಕೆ ದೇಶಾಂತರ ಮಾಡುವ ಪ್ರಯತ್ನ ಮಾಡಿತು. ಇದಕ್ಕೆ ನೆಪ ಅಮೆರಿಕದ ಸರ್ಕಾರ ವಾಶಿಂಗ್‌ಟನ್ ಕೋರ್ಟ್ ಒಂದರಲ್ಲಿ ಸೀನ್ ಅವರ ಮೇಲೆ ಮಾಡಿರುವ ಆಪಾದನೆಗೆ ಆಧಾರ. ಬಿಲ್ ಗೆಟ್ಸ್ ಎಂಬಾತ ಬರೆದ 'ಚೀನಾ ಬೆದರಿಕೆ' ಎಂಬ ಪುಸ್ತಕ! ಈ ಪುಸ್ತಕದಲ್ಲಿ ಸೀನ್ ಚೀನಾ ಮತ್ತು ಉತ್ತರ ಕೊರಿಯಾದ ಕಮ್ಯುನಿಸ್ಟ್ ಪಕ್ಷಗಳ ಜತೆ ಘನಿಷ್ಟ ಸಂಬಂಧ ಹೊಂದಿದ್ದಾರೆ. ಅಮೆರಿಕದಲ್ಲಿ ನೂರು ಡಾಲರು ನೋಟುನೋಟು ಚಲಾವಣೆಗೆ ತರುವ ಭಾರಿ ಪಿತೂರಿಯಲ್ಲಿ ಸೀನ್ ಚೀನಾ ಮತ್ತು ಉತ್ತರ ಕೊರಿಯಾಗಳ ಜತೆ ಭಾಗವಹಿಸಿದ್ದಾರೆ ಎಂದು ಪುಸ್ತಕದಲ್ಲಿ ಬರುವ ಬರುಡೆಯೇ ಈ ಬಂಧನ ಮತ್ತು ದೇಶಾಂತರಕ್ಕೆ ಆಧಾರ.

ಕಳ್ಳನಿಗೊಂದು ಪಿಳ್ಳೆ ನೆವ

ಈ ಪುಸ್ತಕದ ಲೇಖಕ ಬಿಲ್ ಗೆರ್ಟ್ಸ್. ಈತ CIA/FBI ಜತೆ ಘನಿಷ್ಟ ಸಂಬಂಧ ಹೊಂದಿರುವ ಮತ್ತು ಅವುಗಳ ಭೂಗತ ಏಜೆಂಟ್ ಎಂದು ಎಲ್ಲರಿಗೂ ಗೊತ್ತಿರುವ ವಿಷಯ. ಈತ ತೋರಿಕೆಗೆ ಕೆಲಸ ಮಾಡುವುದು 'ವಾಶಿಂಗ್‌ಟನ್ ಟೈಮ್ಸ್' ಎಂಬ ಪತ್ರಿಕೆಯಲ್ಲಿ. ಈ ಪತ್ರಿಕೆಯ ಮಾಲಕ ದಕ್ಷಿಣ ಕೊರಿಯಾದ ಮೂಲಭೂತವಾದಿ ಕ್ರಿಶ್ಚಿಯನ್ ಸಂಘಟನೆ. ಈತ ಮೂಲಭೂತವಾದಿ, ಹಿಂಸಾತ್ಮಕ ಬಲಪಂಥೀಯ ಮತ್ತು ಕಮ್ಯೂನಿಸ್ಟ್ - ವಿರೋಧಿ ಪ್ರಚಾರದಲ್ಲಿ ತೊಡಗಿರುವ ವ್ಯಕ್ತಿ ಎಂದು ಕುಖ್ಯಾತ.



ಜಾರ್ಜ್ ಬುಷ್

ಈ ಆಪಾದನೆಗೆ ಆಧಾರವಾದರೂ ಏನು? 1997 ರಲ್ಲಿ ಸೀನ್ ಮತ್ತು ಚೀನಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯ ಮಾತನಾಡಿದ್ದನ್ನು, ಅಮೆರಿಕನ್ ಬೇಹುಗಾರಿಕೆ ಉಪಗ್ರಹ ಕೇಳಿಸಿಕೊಂಡಿತಂತೆ! ಇಂತಹ ಸೂಕ್ಷ್ಮ ವಿಚಾರ CIA ಬಿಲ್‌ಗೆ ಯಾಕೆ ಹೇಳಿತು? ಇದನ್ನು ಸಾಕ್ಷ್ಯವೆಂದು ಹೇಳಲು ಸಾಧ್ಯವೆ? ಎಂಬ ಪ್ರಶ್ನೆಗೆ ಉತ್ತರವಿಲ್ಲ. ಇದಲ್ಲದೆ ನೋಟುನೋಟು ಚಲಾವಣೆ ಪಿತೂರಿ ಮತ್ತು ಅದರಲ್ಲಿ ಸೀನ್‌ರ ಪಾತ್ರದ ಬಗ್ಗೆ ಏನಾದರೂ ಬಲವಾದ ಸಾಕ್ಷ್ಯಾಧಾರಗಳಿವೆಯೇ? ಇಲ್ಲ. ಪುಸ್ತಕದಲ್ಲಿ ಬರೆದ ಈ ಬುರುಡೆಗಳನ್ನು ಬಿಲ್‌ಗೆರ್ಟ್ಸ್ ಬಿಬಿಸಿ ಕಾರ್ಯಕ್ರಮವೊಂದರಲ್ಲಿ ಕಾರಿಕೊಂಡ. ಇದೇ ಅಮೆರಿಕನ್ ಸರ್ಕಾರಕ್ಕೆ ಸಾಕಾಯ್ತು. ಕಳ್ಳನಿಗೊಂದ ಪಿಳ್ಳೆ ನೆವ ಎಂಬಂತೆ. ಅಮೆರಿಕನ್ ಸರ್ಕಾರ ಕೇಸು ದಾಖಲಿಸಿತು ಮಾತ್ರವಲ್ಲ, ಬ್ರಿಟಿಷ್ ಸರ್ಕಾರಕ್ಕೆ ಈ ಆಪಾದನೆ ಆಧಾರದ ಮೇಲೆ ಸೀನ್ ಗಾರ್ಲೆಂಡರನ್ನು ಬಂಧಿಸಿ, ಅಮೆರಿಕಕ್ಕೆ ದೇಶಾಂತರ ಮಾಡಲು ಕೇಳಿಕೊಂಡಿತು. ಅದನ್ನು 'ಅಮೆರಿಕದ ನಾಯಿ' ಎಂದು ಹೆಸರಾದ ಬ್ಲೇರ್ ಸರ್ಕಾರ ವಿಧೇಯವಾಗಿ ಜಾರಿ ಮಾಡಿತು ಕೂಡಾ. ಸೀನ್ ಗಾರ್ಲೆಂಡ್ ಅವರ ಪಕ್ಷದ ವಾರ್ಷಿಕ ಸಮ್ಮೇಳನಕ್ಕೆ (ಬ್ರಿಟನ್ ಭಾಗವಾಗಿರುವ) ಉತ್ತರ ಐರ್ಲೆಂಡ್‌ನ ಬೆಲ್‌ಫಾಸ್ಟ್‌ಗೆ ಬಂದಾಗ ಅವರನ್ನು ಬಂಧಿಸಲಾಯಿತು. ಆದರೆ ಯಾವುದೇ ನಿರ್ದಿಷ್ಟ ಆಪಾದನೆ ಮತ್ತು ಗಟ್ಟಿ ಸಾಕ್ಷ್ಯಾಧಾರ ಇಲ್ಲದ ಕೇಸ್ ಇದಾದ್ದರಿಂದ ಬೈಲ್ ಸಿಗುವುದು ಕಷ್ಟವಾಗಲಿಲ್ಲ. ಅಲ್ಲದೆ ಬೆಲ್‌ಫಾಸ್ಟ್ ಕೋರ್ಟ್, ವಾಶಿಂಗ್‌ಟನ್ ಕೋರ್ಟಿನಿಂದ ಆಪಾದನೆ ಬಗ್ಗೆ ವಿವರಗಳಿಗೆ ಕಾಯುತ್ತಿದೆ. ಆದರೆ ಕೇಸ್ ಇನ್ನೂ ಮುಂದುವರೆದಿದೆ ಎಂಬುದು ಗಮನಿಸಬೇಕಾದ್ದು.



ಗಾರ್ಲೆಂಡ್ - ಐರಿಷ್ ಸ್ವಾತಂತ್ರ್ಯ ಹೋರಾಟಗಾರ

ಐರ್ಲೆಂಡ್ ವರ್ಕರ್ಸ್ ಪಾರ್ಟಿಯ ಅಧ್ಯಕ್ಷ ಸೀನ್ ಗಾರ್ಲೆಂಡ್ ದೇಶದ ಗೌರವಾನ್ವಿತ ಹಿರಿಯ ನಾಯಕ. ಬೆಲ್‌ಫಾಸ್ಟ್‌ನಲ್ಲಿ ಹುಟ್ಟಿ ಬೆಳೆದು ಹದಿಹರೆಯದಲ್ಲೇ, ಸಮಾಜವಾದ, ಕಮ್ಯುನಿಸಂಗೆ ಆಕರ್ಷಿತರಾದರು. ಆಗ ಬ್ರಿಟನ್ ವಿರುದ್ಧ ಉತ್ತರ ಐರ್ಲೆಂಡಿನ ಜನ ನಡೆಸುತ್ತಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಹದಿಹರೆಯದಲ್ಲೇ ತೊಡಗಿಸಿಕೊಂಡ ಗಾರ್ಲೆಂಡ್ ಐರಿಷ್ ರಿಪಬ್ಲಿಕನ್ ಆರ್ಮಿ (IRA) ಸೇರಿದರು. IRA ಒಳಗೆ ನಡೆದ ಸೈದ್ಧಾಂತಿಕ ಚರ್ಚೆಯಲ್ಲಿ ಪ್ರಮುಖ ಪಾತ್ರ ವಹಿಸಿ, ಅದನ್ನು ಸಮಾಜವಾದಿ ದಿಕ್ಕಿನಲ್ಲಿ ನಡೆಸುವಲ್ಲಿ ಸಫಲರಾದರು. ಐರಿಷ್ ಸ್ವಾತಂತ್ರ್ಯ ಹೋರಾಟ ಮುಂದುವರೆದಂತೆ, ಭಯೋತ್ಪಾದಕ ಹಾದಿಬಿಟ್ಟು ಜನತೆಯನ್ನು ರಾಜಕೀಯವಾಗಿ ಸಂಘಟಿಸುವುದರತ್ತ ಒತ್ತು ಕೊಡುವ ರಾಜಕೀಯ ಪಕ್ಷ ರಚಿಸಬೇಕು ಎಂಬ ತೀವ್ರ ಚರ್ಚೆ ಎಬ್ಬಿಸಿದರು. ಇದರ ಭಾಗವಾಗಿ ಐರಿಷ್ ವರ್ಕರ್ಸ್ ಪಾರ್ಟಿ ಸಂಘಟಿಸಿ ಬೆಳೆಸಿದರು. ಐರಿಷ್ ವರ್ಕರ್ಸ್ ಪಾರ್ಟಿ ಸಮಾಜವಾದವೇ ಐರ್ಲೆಂಡ್, ಯುರೋಪು ಮತ್ತು ಜಗತ್ತಿನ ಜನತೆ ಸಮಸ್ಯೆಗಳಿಗೆ ಪರಿಹಾರ ಎಂದು ನಂಬಿದೆ.

ಸ್ವಾಭಾವಿಕವಾಗಿಯೇ ಅಮೆರಿಕನ್ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಯುದ್ಧಕೋರ ಮತ್ತು ಜನವಿರೋಧಿ ನೀತಿಗಳ ಕಡು ವಿರೋಧಿಯಾಗಿದೆ. ಅಮೆರಿಕ-ಬ್ರಿಟಿಷ್ ಇರಾಕ್ ಯುದ್ಧದ ವಿರುದ್ಧ ಶಾಂತಿ ಚಳುವಳಿಯಲ್ಲಿ ಗಾರ್ಲೆಂಡ್ ಮತ್ತು ವರ್ಕರ್ಸ್ ಪಾರ್ಟಿ ಪ್ರಮುಖ ಪಾತ್ರವಹಿಸಿದೆ. ಇದಕ್ಕಾಗೇ ಅಮೆರಿಕನ್ ಬ್ರಿಟಿಷ್ ಸರ್ಕಾರಗಳು ಕೆಂಡ ಕಾರುತ್ತಿರುವುದು.

ಬರಿಯ ಗಾರ್ಲೆಂಡ್ ಮೇಲೆ ದಾಳಿ ಅಲ್ಲ

ಗಾರ್ಲೆಂಡ್ ಬಂಧನ ಮತ್ತು ಅವರ ಮೇಲೆ ವಾಶಿಂಗಟನ್ ಕೋರ್ಟು ಕೇಸ್ ಬರಿಯ ಗಾರ್ಲೆಂಡ್ ಮೇಲೆ ಧಾಳಿ ಅಲ್ಲ. ಬರಿಯ ಐರಿಷ್ ವರ್ಕರ್ಸ್ ಪಾರ್ಟಿ ಮೇಲೆ ಮಾತ್ರ ದಾಳಿ ಅಲ್ಲ. ಜಗತ್ತಿನ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳ ಮೇಲೆ ದಾಳಿ. ಜಗತ್ತಿನ ಎಲ್ಲಾ ದೇಶಗಳ ಸಾರ್ವಭೌಮತೆ, ಜನತೆಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ. ಎಲ್ಲಾ ಅಂತರ್ರಾಷ್ಟ್ರೀಯ ಕಾನೂನು, ಮಾನವ ಹಕ್ಕುಗಳ ಮೇಲೆ ದಾಳಿ. ಜಗತ್ತಿನ ಸೂಪರ್ ಪೊಲೀಸನ ಪಾತ್ರಕ್ಕೆ ಅಮೆರಿಕ ತಾನೇ ನೇಮಿಸಿಕೊಂಡಿರುವುದರ ಇನ್ನೊಂದು ಉದಾಹರಣೆ.

ಐರಿಷ್ ವರ್ಕರ್ಸ್ ಪಾರ್ಟಿ ಗಾರ್ಲೆಂಡ್ ಮೇಲೆ ಮಾಡಿರುವ ಆಪಾದನೆಗಳನ್ನು ಬಲವಾಗಿ ನಿರಾಕರಿಸಿತು. ಅಮೆರಿಕ-ಬ್ರಿಟಿಷ್ ಸರ್ಕಾರಗಳು ದೇಶದ ಮಾತ್ರವಲ್ಲ, ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮುರಿದಿದ್ದಾರೆ ಎಂದು ಆಪಾದಿಸಿದೆ. ಜಗತ್ತಿನ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳು ಬ್ರಿಟಿಷ್ - ಅಮೆರಿಕನ್ ಸರ್ಕಾರಗಳ ಈ ಕ್ರಮ ಖಂಡಿಸಿದ್ದು ಇದಕ್ಕಾಗಿ ಅಂತರ್ರಾಷ್ಟ್ರೀಯ ಚಳುವಳಿ ಆರಂಭಿಸಿವೆ. ಸಿಪಿಐ(ಎಂ) ಇದರಲ್ಲಿ ಭಾಗವಹಿಸಿದ್ದು, ಇದನ್ನು ವ್ಯಾಪಕವಾಗಿ ಹಮ್ಮಿಕೊಳ್ಳುವ ಅಗತ್ಯ ಇದೆ.

ಕಮ್ಯುನಿಸಂ ಮೇಲೆ ದಾಳಿ

ಗಾರ್ಲೆಂಡ್ ಮೇಲೆ ದಾಳಿ ವಿಶಿಷ್ಟ ಕಾರ್ಯಾಚರಣೆ ಅಲ್ಲ. ಇತ್ತೀಚೆಗೆ ಇಂತಹುದೇ ದಾಳಿಯಲ್ಲಿ ಬ್ರಿಟಿಷ್ (ಮಾಜಿ) ಲೇಬರ್ ನಾಯಕರೊಬ್ಬರ ಮೇಲೆ ಮಾಡಲಾಯಿತು. ಅವರು ಲೇಬರ್ ಪಾರ್ಟಿಯ ಹೊರಗೆ ಬಂದು, 'ರೆಸ್ಪೆಕ್ಟ್' (Respect) ಎಂಬ ಪಕ್ಷ ಸ್ಥಾಪಿಸಿ ಎಂ.ಪಿ.ಯಾಗಿ ಗೆದ್ದು ಬಂದಿದ್ದರು. ಅವರೂ ಬ್ಲೇರ್ ಸರ್ಕಾರದ ಇರಾಕ್-ನೀತಿಗಳ ಕಟು ವಿರೋಧಿಯಾಗಿದ್ದರು. ಅವರು ಸದ್ದಾಂ ಹುಸೇನರಿಂದ ಅನುದಾನ ಪಡೆದಿದ್ದಾರೆ ಎಂಬ ಪತ್ರಿಕೆಯೊಂದರ ಆಪಾದನೆ ವಿರುದ್ಧ ಕೋರ್ಟು ಕಟ್ಟೆ ಹತ್ತಿದ್ದರು. ಪತ್ರಿಕೆ ಬಳಿ ಇದ್ದ ಪುರಾವೆ ಖೋಟಾ ಎಂದು ಸಿದ್ಧವಾಗಿ, ಮಾನನಷ್ಟ ಮೊಕದ್ದಮೆ ಗೆದ್ದರು. ಈಗ ಅವರ ಮೇಲಿನ ಆಪಾದನೆ ಪುನಃ ವಿಶ್ವಸಂಸ್ಥೆಯ ವೋಲ್ಕರ್ ವರದಿಯಲ್ಲಿ ಬಂದಿದೆ!

ಇತ್ತೀಚೆಗೆ ಯುರೋಪಿಯನ್ ಒಕ್ಕೂಟದ ಪಾರ್ಲಿಮೆಂಟರಿ ಅಸೆಂಬ್ಲಿಯ ಮಂಡಳಿಯ ಮುಂದಿನ ಸಭೆಗೆ 'ಕಮ್ಯುನಿಸಂನ್ನು ಅಂತರ್ರಾಷ್ಟ್ರೀಯ ಖಂಡನೆಗೆ ಗುರಿಪಡಿಸಬೇಕಾದ ಕುರಿತು' ವರದಿ ಮಂಡಿಸುವುದು ಅಜೆಂಡಾದಲ್ಲಿತ್ತು. ಅದರಲ್ಲಿ ಫ್ಯಾಸಿಸಂನಂತೆ ಕಮ್ಯುನಿಸಂ ಸಹ ಮಾನವ-ವಿರೋಧಿ ಅಪಾಯಕಾರಿ ಸಿದ್ಧಾಂತ. ಅದನ್ನು ಅಂತರ್ರಾಷ್ಟ್ರೀಯವಾಗಿ ಖಂಡಿಸಿ ನಿರ್ಮೂಲನ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಹೇಳಲಾಗಿತ್ತು. ರಶ್ಯನ್ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಈ ವರದಿ ಬಗ್ಗೆ ನಡೆದ ಭಾರಿ ಪ್ರತಿಭಟನಾ ಆಂದೋಲನ ಫಲ ಕೊಟ್ಟಿತು. ಇದನ್ನು ಅಜೆಂಡಾದಿಂದ ಕಿತ್ತು ಹಾಕಲಾಯಿತು. ಅಂತಹುದೇ ತೀವ್ರ ಚಳುವಳಿ ಅಗತ್ಯ. ಅಂತಹುದೇ ಜಯ ಸಾಧಿಸುವ ಅಗತ್ಯ ಇದೆ.

ಫಲುಜಾ : ಕಾಣದ ನರಮೇಧ

ಇತ್ತೀಚೆಗೆ ಇಟಾಲಿಯನ್ ಟೆಲಿ ಜಾಲ 'ರಾಯ್' (RAI) ಇರಾಕ್ ಮೇಲೆ ಡಾಕ್ಯುಮೆಂಟರಿ ಚಿತ್ರ ಪ್ರಸಾರ ಮಾಡಿತು. ಅದರ ಹೆಸರು 'ಫಲುಜಾ: ಕಾಣದ ನರಮೇಧ'. ಫಲುಜಾದಲ್ಲಿ ಬ್ರಿಟಿಷ್ ಸೈನ್ಯ ಆ ಪಟ್ಟಣವನ್ನು ವಶಕ್ಕೆ ತೆಗೆದುಕೊಳ್ಳಲು ನಡೆಸಿದ ಯುದ್ಧ, ಬಳಸಿದ ತಂತ್ರಗಳು, ಆದ ಸಾವು-ನೋವುಗಳು - ನರಮೇಧಕ್ಕೆ ಕಡಿಮೆ ಇಲ್ಲ. ಈ ಡಾಕ್ಯುಮೆಂಟರಿ ಒಂದು ಬೆಚ್ಚಿಬೀಳಿಸುವ ಸಂಗತಿಯನ್ನು ಬೆಳಕಿಗೆ ತಂದಿದೆ. ಫಲುಜಾದ ಮೇಲೆ ಯುದ್ಧದಲ್ಲಿ ಬಿಳಿ ರಂಜಕ ಬಳಸಲಾಯಿತು ಎಂಬುದು ಆ ಸಂಗತಿ. ಡಾಕ್ಯುಮೆಂಟರಿಯಲ್ಲಿ ತೋರಿಸಲಾದ ಫಲುಜಾದಲ್ಲಿ ಸತ್ತ, ಗಾಯಗೊಂಡವರ ಶರೀರಗಳ ಪರೀಕ್ಷೆ, ಬಿಳಿ ರಂಜಕ ಬಳಸಲಾಗಿದೆ ಎಂಬುದನ್ನು ದೃಢಪಡಿಸಿದೆ. ಬಿಳಿ ರಂಜಕ 'ರಾಸಾಯನಿಕ ಶಸ್ತ್ರಗಳ ಬಗ್ಗೆ ಒಪ್ಪಂದ' ದ ಪ್ರಕಾರ ನಿಷೇಧಿತ ಅಸ್ತ್ರವಾಗಿದ್ದು, ಅದರ ಬಳಕೆ ತೀವ್ರ ವಿವಾದ ಎಬ್ಬಿಸಿದೆ. ಅಮೆರಿಕನ್ - ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ವಿಧೇಯವಾದ ದೈತ್ಯ ಮಾಧ್ಯಮಗಳು ಈ ಬೆಚ್ಚಿಬೀಳಿಸುವ ವರದಿಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ಆದರೆ ಇತರ ಸಣ್ಣ ಪತ್ರಿಕೆ, ಇಂಟರ್‌ನೆಟ್ ಮಾಧ್ಯಮದಲ್ಲಿ ಈ ಸಂಗತಿ ಬಗ್ಗೆ ಹೆಚ್ಚು ವಿವರಗಳು ಬರುತ್ತಿವೆ. 'ಬಿಳಿ ರಂಜಕ ಕೊಲ್ಲುವುದಿಲ್ಲ, ಶರೀರದ ಮೇಲೆ ಗಾಯ ಮಾಡುತ್ತದೆ', 'ಬಿಳಿರಂಜಕ ಮಿಲಿಟರಿ ಬಳಕೆ ಮಾತ್ರ ನಿಷೇಧ, ನಾಗರಿಕರ ಮೇಲೆ ಬಳಕೆ ಅಲ್ಲ' ಎಂಬ ವಿಚಿತ್ರ ವಾದಗಳು ಅರೆ-ಸರ್ಕಾರಿ, ಬಲಪಂಥೀಯರಿಂದ ಕೇಳಿಬರುತ್ತಿವೆ. ಈ ಇಡೀ ಕರಾಳ ಅಧ್ಯಾಯದ ಕಠೋರ ವ್ಯಂಗ್ಯವೆಂದರೆ, ಅಮೆರಿಕನ್ ಸೈನ್ಯ ಇರಾಕನ್ನು ಆಕ್ರಮಿಸಿದ್ದು ತನ್ನ ನಾಗರಿಕರ ಮೇಲೆ ರಾಸಾಯನಿಕ ಅಸ್ತ್ರಗಳನ್ನು ಬಳಸುವ ಸದ್ದಾಂ ಹುಸೇನ್‌ರಂತಹ ಕ್ರೂರ ಸರ್ವಾಧಿಕಾರಿಯಿಂದ 'ವಿಮೋಚನೆ' ಎಂಬ ನೆಪದ ಮೇಲೆ! 'ಬುಶ್ ಯುಗ' ಅರ್ಥಭ್ರಷ್ಟವಾದ ಮೇಲೆ ಹಲವು ಶಬ್ದಗಳು ವಿಚಿತ್ರ ಅರ್ಥ ಪಡೆದುಕೊಂಡಂತೆ, ವ್ಯಂಗ್ಯ ಸಹ ತನ್ನ ಅರ್ಥ ಕೊಂಡಿದೆಯಲ್ಲವೇ?

ಎಂಟು ಅಮೆರಿಕರನ್ನರಲ್ಲಿ ಒಬ್ಬ ಬಡವ

ಅಮೆರಿಕದ ಬಡತನದ ರೇಖೆ ಕೆಳಗೆ ಇರುವ ಜನರ ಸಂಖ್ಯೆ ತೀವ್ರವಾಗಿ ಏರುತಿದೆ. ಕಳೆದ ಎರಡು ವರ್ಷಗಳಲ್ಲಿ ಇದು ಹತ್ತು ಲಕ್ಷದಷ್ಟು ಏರಿ ಈಗ 3.7 ಕೋಟಿ ಆಗಿದೆ. ಸರಾಸರಿ ಮನೆಗಳ ಆದಾಯ ಕಳೆದ ಐದು ವರ್ಷಗಳಿಂದ - ಏರಿಲ್ಲ. ಯಾವುದೇ ರೀತಿಯ ಆರೋಗ್ಯ ವಿಮೆ ಇಲ್ಲದಿರುವ (ಅಮೆರಿಕದಲ್ಲಿ ಇದು ತೀವ್ರ ಬಡತನದ ಸೂಚಕ) ಜನರ ಸಂಖ್ಯೆ ನಾಲ್ಕೂವರೆ ಕೋಟಿ ಮುಟ್ಟಿದೆ. 2004 ರ ಅಂಕಿಸಂಖ್ಯೆ ಪ್ರಕಾರ ಈಗ ಅಮೆರಿಕಾದಲ್ಲಿ ಬಡವರ ಸಂಖ್ಯೆ ಶೇಕಡಾ 12.7 ಕ್ಕೆ ಏರಿದೆ. ಇದರಲ್ಲಿ ಮೂರನೇ ಒಂದು ಭಾಗ ಮಕ್ಕಳು. ನ್ಯೂಯಾರ್ಕ್ ಟೈಮ್ಸ್ ವರದಿ ಪ್ರಕಾರ ವಾಶಿಂಗ್‌ಟನ್‌ನಲ್ಲಿ ಶಿಶು ಮರಣ ಸಂಖ್ಯೆ ಪ್ರತಿ ಸಾವಿರ ಜನಕ್ಕೆ 11.5 ಆಗಿದೆ. ಇದು ಬೀಜಿಂಗ್‌ನ ಸಂಖ್ಯೆಯ (ಪ್ರತಿ ಸಾವಿರಕ್ಕೆ 4.6) ಇಮ್ಮಡಿಗಿಂತಲೂ ಹೆಚ್ಚು. ಈಗ ಅಮೆರಿಕ ಶಿಶುಮರಣ ಸಂಖ್ಯೆಯಲ್ಲಿ 43 ನೇ ಸ್ಥಾನದಲ್ಲಿದೆ. ಪೋಲಿಯೊ, ಸಿಡುಬು ವಿರುದ್ಧ ಲಸಿಕೆ ಹಾಕುವುದರಲ್ಲಿ 89ನೇ ಸ್ಥಾನದಲ್ಲಿದೆ. ಜಗತ್ತಿನ ಅತಿ ಪ್ರಬಲ ಮಿಲಿಟರಿ ಶಕ್ತಿ ಮತ್ತು ಶ್ರೀಮಂತ ದೇಶಕ್ಕೆ ಜನತೆಯ ಬಡತನ (ಕನಿಷ್ಟ ಮಕ್ಕಳ ಬಗ್ಗೆ ಕಾಳಜಿ ತೆಗೆದುಕೊಳ್ಳಲು) ಹಣ ಇಲ್ಲ, ಅಥವಾ ಮನಸ್ಸಿಲ್ಲ?

ಮಧ್ಯಮ ವರ್ಗದ ಜಂಜಾಟಗಳೇ 'ಅಮೃತಧಾರೆ'

ಸಿನಿಮಾ

ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿರುವ 'ಮಚ್ಚು' 'ಲಾಂಗು'ಗಳ ಝಳಪಿಲ್ಲದ ಹಾಗೂ ರಕ್ತದೋಕುಳಿ-ರಕ್ತಪಾತವಿಲ್ಲದ ಬರಿಯ 'ಅಮೃತಧಾರೆ' ಎಂಬ ಪ್ರಚಾರ ಪಡೆದಿರುವ ಈ ಚಿತ್ರದ ಅಂತಃಸತ್ವ ಏನು?



"ಭೂಮಿಯೇ ಹಾಸಿಗೆ ಗಗನವೇ ಹೊದಿಕೆ, ಕಣ್‌ತುಂಬ ನಿದ್ರೆ ಬಡವನಿಗೆ, ಮೆತ್ತನೆ ಹಾಸಿಗೆ, ಸುಖದ ಸುಪತ್ತಿಗೆ, ಬಾರದು ನಿದ್ರೆ ಧನಿಕನಿಗೆ" ಎಂಬ ಹಾಡಿನೊಂದಿಗೆ ಬೆಂಗಳೂರು ಮಹಾನಗರದ ಧನಿಕರು ಮತ್ತು ಬಡವರ ದಿನನಿತ್ಯದ ಕೆಲಸಗಳ ನೈಜ ಚಿತ್ರಣಗಳನ್ನು ತೋರಿಸುವ ಮೂಲಕ ಸುಪ್ರಭಾತದ ರಾಗದ ಹಾಡಿನೊಂದಿಗೆ ಅಮೃತಧಾರೆ ಸಿನಿಮಾ ಪ್ರಾರಂಭವಾಗುತ್ತದೆ.

'ಶ್ರೀಸಾಮಾನ್ಯನ ಸುಪ್ರಭಾತ' ಎಂದೇ ಕರೆಯಲ್ಪಡುವ ಈ ಹಾಡಿನಲ್ಲಿ ಕೆಲವು ನ್ಯೂನ್ಯತೆಗಳಿವೆ. 'ಬಡವನಿಗೆ ಕಣ್ತುಂಬ ನಿದ್ದೆ-ಧನಿಕನಿಗೆ ಬಾರದು ನಿದ್ದೆ' ಎನ್ನುವುದು ಸರಿಯಲ್ಲ. ಬಡವನಿಗಾಗಲೀ, ಧನಿಕನಿಗಾಗಲೀ ಅವರಿಗೆ ಅವರದೇ ಸಮಸ್ಯೆಗಳಿರುತ್ತವೆ. ಬಡವರಾದ ಮಾತ್ರಕ್ಕೆ ಯಾವುದೇ ತಾಪತ್ರಯಗಳಿಲ್ಲದೆ ನೆಮ್ಮದಿಯಿರುತ್ತದೆ ಎಂಬುದು ಅಪ್ಪಟ ಸುಳ್ಳು. ಒಂದೊತ್ತಿನ ಊಟಕ್ಕಾಗಿ ಪಡುವ ದೈಹಿಕ ಶ್ರಮ ಅವನಿಗೆ 'ಕಣ್ತುಂಬ ನಿದ್ದೆ' ತರಬಹುದು, ಅಂದ ಮಾತ್ರಕ್ಕೆ ಅದೇ ನೆಮ್ಮದಿಯ ಬದುಕಲ್ಲ!

ಆರಂಭದಲ್ಲಿ ಒಬ್ಬ ಹುಡುಗ ಒಂದು ಹುಡುಗಿಯ ಹಿಂದೆ ಬಿದ್ದು ಐ ಲವ್ ಯು 'ಐ ಲವ್ ಯು' ಎಂದು ಹೇಳಿಕೊಳ್ಳುತ್ತಾ ಅವಳು ಹೋದ ಕಡೆಗಳಲ್ಲೆಲ್ಲ ಹೋಗುತ್ತಾನೆ. ಪಾರ್ಕ್, ಬಸ್‌ಸ್ಟಾಂಡ್, ಆಫೀಸ್ ಹೀಗೆ ಕೊನೆಗೊಂದು ದಿನ ಮನೆಗೇ ಹೋಗುತ್ತಾನೆ. ಇದನ್ನು ನೋಡಿದರೆ ಮಾಮೂಲಿ ಚಿತ್ರಗಳಲ್ಲಿರುವ ಹಾಗೆ ಇದು ಒಂದು ಪ್ರೇಮಿಗಳ ಕಥೆ ಎನಿಸುತ್ತದೆ. ಆದರೆ ಇದು ಒಂದು ರೀತಿಯ ವಿಚಿತ್ರ. ಇವರಿಬ್ಬರು ಮದುವೆಯಾಗಿ ಪ್ರೇಮಿಗಳ ರೀತಿಯಲ್ಲಿ ಬೀದಿಯಲ್ಲಿ ನಟಿಸಿ ಪ್ರೀತಿಯನ್ನು ಆಸ್ವಾದಿಸುವ (ತರಲೆ ಮಾಡಿ ಖುಷಿ ಪಡುವ) ಗಂಡ ಹೆಂಡತಿ. ಅವನು ಪುರಂದರ (ಧ್ಯಾನ್) ಇವಳು ಅಮೃತ (ರಮ್ಯ).

ಇವರಿಬ್ಬರೂ ಒಬ್ಬರನೊಬ್ಬರು ತುಂಬಾ ಪ್ರೀತಿಸುತ್ತಾರೆ. ಗಂಡ ತುಂಬ ಜಿಪುಣ, ಹೆಂಡತಿ ದುಂದುಗಾರ್ತಿ. ಇವನಿಗೆ ಕಾರ್ ಶೋರೂಂನಲ್ಲಿ ಕೆಲಸ (ಹಾರ್ಡ್‌ವೇರ್). ಅವಳಿಗೆ ಸಾಫ್ಟ್‌ವೇರ್ ಕಂಪನಿಯಲ್ಲಿ. ಇವರಿಬ್ಬರ ನಡುವೆ ನಿತ್ಯವೂ ಹುಸಿ ಜಗಳ, ಭಿನ್ನಾಭಿಪ್ರಾಯ, ತರಲೆ, ತುಂಟಾಟ, ನಂತರ ಇದನ್ನೆಲ್ಲ ಮರೆಸುವ ಪ್ರೀತಿ. ಅವನಿಗೆ ಭವಿಷ್ಯದ ಬಗ್ಗೆ ಚಿಂತೆ. ನಾಳೆಗಾಗಿ ಉಳಿಸಬೇಕು. ಒಂದು ಸ್ವಂತ ಮನೆ ಕಟ್ಟಬೇಕು. ಇವಳಿಗೆ ನಾಳೆ ಭವಿಷ್ಯದ ಬಗ್ಗೆ ನಂಬಿಕೆಯಿಲ್ಲ, ಇರುವವರೆಗೂ ಚೆನ್ನಾಗಿರಬೇಕು. ದೇಶವನ್ನೆಲ್ಲ ಸುತ್ತಾಡಬೇಕು. ಸ್ವಂತ ಮನೆಯ ಜಂಜಾಟಕ್ಕೆ ಹೋಗದೆ ಬಾಡಿಗೆ ಮನೆಯಲ್ಲೇ ಹಾಯಾಗಿರಬೇಕು. ಬೆಂಗಳೂರು ನಗರದ ಮಧ್ಯಮ ವರ್ಗದ ಉದ್ಯೋಗಸ್ಥ ದಂಪತಿಗಳ ಸಹಜ ಆಸೆ-ಆಕಾಂಕ್ಷೆಗಳನ್ನು ಚಿತ್ರಿಸಲು ಪ್ರಯತ್ನಿಸಲಾಗಿದೆ. ಇದು ಚಿತ್ರದ ಮೊದಲರ್ಧದ ಕಥೆ.

ಇತ್ತೀಚಿನ ದಿನಗಳಲ್ಲಿ ಸಿನಿಮಾಗಳಲ್ಲಿ ಎರಡು ರೀತಿಯ ಪ್ರವೃತ್ತಿಗಳು ದ್ವೇಷ ಮತ್ತು ಗೂಂಡಾಗಿರಿಯನ್ನು (ರೌಡಿಸಂ) ವೈಭವೀಕರಿಸುವ ಚಿತ್ರಗಳು, ಮತ್ತೊಂದು ತುಂಡು ಬಟ್ಟೆಗಳಲ್ಲಿ ಅತ್ಯಂತ ಅಶ್ಲೀಲವಾಗಿ ಚಿತ್ರಿಸುವ ಸಿನಿಮಾಗಳು ಈ ರೀತಿಯ ಸಿನಿಮಾಗಳನ್ನು ಖಂಡಿತವಾಗಿಯೂ ಮನೆ ಮಂದಿ ಎಲ್ಲಾ ಕುಳಿತು ನೋಡಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ "ಪ್ರೀತಿ"ಯನ್ನು, ಮಧ್ಯಮ ವರ್ಗ ಜನರ ಬದುಕಿನ ಜಂಜಡಗಳನ್ನೂ ಪ್ರಧಾನ ವಸ್ತುವಾಗಿಟ್ಟುಕೊಂಡು ಹೆಣೆಯಲ್ಪಟ್ಟ ಈ ಚಿತ್ರದ ಮೂಲಕ ಯುವಜನರನ್ನು, ದಂಪತಿಗಳನ್ನು ಮತ್ತು ಎಲ್ಲ ರೀತಿಯ ಪ್ರೇಕ್ಷಕರನ್ನು ತನ್ನತ್ತ ಸೆಳೆಯಲು ಪ್ರಯತ್ನಿಸಲಾಗಿದೆ.

ಅತ್ಯಂತ ದೊಡ್ಡ ಸದ್ದು ಮಾಡುತ್ತಾ ಅದ್ದೂರಿಯಿಂದ 100 ದಿನಗಳನ್ನು ಪೂರೈಸಿರುವ "ಜೋಗಿ" ಒಂದು ಕಡೆಯಾದರೆ ನಿಶ್ಯಬ್ದವಾಗಿ ಜನರನ್ನು ತನ್ನತ್ತ ಸೆಳೆದು 100 ದಿನಗಳತ್ತ ಅಮೃತಧಾರೆ ಸಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ತುಂಟಾಟ, ಚೇಷ್ಟೆ ದೃಷ್ಟಿಗಳು ಸ್ವಲ್ಪ ಅತಿಯೇ ಆಗಿವೆ. ಚಿತ್ರದ ನಾಯಕ ತನ್ನ ಆಸೆಯಂತೆ ಸಾಲ ಮಾಡಿ ಒಂದು ಮನೆಯನ್ನು ಕಟ್ಟಿಸುತ್ತಾನೆ. (ಇದು ಅಮೃತಾಳಿಗಾಗಿ ಕಟ್ಟಿಸಿದ ಅಮೃತಧಾರೆ). ಈ ನಡುವೆ ಹೆಂಡತಿಗೆ ಮೆದುಳು ಕ್ಯಾನ್ಸರ್ ಇರುವುದು ಪತ್ತೆಯಾಗಿ ಅವಳು ಹೆಚ್ಚು ದಿನ ಬದುಕುವುದಿಲ್ಲ ಎಂದು ಗೊತ್ತಾದಾಗ ಅವಳ ಆಸೆಗಳನ್ನು ಪೂರೈಸಲು ನಿರ್ಧರಿಸಿ ಸಾಲ ಮಾಡಿ ಕಟ್ಟಿದ ಮನೆಯನ್ನೂ ಮಾರಿ ಪ್ರವಾಸ ಕೈಗೊಳ್ಳುತ್ತಾನೆ. ಕೊನೆಯದಾಗಿ ಅಮರಪ್ರೇಮದ ಸಂಕೇತವಾಗಿರುವ ತಾಜ್ ಮಹಲ್ ಮುಂದೆ ಅಮೃತ ಪ್ರಾಣ ಬಿಡುತ್ತಾಳೆ.

ದೇವರು-ದಿಂಡರು, ಪೂಜೆ-ಪುರಸ್ಕಾರಗಳಲ್ಲಿ ನಂಬಿಕೆಯಿಲ್ಲದ ನಾಯಕಿಗೇ 'ಮಿದುಳು ಕ್ಯಾನ್ಸರ್' ಬಂದು ಸಾವನ್ನಪ್ಪುವುದನ್ನು ದೈವಭಕ್ತರು ತಪ್ಪಾಗಿ ಅರ್ಥೈಸುವ ಸಾಧ್ಯತೆಯಿರುವುದನ್ನು ಸ್ವತಃ ನಾಸ್ತಿಕರಾದ ನಾಗತಿಹಳ್ಳಿಯವರು ಗಮನಿಸಬೇಕಿತ್ತು. ಸಾವು-ನೋವು ಆಸ್ತಿ-ನಾಸ್ತಿಕರ ಮುಖ ನೋಡಿ ಬರುವುದಿಲ್ಲ ಎಂಬುದು ಬಿಂಬಿತವಾಗಬೇಕಿತ್ತು.

ಸದಭಿರುಚಿಯ ಚಿತ್ರಗಳಿಗೆ ಹೆಸರಾದ ನಾಗತಿಹಳ್ಳಿ ಚಂದ್ರಶೇಖರ್‌ರವರು ಮಹತ್ವಾಕಾಂಕ್ಷೆಯೊಂದಿಗೆ ನಿರ್ಮಿಸಿದ 'ಅಮೃತಧಾರೆ' ಯಶಸ್ವಿ ನೂರು ದಿನಗಳತ್ತ ಮುನ್ನಡೆದಿದೆ. ರಿಮೇಕು, ಗಿಮಿಕ್ಕು, ಗ್ರಾಫಿಕ್ಕುಗಳ ಹಾವಳಿಯ ಮಧ್ಯೆ ಸ್ವಮೇಕು 'ಅಮೃತಧಾರೆ' ಅರ್ಹವಾದ ಯಶಸ್ಸನ್ನೇ ಪಡೆದಿದೆ.

ನಾಗತಿಹಳ್ಳಿಯವರ ಆಶಯ, ಶ್ರಮ ಮೆಚ್ಚುವಂತಾದ್ದೇ. 'ಹೊಡಿಮಗ ಬಡಿ ಮಗ' ಎಂದು ಯುವಜನರನ್ನು ದಾಂಧಲೆಗೆ ಇಳಿಸುತ್ತಿರುವ ಈ ದಿನಗಳಲ್ಲಿ ಜೀವನ ಪ್ರೀತಿಯನ್ನು ಬಿಂಬಿಸುವ, ಮನುಷ್ಯನಾಗಿ ಹುಟ್ಟಿದ ಮೇಲೆ ಎಷ್ಟು ದಿನ ಬದುಕಿದ್ದೇವೆ ಎಂಬುದು ಮುಖ್ಯವಲ್ಲ, ಉಪಯೋಗವಿಲ್ಲದ ನೂರು ದಿನ ಬದುಕುವುದಕ್ಕಿಂತ - ಸಾರ್ಥಕವಾದ ಮೂರು ದಿನ ಬದುಕಿ ಎಂಬುದು ಚಿತ್ರದ ಸಂದೇಶ. ಜನಸಮೂಹವನ್ನು ಆಕರ್ಷಿಸಬಲ್ಲ, ಹಿಂದಿಯ ಮೇರು ನಟ ಅಮಿತಾಭ್ ಬಚ್ಚನ್‌ರ ಮುಖಾಂತರ ಈ ಸಂದೇಶ ನೀಡಿರುವುದು, ನಿರ್ದೇಶಕರ ನಿರೀಕ್ಷೆಯಂತೆ ಪ್ರೇಕ್ಷಕರ ಮನಮುಟ್ಟುತ್ತದೆ. ಕೇವಲ ಆರು ನಿಮಿಷಗಳ ಅವರ ಪಾತ್ರ ಪರಿಣಾಮಕಾರಿಯಾಗಿದೆ ಮತ್ತು ಚಿತ್ರಕ್ಕೆ ವಿಶೇಷ ಮೆರುಗು ತಂದಿದೆ.

ಇನ್ನುಳಿದಂತೆ ರಮ್ಯ ಮತ್ತು ಧ್ಯಾನ್‌ನದೇ ಪ್ರಧಾನ ಪಾತ್ರ. ರಮ್ಯ ಅಭಿನಯದಲ್ಲಿ ಗಮನ ಸೆಳೆದರೂ ಧ್ಯಾನ್ನ ನಮ್ಮೂರಿನ ಹುಡುಗ ಅನ್ನಿಸುವುದೇ ಇಲ್ಲ, ಮುಖದಲ್ಲಿ ಶ್ರೀಮಂತಿಕೆಯ ಕಳೆ ಎದ್ದು ಕಾಣುವುದರಿಂದ ಆಪ್ತವಾಗುವುದೇ ಇಲ್ಲ. ಉಳಿದಂತೆ ಇವರಿಬ್ಬರ ಸ್ನೇಹಿತರಾಗಿ ಮನೋರಂಜನೆಗಾಗಿಯೇ ಸೀಮಿತವಾಗಿರುವ ಮಂಡ್ಯರಮೇಶ, ಗಣೇಶ್, ಯಶವಂತ್ ಸರ್‌ದೇಶಪಾಂಡೆ, ರಾಜು ಅನಂತ್‌ಸ್ವಾಮಿ ಮತ್ತು ಅವಿನಾಶ್, ಭವ್ಯ. ಇದುವರೆಗೂ ತಮ್ಮ ಚಿತ್ರಗಳ ಮೂಲಕ ಅಮೇರಿಕಾ ಪ್ಯಾರೀಸ್‌ಗಳ ವಿದೇಶಿ ಪ್ರಯಾಣ ಮಾಡುತ್ತಿದ್ದ ನಾಗತೀಹಳ್ಳಿ ಈ ಬಾರಿ ಸ್ವದೇಶದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಪ್ರಯಾಣ ಮಾಡಿಸಿದ್ದಾರೆ. ಚಿತ್ರಕತೆ, ನಿರ್ಮಾಣ ನಿರ್ದೇಶನ ಸಂಭಾಷಣೆ, ಹಾಡುಗಳ ರಚನೆ ಎಲ್ಲವೂ ಇವರದ್ದೇ. ಮತ್ತೆ ಮತ್ತೆ ಕೇಳಬೇಕೆನಿಸುವ ಹಾಡುಗಳಿಗೆ ಮನೋಮೂರ್ತಿ ಸಂಗೀತ ನೀಡಿದ್ದಾರೆ.

ಹೆಚ್.ಆರ್.ನವೀನ್‌ಕುಮಾರ್.

...ಕೋಮುಭಾವನೆ ಪ್ರಚೋದಕ?

ಪುಟ 10 ರಿಂದ

ನಿಲ್ದಾಣದ ಅಧ್ಯಕ್ಷ ಸ್ಥಾನಕ್ಕೆ ನಾರಾಯಣ ಮೂರ್ತಿಯವರು ರಾಜಿನಾಮೆ ನೀಡಿರುವ ಹಿಂದೆ, ಅಲ್ಲಿ ಆಗಿರುವ ಅವ್ಯವಹಾರವನ್ನು ಮುಚ್ಚಿಡುವ ಪ್ರಯತ್ನ ಎಂದು ಸಿಪಿಐ(ಎಂ) ಹೇಳಿತ್ತು. ಇಂತಹ ಪ್ರಮುಖ ಅಂಶಗಳು ಬಹುತೇಕ ಪತ್ರಿಕೆಗಳಿಗೆ, ಟಿ.ವಿಗಳಿಗೆ ಸುದ್ದಿಯಾಗಲೇ ಇಲ್ಲ.

ಇದೇ ನೀತಿಯನ್ನು ಸೆಪ್ಟೆಂಬರ್ 29ರ ಮುಷ್ಕರದ ಸಂದರ್ಭದಲ್ಲಿಯೂ ಅನುಸರಿಸಲಾಗಿತ್ತು. ಮುಷ್ಕರದ ಮೊದಲು ಸಿಪಿಐ(ಎಂ), ವರ್ತಕ ಸಂಘಗಳು, ರೈತ ಸಂಘಗಳು, ಡಿಎಸ್‌ಎಸ್ ಮೊದಲಾದ ಸಂಘಟನೆಗಳು ನಡೆಸಿದ ಜಂಟಿ ಪತ್ರಿಕಾಗೋಷ್ಠಿ ಬಗ್ಗೆ ಸುದ್ದಿಯಾಗಲಿಲ್ಲ. ಆದರೆ ಮುಷ್ಕರ ಯಶಸ್ವಿಯಾದ ನಂತರ ಸುದ್ದಿ ಮಾಡದೆ ಬೇರೆ ದಾರಿ ಇರಲಿಲ್ಲ.



ಹೆಸರಾಂತ ಪತ್ರಕರ್ತ ಪಿ.ಸಾಯಿನಾಥ್ ಅವರ ಪ್ರಕಾರ 'ಮಾಧ್ಯಮಗಳು ಹೆಚ್ಚಾಗಿ ಆಳುವ ವರ್ಗಗಳ ಧೋರಣೆಯನ್ನೇ ಪ್ರತಿಪಾದಿಸುತ್ತವೆ', ಅವರು ಉದಾಹರಣೆಯನ್ನು ನೀಡುತ್ತಾ, 'ಗ್ಯಾಟ್ ಒಪ್ಪಂದ ಆಗುವುದಕ್ಕೆ ಮೊದಲು ಮಾಧ್ಯಮಗಳು ಪರ ಮತ್ತು ವಿರೋಧ ಎರಡೂ ಅಂಶಗಳನ್ನು ಚರ್ಚಿಸುತ್ತಿದ್ದವು. ಅಥವಾ ಕೆಲವು ಪತ್ರಿಕೆಗಳು ಪರವಾಗಿಯೂ ಕೆಲವು ವಿರೋಧವಾಗಿಯೂ ಇದ್ದವು. ಆದರೆ ಗ್ಯಾಟ್ ಒಪ್ಪಂದದ ನಂತರ ಬಹುತೇಕ ಎಲ್ಲಾ ಮಾಧ್ಯಮಗಳು ಸರಕಾರದ ಪರವಾದ ನೀತಿಯನ್ನೇ ಅನುಸರಿಸುತ್ತಿವೆ" ಎಂದು ಹೇಳಿದ್ದರು.

ಇಂತಹ ಸನ್ನಿವೇಶದಲ್ಲಿ ವಸ್ತುನಿಷ್ಠ ವರದಿಯನ್ನು ನೀಡುವ 'ಐಕ್ಯರಂಗ'ದಂತಹ ಪತ್ರಿಕೆಯ ಪ್ರಸಾರವನ್ನು ಹೆಚ್ಚು ಮಾಡಬೇಕಾಗುತ್ತದೆ. ಜನವಿಭಾಗಗಳ ನಡುವಿನ ಕೊಂಡಿಯಾಗಿರುವ ಸಾಮೂಹಿಕ ಸಂಘಟನೆಗಳನ್ನು ವಿಸ್ತರಿಸಬೇಕಾಗುತ್ತದೆ.

ಬಾಲಕೃಷ್ಣ ಶೆಟ್ಟಿ.

ಪಾಪಿ - ಪ್ರತಾಪಿ!

ಗೋವು ಕೊಂದವ
ಮಹಾಪಾಪಿ
ಗಾಂಧಿನ ಕೊಂದವ
ಪ್ರತಾಪಿ

- ನರಸಿಂಹಪ್ಪ, ಸಿಂಧನೂರು

ಅಂಕಿ ಸಂಖ್ಯೆ

ಆಹಾರ ಅಭದ್ರತೆಯ ಪರಿಸ್ಥಿತಿ ಕುರಿತು ವಿಶ್ವಸಂಸ್ಥೆ ಪ್ರಕಟಿಸಿದ ವರದಿಯ ಪ್ರಕಾರ, ಜಗತ್ತಿನಾದ್ಯಂತ ಹಸಿವು ಮತ್ತು ಅಪೌಷ್ಟಿಕತೆಯಿಂದ ಪ್ರತಿವರ್ಷವೂ 60 ಲಕ್ಷ ಮಕ್ಕಳು ಸಾಯುತ್ತಿದ್ದಾರೆ.

2000-02ರ ಅವಧಿಯಲ್ಲಿ 85.2 ಕೋಟಿ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದರು ಎಂದು ವರದಿ ಹೇಳಿದೆ.

ಗರ್ಭಿಣಿಯರಲ್ಲಿ ಕಾಣಿಸಿಕೊಳ್ಳುವ ತೊಂದರೆಗಳಿಂದ ಮತ್ತು ಹೆರಿಗೆಯ ಸಂದರ್ಭದಲ್ಲಿ ಪ್ರತಿವರ್ಷ 5,30,000 ಮಹಿಳೆಯರು ಸಾಯುತ್ತಾರೆ.

ಈ ಪೈಕಿ 100ರಲ್ಲಿ 99 ಸಾವುಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿಯೇ ಸಂಭವಿಸುತ್ತಿವೆ ಎಂದೂ ವರದಿ ತಿಳಿಸಿದೆ.

ಸಂಗ್ರಹ : ಶ್ರೀನಿವಾಸ.ಕೆ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH